ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 3-4
ಜನವರಿ 26, 2003 ಬೆಲೆ ರೂ.3.00

‘ಇನ್ನೊಂದು ಜಗತ್ತು ಸಾಧ್ಯ’



ಜಾಗತೀಕರಣ ವಿರೋಧಿ

ಜನಮೇಳ




ಹಿಂದುತ್ವದ ಉಗ್ರವಾದಿ ಸವಾಲು



ವಿದ್ಯುತ್ ಕೊರತೆ: ಸರ್ಕಾರದ ಜವಾಬ್ದಾರಿ






ಕಾಂಗ್ರೆಸ್‌ನಲ್ಲಿ ಬಂಡಾಯ ಮುಂದೇನು?

ಶಾಶ್ವತ ಬರ: ಎಲ್ಲೆಲ್ಲೂ ಹತಾಶೆಯ ಮೋಡಗಳೇ

ವಿಮೋಚನಾ ಸಮರದಲ್ಲಿ....

ಮೇಜರ್ ಜಯಪಾಲ್ ಸಿಂಗ್



ಆತ್ಮಕಥನ

12



ಹಿಂದಿನ ಸಂಚಿಕೆಯಲ್ಲಿ ಚಲುವೆಯ ಉದ್ದೇಶ ತಿಳಿದ ಜಯಪಾಲ್ ಸಿಂಗ್ ಬೆವತು ಒದ್ದೆಯಾಗಿ, ಕಾಲ ಕೆಳಗಿನ ಭೂಮಿ ಕುಸಿದಂತಾಗಿದ್ದು, ವಿಧೇಯತೆಯಿಂದ ಸಾಮ್ರಾಟನ ಸೇವೆ ಮಾಡಿದ ಕುಟುಂಬವೊಂದರ ಅಧಿಕಾರಿಯ ವಿಧೇಯತೆಯ ಬುಡುಮೇಲೆ ಮಾಡಲು ಯತ್ನಿಸಿರುವೆ, ನಿನ್ನನ್ನು ಪೋಲೀಸರಿಗೆ ಒಪ್ಪಿಸಬೇಕಾಗುತ್ತದೆ ಮಿಸ್ ಎಂಬ ಜಯಪಾಲರ ಸವಾಲ್, ಯುದ್ಧದ ತೀವ್ರ ಕಲರವರದಿಂದಾಗಿ ಲೆ. ಎಕ್ಸ್ ರನ್ನು ಮುಂದೆ ಕಂಡುಹಿಡಿಯಲಾದದ್ದು, ಲಿಬ್ಯಾ ಮರುಭೂಮಿಯಲ್ಲಿ ಭಾರತೀಯ ಸೈನಿಕರ ಬಂಡಾಯ ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ದೇಶದ್ರೋಹಿಗಳೇ ಆಡಳಿತದ ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸಿರುವುದು ... ಈಬಗ್ಗೆ ಓದಿರುವಿರಿ. ಮುಂದೆ...

ಕನ್ನಡಕ್ಕೆ: ವಿಶ್ವ ಕುಂದಾಪುರ

ಗುಂಡಿಗೆ 'ಗುಂಡಿಗೆ'ಯೊಡ್ಡಿದರು

ಯುದ್ಧದಲ್ಲಿ ಭಾರತೀಯ ಸಶಸ್ತ್ರ ಪಡೆಗಳು ವಿಧೇಯವಾಗಿ ಸೇವೆ ಸಲ್ಲಿಸಿದವು ಎಂಬ ಬ್ರಿಟಿಷರ ಹೇಳಿಕೆ ಸುಳ್ಳು ಎಂಬುದನ್ನು ಆ ಬಂಡಾಯ ಎತ್ತಿ ತೋರಿಸಿತು. ವಾಸ್ತವವಾಗಿ, ಭಾರತೀಯ ಸಶಸ್ತ್ರ ಪಡೆಗಳು ತಮ್ಮ ಜತೆಗಿಲ್ಲ ಎಂಬುದು ಎರಡನೇ ಮಹಾಯುದ್ಧದ ಆರಂಭದಿಂದಲೇ ಬ್ರಿಟಿಷರಿಗೆ ಗೊತ್ತಿತ್ತು. ಯುದ್ಧ ಮುಕ್ತಾಯವಾದ ಕೂಡಲೇ ಅವರು ತಮ್ಮ (ಬ್ರಿಟಿಷ್) ವಿರುದ್ಧ ಶಸ್ತ್ರ ಎತ್ತಿಕೊಳ್ಳುತ್ತಾರೆ ಎಂಬ ಅರಿವಿತ್ತು.

ಈಗ ಪ್ರಸ್ತಾಪಿಸಿದ ಮರುಭೂಮಿ ದಂಗೆ ನಡೆದಿದ್ದು ಹೇಗೆ?

ಭಾರತೀಯ ಚಾಲಕರು ಅತ್ಯಂತ ಕಷ್ಟಕರ ಸನ್ನಿವೇಶಗಳಲ್ಲಿ ಮರುಭೂಮಿಯಾದ್ಯಂತ ವಾಹನಗಳನ್ನು ಚಲಾಯಿಸಿಕೊಂಡು ಹೋದರು. ಭಾರಿ ಹೇರುಗಳನ್ನು ಹೊತ್ತ ವಾಹನಗಳನ್ನು ನೂರಾರು ಮೈಲಿ ದೂರ ಓಡಿಸಿದರು. ಮೇಲೆ ಉರಿಯುವ ಸೂರ್ಯ. ಕೆಳಗೆ ಕೆಂಡದಂಥ ಮರುಳುಗಾಡು. ವಸ್ತುಶಃ ಬೆಂಕಿಯ ಗೂಡಿನಲ್ಲಿ ವಾಹನ ಚಾಲನೆಯ ಅನುಭವ ಅವರದು! ಈ ರೀತಿಯ ಪ್ರಯಾಸಕರ ಪ್ರಯಾಣದ ಕೊನೆಯಲ್ಲಿ ಅವರೇ ತಮ್ಮ ವಾಹನಗಳಿಂದ ಸರಕುಗಳನ್ನು ಇಳಿಸಬೇಕಿತ್ತು. ಈ ಪಕ್ಷಪಾತದ ವಿರುದ್ಧ ಭಾರತೀಯ ಸೈನಿಕರು ತಿರುಗಿಬಿದ್ದರು. ಕೆಲಸ ಸ್ಥಗಿತಗೊಳಿಸಿದರು. ವಾಹನ ಓಡಿಸಲು ಹಾಗೂ ಸರಕುಗಳನ್ನು ಇಳಿಸಲು ನಿರಾಕರಿಸಿದರು.

ಯುದ್ಧ ಕಾರ್ಯಾಚರಣೆಯ ಸಂದರ್ಭದಲ್ಲಿ ಬಾಡಿಗೆ ಸೈನ್ಯವೊಂದು ಇಂತಹ ಕೃತ್ಯ ನಡೆಸುವುದು ಎಂದೂ ಕಂಡು ಕೇಳರಿಯದ ಸಂಗತಿ. ಆದರೆ ದ್ವಿತೀಯ ಮಹಾಯುದ್ಧದ ಭಾರತೀಯ ಸೈನಿಕರು ದೇಶದ ಗೌರವವನ್ನು ಎತ್ತಿ ಹಿಡಿಯುವ ವಿಚಾರದಲ್ಲಿ ಎಚ್ಚರಗೊಂಡಿದ್ದರು. ಎಂಥ ತ್ಯಾಗಕ್ಕಾದರೂ ಸಿದ್ಧರಾಗಿದ್ದರು.

ಗುಂಡಿಗೆ 'ಗುಂಡಿಗೆ'ಯೊಡ್ಡಿದರು

ಈ ಮುಷ್ಕರದಲ್ಲಿ ಸಾವಿರಾರು ಜನರನ್ನು ಬಂಧಿಸಲಾಯಿತು. ಭಾರತೀಯ ಮತ್ತು ಬ್ರಿಟಿಷ್ ಸೈನಿಕರ ನಡುವೆ ಗುಂಡಿನ ಕಾಳಗವೂ ನಡೆಯಿತು. ನೂರಾರು ಭಾರತೀಯ ಸೈನಿಕರನ್ನು ತಕ್ಷಣವೇ ವಿಚಾರಣೆಗೊಳಪಡಿಸಿ ಫೈರಿಂಗ್ ಸ್ಕ್ವಾಡ್(ಗುಂಡಿಟ್ಟು ಸಾಯಿಸುವ ತಂಡ) ಗಳಿಗೆ ಕಳಿಸಲಾಯಿತು. ಮೆಡಿಟರೇನಿಯನ್ ಸಮುದ್ರದ ಮಬ್ಬುಗಟ್ಟಿದ ಮುಂಜಾವಿನಲ್ಲಿ ಬ್ರಿಟಿಷ್ ಮಿಲಿಟರಿ ಪೋಲೀಸರು ಭಾರತೀಯ ಜನರ ಈ ಧೀರ ಪುತ್ರರನ್ನು ಗುಂಡಿಟ್ಟು ಕೊಂದು ಶವಗಳನ್ನು ಸಮುದ್ರ ಪಾಲು ಮಾಡಿದರು. ಅವರು ಎಂದೂ ಮರಳಿ ಬಾರದ ರೀತಿಯಲ್ಲಿ ಸಮುದ್ರದ ತಳ ಸೇರಿದರು. ಈ ಸೈನಿಕರು ದಿಟ್ಟತನದಿಂದ ಸಾವನ್ನು ಎದುರಿಸಿದರು. ಗುಂಡಿಗೆ 'ಗುಂಡಿಗೆ'ಯನ್ನು ಮುಂದೊಡ್ಡಿದ್ದರು. 'ಭಾರತ್ ಮಾತಾ ಕಿ ಜೈ' ಎಂಬ ಘೋಷಣೆಯನ್ನು ಹಾಕುತ್ತಾ ನೆಲಕ್ಕೊರಗಿದರು.

ಭಾರತೀಯ ರಕ್ಷಣಾ ಖಾತೆ ಪ್ರಕಟಿಸಿರುವ ಅಧಿಕೃತ ಯುದ್ಧ ಇತಿಹಾಸ ಭಾರತೀಯ ಪಡೆಗಳ ಹೋರಾಟದ ಗುಣಗಳನ್ನು ಸರಿಯಾಗಿಯೇ ಪ್ರತಿಬಿಂಬಿಸಿದೆ. ಆದರೆ, ಬ್ರಿಟಿಷ್ ಆಡಳಿತ ಕಾಲದಲ್ಲಿ, ಅದರಲ್ಲೂ ವಿಶೇಷವಾಗಿ ಎರಡನೇ ಮಹಾಯುದ್ಧದ ಸಮಯದಲ್ಲಿ ನಮ್ಮ ಸೈನಿಕರು ನಡೆಸಿದ ದೇಶಪ್ರೇಮಿ ಚಟುವಟಿಕೆಗಳ ಬಗ್ಗೆ ಈ 'ಇತಿಹಾಸ' ಮೌನ ತಳೆದಿದೆ.

ಶಿಸ್ತು, ತಾಂತ್ರಿಕ ಕೌಶಲ್ಯ ಮತ್ತು ತಂತ್ರ ಸಾಧನಗಳ ವಸಾಹತುಶಾಹಿ ಪರಿಸ್ಥಿತಿಗಳನ್ನು ಬಿಡಿಸಿ ಹೇಳದ ಹೊರತು, ಶಿಸ್ತಿನ ವಸಾಹತುಶಾಹಿ ಕೋಟೆಯನ್ನು ಬಾಡಿಗೆ ಸೈನ್ಯವು ಬೇಧಿಸಿದ ಈ ಶ್ರಮದಾಯಕ ಪ್ರಕ್ರಿಯೆಯನ್ನು ಶ್ರಮಪಟ್ಟು ಬಿಡಿಸಿ ಹೇಳದಿದ್ದರೆ, ಹೇಯ ದಬ್ಬಾಳಿಕೆಯನ್ನು ಪ್ರಜ್ಞಾಪೂರ್ವಕವಾಗಿ ಸಹಿಸಿಕೊಂಡು, ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಎಚ್ಚರಗೊಂಡು ನಡೆಸಿದ ದಿಟ್ಟ ಕಾರ್ಯಗಳನ್ನು ವಿವರಿಸದಿದ್ದರೆ ದ್ವಿತೀಯ ವಿಶ್ವ ಯುದ್ಧದ ಇತಿಹಾಸ ನಮ್ಮ ಸೈನಿಕರಿಗೆ, ನಮ್ಮ ಜನರಿಗೆ ಅಪೂರ್ಣವಾಗಿಯೇ ಉಳಿಯುತ್ತದೆ.

ಆದರೆ ನಮ್ಮ ದೇಶದಲ್ಲಿ ಜನಪರ ಆಡಳಿತೆಯೊಂದು ಅಧಿಕಾರಕ್ಕೆ ಬಂದಾಗ ಮಾತ್ರವೇ ಈ ಆಶಯ ನೆರವೇರೀತು ಅಷ್ಟೇ.

ಮೂಡಿತು ಅನುಮಾನ

ಅಂಬಾಲಾದಲ್ಲಿ ಆ ಮಹಿಳೆ ಮತ್ತು ಪಡ್ರೆ ಜತೆಗಿನ ಪ್ರಕರಣ ಬ್ರಿಟಿಷ್ ಅಧಿಕಾರಿಗಳಲ್ಲಿ ಅನುಮಾನ ಹುಟ್ಟಿಸಿತು. ಕರ್ತವ್ಯದ ಮೇಲೆ ಅಂಬಾಲಕ್ಕೆ ತೆರಳುವವರನ್ನು ಹೊರತುಪಡಿಸಿ ಎಲ್ಲಾ ವಿಭಾಗಗಳ ಸೈನಿಕರು ರೈಲ್ವೆ ನಿಲ್ದಾಣಕ್ಕೆ ಬರುವುದರ ಮೇಲೆ ಪೂರ್ಣವಾಗಿ ನಿರ್ಬಂಧ ಹೇರಲಾಯಿತು. ಪ್ರುಡೆನ್ಶಿಯಲ್ ಇನ್ಶೂರೆನ್ಸ್‌ನ ಗ್ಯಾನಿಯನ್ನು ನಾಗರಿಕ ಸಿಐಡಿ ವಿಚಾರಿಸಿ ನನ್ನ ಚಲನವಲನಗಳ ಬಗ್ಗೆ ಮಾಹಿತಿ ಪಡೆಯಲು ಯತ್ನಿಸಿತು. ಎಚ್ಚರಿಕೆಯಿಂದಿರುವಂತೆ ಭೀಮ್‌ಸಿಂಗ್ ನನಗೆ ಸೂಚಿಸಿದರು.

ಈ ಘಟನೆ ನಡೆದ ಕೇವಲ ಒಂದು ವಾರದೊಳಗೆ, 1942 ಜುಲೈನಲ್ಲಿ ನನ್ನ ಕಛೇರಿಯಲ್ಲಿ ಕುಳಿತು ಕೆಲಸ ಮಾಡುತ್ತಿದ್ದೆ. ಘಟಕ ಯುದ್ಧರಂಗಕ್ಕೆ ತೆರಳಬೇಕಿದ್ದರಿಂದ ಅದರ ಸೈನಿಕರ ಕೆಲವು ಕಾಗದ ಪತ್ರಗಳನ್ನು ಪೂರ್ಣಗೊಳಿಸುತ್ತಿದ್ದೆ. 323 ಇಂಡಿಯನ್ ಸಪ್ಲೈ ವಿಭಾಗವನ್ನು ಸಿದ್ಧಪಡಿಸಿ, ತರಬೇತುಗೊಳಿಸಿ ಅದರ ಆಫೀಸರ್ ಕಮಾಂಡಿಂಗ್ ಆಗಿ ಸಕ್ರಿಯ ಸೇವೆಗೆ ಅದನ್ನು ಒಯ್ಯಬೇಕಾಗಿತ್ತು. ನನ್ನನ್ನು ಈ ಕಮಾಂಡ್‌ನಿಂದ ತೆಗೆಯುವ ನಿರ್ಧಾರವನ್ನು ಸ್ವತಃ ಜಿ.ಎಚ್.ಕ್ಯೂ ತೆಗೆದುಕೊಳ್ಳಬಹುದಿತ್ತು. ಅಂಬಾಲಾದಲ್ಲಿನ ಕ್ಯಾಂಪ್ ಕಮಾಂಡೆಂಟ್ ತುಂಬಾ ತುರ್ತು ಸಂದರ್ಭದಲ್ಲಿ ನಡು ಮಧ್ಯಾಹ್ನ ಒಂದು ಸೆಲ್ಯೂಟ್ ಹೊಡೆದು ಸೀಲ್ ಆಗಿದ್ದ ಲಕೋಟೆಯೊಂದನ್ನು ನನಗೆ ಕೊಟ್ಟ. ಅದು ಕಮಾಂಡೆಂಟ್ ಕಛೇರಿಯಿಂದ ಬಂದಿತ್ತು. ಅದರ ಒಕ್ಕಣೆ ಹೀಗಿತ್ತು -

"ನಿಮ್ಮ ಸೆಕ್ಷನ್‌ನ ಕಮಾಂಡನ್ನು ಲೆಫ್ಟಿನೆಂಟ್... (ಒಬ್ಬ ಬ್ರಿಟಿಷ್)ಗೆ ತಕ್ಷಣ ಬಿಟ್ಟುಕೊಟ್ಟು ರಾತ್ರಿ 11 ಗಂಟೆಗೆ ಅಂಬಾಲಾ ಕಂಟೋನ್ಮೆಂಟ್ ಬಿಡುವ ರೈಲಿನಲ್ಲಿ ಜಬಲ್ಪುರಕ್ಕೆ ಹೊರಡಬೇಕು. ಜಬಲ್ಪುರದಲ್ಲಿ ಕರಾಚಿಗೆ ತೆರಳುವ 600 ಐ.ಓ. ರೂಪಾಯಿಗಳ ಡ್ರಾಫ್ಟನ ಚಾರ್ಜ್ ತೆಗೆದುಕೊಳ್ಳುವಿರಿ. ನಿಮ್ಮ ಪ್ರಯಾಣದ ಮುಂದಿನ ಜಾಗ ಯಾವುದೆಂಬುದನ್ನು ಕರಾಚಿಯಲ್ಲಿ ತಿಳಿಸಲಾಗುತ್ತದೆ. ಫೀಲ್ಡ್ ಕಿಟ್ ಇತ್ಯಾದಿಗಳನ್ನು ಪಡೆಯಿರಿ...."

ಮಧ್ಯಪೂರ್ವವೇ ಮುಂದಿನ ಗುರಿ ಎಂಬುದು ಸುಸ್ಪಷ್ಟವಾಗಿತ್ತು.

ನಾನು ಹೇಗಾದರೂ ತೊಲಗಿದರೆ ಸಾಕೆಂಬುದು ಕಮಾಂಡೆಂಟ್ ಬಯಕೆಯಾಗಿತ್ತು. ನಾನು ವಿಶ್ವಾಸಾರ್ಹನಲ್ಲವೆಂದು ಅನುಮಾನಿಸಲಾಗಿತ್ತು. ಆದರೆ ಅದನ್ನು ಪ್ರತಿರೋಧಿಸಲು ನಾನು ನಿಶ್ಚಯಿಸಿದೆ. ಹದಿನೈದೇ ನಿಮಿಷಗಳಲ್ಲಿ ನಾನು ಅಡ್ಜುಟಂಟ ಕಛೇರಿ ತಲುಪಿದೆ. ತಕ್ಷಣ ನನ್ನನ್ನು ಕಮಾಂಡೆಂಟ್ ಮುಂದೆ ಹಾಜರುಪಡಿಸಲಾಯಿತು.

"ಬಂದ ವಿಷಯವೇನು?" - ಅಡ್ಜುಟಂಟ್ ಕೇಳಿದ

"ಅದನ್ನು ನಾನು ಕರ್ನಲ್‌ಗೆ ಹೇಳುತ್ತೇನೆ" - ನಾನು ಥಟ್ಟನೆ ಉತ್ತರಿಸಿದೆ.

ನಾನು ಮುಂದುವರಿಸಿದೆ..

"ನೀವದನ್ನು ಮಾಡಲಾರಿರಿ ಸರ್. ನಾನು ಈ ವಿಭಾಗಕ್ಕೆ ಜಿ.ಎಚ್.ಕ್ಯೂ ನಿಂದ ನೇಮಿತವಾಗಿದ್ದೇನೆ. ಯಾವುದೇ ತುರ್ತು ಸಂದರ್ಭ ಉದ್ಭವವಾದರೆ ಶಿಬಿರದಲ್ಲಿ ಇದಕ್ಕೆಂದೇ ಮೀಸಲಿಟ್ಟಿರುವ 'ಅಧಿಕಾರಿಗಳ ಕೂಟ'ದಿಂದ ಒಬ್ಬ ಅಧಿಕಾರಿಯನ್ನು ಕಳಿಸಬೇಕು. ನನ್ನನ್ನು ಈ ಕಮಾಂಡ್‌ನಿಂದ ರಿಲೀವ್ ಮಾಡುವುದಕ್ಕೆ ಜಿ.ಎಚ್.ಕ್ಯೂ ಆದೇಶ ನನಗೆ ಬೇಕು ಸರ್"

ಕಮಾಂಡೆಂಟ್ ಸ್ಪಷ್ಟವಾಗಿಯೇ ತಪ್ಪು ಮಾಡಿರುವುದರಿಂದ ನನ್ನ ಕೇಳಿಕೆಯನ್ನು ದೃಢ ವಿಶ್ವಾಸದಿಂದ ಮಂಡಿಸಿದೆ. ಪ್ರತಿಭಟನೆಯ ಜತೆ ಜತೆಯಲ್ಲೇ.

"ಹೌದು ಮಿಸ್ಟರ್ ವರ್ಮಾ. ಇದೊಂದು ತಪ್ಪೆಂಬುದು ನನಗೆ ಗೊತ್ತು" - ಕಮಾಂಡೆಂಟ್ ನಿರ್ವಿಕಾರವಾಗಿ ಹೇಳಿದ.

ನಾನು "ಥ್ಯಾಂಕ್ಯೂ ಸರ್" ಎಂದವನೇ ಸೆಲ್ಯೂಟ್ ಮಾಡಿ ಹಿಂದೆ ತಿರುಗಿದೆ.

"ಲೆಫ್ಟಿನೆಂಟ್ ಹಸನ್‌ಗೆ ವಿವರಿಸಿ" ಎಂದು ಅಡ್ಜುಟಂಡ್‌ಗೆ ಕಮಾಂಡೆಂಟ್ ಸೂಚಿಸಿದ.

ಸಮವಸ್ತ್ರದಲ್ಲಿದ್ದ ಆ ಟೀ ಪ್ಲಾಂಟರ್ "ಆಲ್ ರೈಟ್ ಸರ್" ಎಂದು ಸೆಲ್ಯೂಟ್ ಹೊಡೆದ.

ಆದೇಶವನ್ನು ಕಮಕ್ ಕಿಮಕ್ ಎನ್ನದೆ ನಾನು ಒಪ್ಪಿಕೊಳ್ಳುವೆನೆಂದು ಕಮಾಂಡೆಂಟ್ ತಪ್ಪಾಗಿ ಭಾವಿಸಿದ್ದ. ಸಾಮಾನ್ಯವಾಗಿ ನಾನದನ್ನು ಒಪ್ಪಿಕೊಳ್ಳಬೇಕಿತ್ತು. ಆದರೆ ಸಂಘಟನಾ ಸಮಿತಿಯ ಅಂಬಾಲಾ ಕೇಂದ್ರವನ್ನು ನಿರ್ವಹಿಸುವ ನೇರ ಜವಾಬ್ದಾರಿ ನನ್ನ ಮೇಲಿತ್ತು. ಈ ರೀತಿ ಹಠಾತ್ ವರ್ಗದ ಸಿಡಿಲು ಬಡೀದೀತೆಂಬ ಎಳ್ಳಷ್ಟೂ ಸುಳಿವೂ ಇರಲಿಲ್ಲ. ಸಂಘಟನೆಯ ಹೊಣೆಯನ್ನು ಬೇರೆಯವರಿಗೆ ಹಸ್ತಾಂತರಿಸಲು ವ್ಯವಸ್ಥೆ ಮಾಡಲು ನನಗೆ ಕನಿಷ್ಠ ಎರಡು ದಿನಗಳಾದರೂ ಬೇಕು.

ಲೇಡಿ ಟಿಕೆಟ್ ಕಲೆಕ್ಟರ್‌ಗಳ ಕ್ವಾರ್ಟರ್ಸ್‌ನಲ್ಲಿ ಸಂಜೆ ಒಬ್ಬ ಫ್ಲೈಟ್ ಲೆಫ್ಟಿನೆಂಟ್‌ಗೆ ಸಂಘಟನೆಯ ಚಾರ್ಜ್ ವಹಿಸಿಕೊಟ್ಟೆ. ಆತ ಸ್ಥಳೀಯ ವಾಯುಪಡೆ ಕೇಂದ್ರ ಫ್ಲೈಟ್ ಲೆಫ್ಟಿನೆಂಟ್. ಶತ್ರು ನನ್ನ ಬಗ್ಗೆ ತಿಳಿದುಕೊಂಡಿರುವುದರಿಂದ ಸಂಘಟನೆಯ ಎಲ್ಲಾ ನೇರ ಕೆಲಸಗಳಿಂದ ನನ್ನನ್ನು ರಿಲೀವ್ ಮಾಡಬೇಕೆಂದು ನಿರ್ಧರಿಸಲಾಯಿತು. ಹಾಗೂ ಇನ್ನು ಮುಂದೆ ಬ್ರಿಟಿಷರ ಜತೆಗಿನ ದೈನಂದಿನ ವರ್ತನೆಯಲ್ಲಿ 'ಯೆಲ್ಲೊ' (ಹಳದಿ) ಪಾತ್ರ ವಹಿಸಬೇಕೆಂದು ಸೂಚಿತವಾಯಿತು.

(ಮುಂದುವರಿಯುವುದು)

ಗಮನಿಸಿ

ಕಾಮ್ರೆಡ್ ಸೂರಿಯವರ ಕುರಿತ ವಿಶೇಷ ಸಂಚಿಕೆ ಪ್ರಕಟಗೊಳ್ಳುತ್ತಿರುವುದರಿಂದ ಮುಂದಿನ ವಾರ ಪತ್ರಿಕೆ ಪ್ರಕಟವಾಗುವುದಿಲ್ಲ. ಸಹಕರಿಸಿ

- ಸಂ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಜನವರಿ 18 ರಿಂದ 19, 2003

- ಸಾಯಿನಾಥರ ಫೋಟೋ ಪ್ರದರ್ಶನ AIDWA ದಿಂದ ರವೀಂದ್ರ ಕಲಾಕ್ಷೇತ್ರದಲ್ಲಿ

ಜನವರಿ 20 ರಿಂದ 25, 2003

- ಕೃಷ್ಣ ಸರ್ಕಾರದ ನೀತಿಗಳ ವಿರುದ್ಧ ಸಿಪಿಐ(ಎಂ) ಪ್ರಚಾರಾಂದೋಲನ. ಜಾಥಾ, ಮೆರವಣಿಗೆ, ಸಭೆಗಳು

ಜನವರಿ 23, 2003

- ಹಮಾಲಿ ಕಾರ್ಮಿಕರ ರಾಜ್ಯ ಸಮಾವೇಶ ಟೌನ್‌ಹಾಲ್, ಬೆಂಗಳೂರಲ್ಲಿ ಬೆಳಿಗ್ಗೆ 10 ಗಂಟೆಗೆ

ಜನವರಿ 30 ರಿಂದ ಫೆಬ್ರವರಿ 02, 2003

- ಕಟ್ಟಡ ಕಾರ್ಮಿಕರ ಅಖಿಲ ಭಾರತ ಸಮ್ಮೇಳನ, ನಾಗರಕೋಯಿಲ್ ತಮಿಳುನಾಡು

(ನಿಮ್ಮ ಪ್ರದೇಶಗಳಲ್ಲಿ ನಡೆಯಲಿರುವ ಪ್ರಮುಖ ಕಾರ್ಯಕ್ರಮ/ ಚಳುವಳಿಗಳ ಬಗ್ಗೆ ಮುಂಚಿತವಾಗಿ ತಿಳಿಸಿರಿ)

ಬಾಬಾಬುಡನ್ ಗಿರಿ: ಜನಜಾಗೃತಿಯ ಉತ್ತರ

ದತ್ತ ಜಯಂತಿ ನೆಪದಲ್ಲಿ ಬಾಬಾಬುಡನ್ ಗಿರಿಯಲ್ಲಿ ಬಾಬಾಬುಡನ್ ಸ್ವಾಮಿ ದತ್ತ ಪೀಠವನ್ನು ಇನ್ನೊಂದು ಅಯೋಧ್ಯಾವನ್ನಾಗಿ ಮಾಡುವ ಬೆದರಿಕೆ ಹಾಕಿ ಹೋದ ವಿಶ್ವ ಹಿಂದೂ ಪರಿಷತ್ ನಾಯಕ ಪ್ರವೀಣ್ ತೊಗಾಡಿಯಾನ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಕರ್ನಾಟಕದ ಪೊಲೀಸರು ದಾಖಲಿಸಿಕೊಂಡಿದ್ದಾರೆ. ಮುಂದಿನ ವರ್ಷ ದತ್ತಜಯಂತಿಯನ್ನು ನಿಷೇಧಿಸುವ ಬಗ್ಗೆ



ವಿಚಾರ ಮಾಡುತ್ತಿರುವುದಾಗಿ ಕಾನೂನು ಸಂಸದೀಯ ಸಚಿವರಾದ ಡಿ.ಬಿ. ಚಂದ್ರೇಗೌಡರವರು ಹೇಳಿಕೆ ನೀಡಿದ್ದಾರೆ. ಪೂಜೆಯ ಅವಕಾಶ ನೀಡಿದ್ದನ್ನು ಸಂಘ ಪರಿವಾರ ದುರುಪಯೋಗ ಮಾಡಿರುವುದನ್ನು ಗುರುತಿಸಿದ್ದಾರೆ. ಕರ್ನಾಟಕದಲ್ಲಿ ಕಾನೂನು ಪಾಲಿಸುವ ಸರ್ಕಾರ ಕೊಂಚವಾದರೂ ಜೀವ ಇದೆ ಎಂಬುದನ್ನು ಸಾಬೀತುಪಡಿಸ ಬಯಸಿದ್ದಾರೆ. ಅದೇ ಜಿಲ್ಲೆಯವರಾದ ಮಹಿಳಾ ಕಲ್ಯಾಣ ಇಲಾಖೆ ಸಚಿವೆ ಮೊಟಮ್ಮನವರು ತೊಗಾಡಿಯಾ ಅತ್ತ ಕಾಲಿಟ್ಟರೆ ಕಾಲು ಮುರಿಸುವುದಾಗಿ ಹೇಳಿದ್ದು ವರದಿಯಾಗಿದೆ. ಮತ್ತು ಸೇಡಂ, ಯಡಿಯೂರಪ್ಪಗಳ ಚಡ್ಡಿ ಪಡೆ ಬೀದರ್‌ನಿಂದ ಬೆಂಗಳೂರಿನ ತನಕ ಏಕಕಂಠದಿಂದ ಇದನ್ನು ಖಂಡಿಸಿಯೂ ಆಗಿದೆ. ಅದು ಗೂಂಡಾ ಸಂಸ್ಕೃತಿ ಎಂದು ಕರೆದು ತಾವು ಸಾಚಾ ಸಂಸ್ಕೃತರೆಂದು ಮಾನ ಬರಿಸಿಕೊಳ್ಳಲು ಹೆಣಗುತ್ತಿರುವುದೂ ಆಗಿದೆ. ದೇಶದ ಇತಿಹಾಸದಲ್ಲಿ ಅಯೋಧ್ಯಾ ದುರ್ಘಟನೆ ಒಂದು ಮರೆಯಲಾಗದ ದುಃಸ್ವಪ್ನ, ಸಾವಿರಾರು ಜನರನ್ನು ಮಾರಣ ಹೋಮಗೈದ ಫ್ಯಾಸಿಸ್ಟ್ ಬರ್ಬರತೆಯ ಉದಾಹರಣೆ ಅದು. ಇಂತಹದ್ದನ್ನು ಸಮರ್ಥಿಸಿಕೊಳ್ಳಲು ಚಡ್ಡಿ ಪಡೆಗೆ ನಾಚಿಕೆಯೂ ಇಲ್ಲ. ಮಾನವೀಯತೆ ಕಳೆದುಕೊಂಡ ಮೃಗೀಯ ಪ್ರವೃತ್ತಿ ಬಗ್ಗೆ ಹೆಮ್ಮೆ ಬೇರೆ.

ಸರ್ಕಾರದ ಕ್ರಮ ಮತ್ತು ಸಚಿವರುಗಳ ಹೇಳಿಕೆ ಈಚಿನ ದಿನಗಳಲ್ಲಿ ಗಮನಾರ್ಹ. ನಿಜ ಇಂತಹ ಕ್ರಮಗಳು, ಜನರನ್ನು ಜಾಗೃತಿಗೊಳಿಸುತ್ತಾ ಜೊತೆಯಲ್ಲೇ ಬರಬೇಕು ಎಂಬುದನ್ನು ಅವರು ಅರಿಯಬೇಕು. ಸತತವಾಗಿ ಬಜರಂಗದಳದ ಪಡೆಗಳ ಅವ್ಯಹಾರಗಳಿಗೆ ಮುಕ್ತ ದಾರಿ ನೀಡಿ ಬಾಬಾಬುಡನ್‌ಗಿರಿಯ ಗುಹೆಯನ್ನು ಒಂದು ವಿವಾದವೆನ್ನುವಂತೆ ಜನಮನದಲ್ಲಿ ಹೋಗಿಸಲು ಅವಕಾಶ ನೀಡಿದವರು ಯಾರು? ಖಾವೀ ಪಡೆಗಳ ಅಜೆಂಡಾಗಳನ್ನು ಹಂತಹಂತವಾಗಿ ಜಾರಿಗೊಳಿಸಲು ಕಾಂಗ್ರೆಸ್ ಸರ್ಕಾರವೇ ಕ್ರಮವಹಿಸಿ ಈಗ ಅದನ್ನು ಅಯೋಧ್ಯೆಯನ್ನಾಗಿಸುವ ಹಂತಕ್ಕೆ ಪಿತೂರಿ ಹೋಗಲು ಬಿಟ್ಟವರೂ ಇವರೇ ಎಂಬುದು ಜಗಜ್ಜಾಹೀರು.

ಕೋಮುವಿಘಟನೆಯ ವಿಷವನ್ನು ಎಲ್ಲೆಡೆ ಚೆಲ್ಲುತ್ತಿರುವಾಗ, ಜನಮನದತ್ತ ಹೋಗದಂತೆ ಪ್ರತ್ಯುತ್ತರ ನೀಡಿ, ದುಷ್ಟ ಅಂಜೆಂಡಾ ಬಯಲಿಗೆಳೆಯುವ ಮೌನ ಸಮ್ಮತಿ ತೋರಿದವರಾರು? ವಿಂದೂ ಇಲ್ಲದೆ ದತ್ತ ಜಯಂತಿ ಆಚರಣೆಯನ್ನು ಮುಂದುವರಿಸಲು, ದತ್ತ ಮಾಲೆಯೆಂಬ ವಿನೂತನ ಕಾರ್ಯಕ್ರಮದ ಮೂಲಕ ಹಳ್ಳಿಹಳ್ಳಿಗಳಲ್ಲಿ ಭಜರಂಗದಳ ಬೇರೂರಲು, ಚಿಕ್ಕಮಗಳೂರಿನಲ್ಲಿ ಕೋಮುಗಲಭೆ ಎಬ್ಬಿಸಲು ಬಿಟ್ಟವರಾರು? ದತ್ತವಿಗ್ರಹ ಗುಹೆಯೊಳಗೆ ಒಯ್ದು, ಪೂಜೆ ನಡೆಸಲು, ಯಜ್ಞ ಮಾಡಲು ಅವಕಾಶ ಕಲ್ಪಿಸಿದವರಾರು?

ಇರಲಿ, ಈಗಲಾದರೂ ಸರ್ಕಾರ ನಿಜವಾಗಿಯೂ ಸಂಘ ಪರಿವಾರದ ಪಿತೂರಿಗಳನ್ನು ಗಂಭೀರವಾಗಿ ಅರಿತು, ದೃಢ ಕ್ರಮ ಕೈಗೊಳ್ಳಲಿ ಎಂಬುದು ಶಾಂತಿ ಬಯಸುವ ಜನರ, ಸೌಹಾರ್ದ ಸಂಸ್ಕೃತಿ ಕಾಯುವ ಎಲ್ಲರ ಆಶಯ. ಅವರು ಆಡಿದ್ದನ್ನು ಮಾಡಿ ತೋರಿಸಬೇಕು ಅಷ್ಟೇ.

ಕೃಷ್ಣರವರ ಸರ್ಕಾರ ಇಂತಹ ನಿಲುವು ತಳೆಯಲು ಪರಿಸ್ಥಿತಿಯ ಒತ್ತಡವೂ ಇದೆ. ಸಂಘಪರಿವಾರದ ಅಟ್ಟಹಾಸಕ್ಕೆ ಪ್ರತ್ಯುತ್ತರದ ಧ್ವನಿಗಳು ದೃಢವಾಗಿ ಮೂಡಿಬರುತ್ತಿದೆ. ಈಚಿಗಿನ ದತ್ತ ಮಾಲೆ, ದತ್ತ ಜಯಂತಿಗಳ ಬೆನ್ನ ಹಿಂದೆಯೇ ಬಾಬಾಬುಡನ್‌ಗಿರಿಯಲ್ಲೇ ಯುವಕರಿಂದ ಪರ್ಯಾಯ ದತ್ತ ಜಯಂತಿ, ಯಜ್ಞ - ಕಾರ್ಯಕ್ರಮಗಳು, ಸಿಪಿಐ-ಕಾಂಗ್ರೆಸ್ ಕೂಡಿದ್ದ ಜಂಟಿ ರ್‍ಯಾಲಿ, ಪ್ಲಾಂಟೇಶನ್ ಕಾರ್ಮಿಕರ ಅಖಿಲಭಾರತ ಸಮ್ಮೇಳನ ಪ್ರಚಾರ, ಬೃಹತ್ ಬಹಿರಂಗಸಭೆ, ರ್‍ಯಾಲಿ, ಮತ್ತು ವಿಶೇಷವಾಗಿ ಡಿಸೆಂಬರ್ 29ರ ಬಾಬಾಬುಡನ್‌ಗಿರಿ ಸೌಹಾರ್ದ ವೇದಿಕೆಯಿಂದ ಇಡೀ ದಿನ ನಡೆದ ಕಾರ್ಯಕ್ರಮಗಳು. ಸರ್ಕಾರ - ಆಳುವ ಕಾಂಗ್ರೆಸ್ ಪಕ್ಷ ಒಂದು ನಿಲುವು ತಾಳದೇ ಹೋದರೆ ಜನರೆದುರು ಬಯಲಾಗುವ ಭಯ.

ಡಿಸೆಂಬರ್ 29 : ಖಾವಿ ಪಡೆಗಳಿಗೆ ಜನತೆಯ ಸವಾಲು

ಡಿಸೆಂಬರ್ 29ರ ಬಾಬಾಬುಡನ್ ಗಿರಿ ಸೌಹಾರ್ದ ವೇದಿಕೆಯ ಚಿಕ್ಕಮಗಳೂರಿನ ಕಾರ್ಯಕ್ರಮ ಮತ್ತು ಅಲ್ಲಿ ಮೊಳಗಿದ ಧ್ವನಿ ಬಹಳ ಮಹತ್ವದ್ದು. ಕರ್ನಾಟಕದಲ್ಲಿ ಮಾನವೀಯತೆಯುಳ್ಳ, ದೇಶವನ್ನು ಗಾಢವಾಗಿ ಪ್ರೀತಿಸುವ ವಿಚಾರವಂತ ಪ್ರಮುಖರು ಭಾಗವಹಿಸಿದ್ದು ವಿಶೇಷ. ಸಮಾಜದ ಎಲ್ಲಾ ರಂಗಗಳ ಎಲ್ಲಾ ವಿಭಾಗಗಳ ವಿಸ್ತೃತ ಪ್ರತಿನಿಧಿಗಳು ದೊಡ್ಡಸಂಖ್ಯೆಯಲ್ಲಿ ಜನತೆ ಭಾಗವಹಿಸಿದ್ದು ಪೂರ್ಣ ಕಾಳಜಿಯೊಂದಿಗೆ ನಿಂತು ಸ್ಪಂದಿಸಿದರು. ಗುಜರಾತ್ ಚುನಾವಣಾ ಫಲಿತಾಂಶ ಬಾರಿಸಿದ ಎಚ್ಚರಿಕೆಯ ಗಂಟೆ ಎಲ್ಲರಲ್ಲೂ ಆತಂಕ ಮೂಡಿಸಿದೆ. ಮತ್ತು ಇದೇ ಸೂತ್ರವನ್ನೇ ದೇಶದಾದ್ಯಂತ ವಿಸ್ತರಿಸುವ ಸಂಘಪರಿವಾರದ ತೀವ್ರ ಬೆದರಿಕೆಗಳು ಮತ್ತು ಹುರುಪು ನಿಜಕ್ಕೂ ಕಳವಳಕಾರಿಯಾಗಿದೆ. ಇದು ನಾಡಿನ ಪ್ರಜ್ಞಾವಂತರನ್ನು ಗಂಭೀರವಾಗಿ ಕಾಡಿದೆ. ಈಗ ಬಾಬಾಬುಡನ್‌ಗಿರಿ ಪ್ರಶ್ನೆಯ ಪ್ರತಿಕ್ರಿಯೆಯಲ್ಲಿ ವ್ಯಕ್ತಗೊಂಡಿದೆ. ಈ ಸಮಾವೇಶ ಸಂಘಪರಿವಾರಕ್ಕೂ ಸರಕಾರಕ್ಕೂ ನೀಡಿದ

ಪುಟ 11 ಕ್ಕೆ

ಈ ವಾರ ಕರ್ನಾಟಕ ಒಂದು ನೋಟ — ಎಸ್.ವೈ.ಗುರುಶಾಂತ್

ವಿದ್ಯುತ್ ಕೊರತೆ : ಸರ್ಕಾರದ್ದೇ ಸಿಂಹಪಾಲಿನ ಹೊಣೆ

ಮುಖ್ಯಮಂತ್ರಿಗಳಿಗೆ ಸಿಪಿಐ(ಎಂ) ಬಹಿರಂಗ ಪತ್ರ

ರಾಜ್ಯದಲ್ಲಿನ ವಿದ್ಯುತ್ ಸರಬರಾಜಿನ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ಸರ್ಕಾರ ಸರ್ವಪಕ್ಷಗಳ ಸಭೆ ಕರೆದಿತ್ತು. ಈ ಸಭೆಗೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಭಾಗವಹಿಸಿದ್ದರು. ಸಭೆಯಲ್ಲಿ ಮಂಡಿಸಿದ ಅಭಿಪ್ರಾಯಗಳು ಇಲ್ಲಿವೆ.

ಸರಕಾರವು ವಿದ್ಯುತ್ ಸರಬರಾಜು ಪರಿಸ್ಥಿತಿಯ ಕುರಿತು ಚರ್ಚಿಸಲು ಸರ್ವಪಕ್ಷಗಳ ಮುಖಂಡರ ಸಭೆ ಕರೆದಿರುವದು ಸರಿಯಷ್ಟೆ. ಸರಕಾರ ಈಗಾಗಲೇ ಕೃಷಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಲೋಡ್‌ಶೆಡ್ಡಿಂಗ್ ವೇಳಾ ಪಟ್ಟಿಯನ್ನು ಪ್ರಕಟಿಸಿದೆ. ಇದರಿಂದಾಗಿ ಹಗಲು ಎಂಟು ಘಂಟೆ ವಿದ್ಯುತ್ ಪೂರೈಕೆಯ ತನ್ನ ವಾಗ್ದಾನದಿಂದ ಸರ್ಕಾರ ಹಿಂದೆ ಸರಿದಿದೆ. ಕೃಷಿ ಕೆಲಸದಲ್ಲಿ, ಒಂದು ತಂಡವಾಗಿ ಕೂಲಿಕಾರರು ಮತ್ತು ರೈತರು ಕೂಡಿ ಕೆಲಸ ಮಾಡುವ ಅನಿವಾರ್ಯತೆ ಇದೆ. ಭತ್ತದ ನಾಟಿಯಾಗಲಿ, ರೇಷ್ಮೆ ತೆಂಗು, ಶೇಂಗಾ, ಹತ್ತಿ ಮತ್ತಿತರ ಬೆಳೆಗಳಿಗೆ ನೀರು ಪೂರೈಸುವಾಗ ಬೆಳಕು ಬೇಕೆಬೇಕು. ಆದ್ದರಿಂದ ವಿದ್ಯುತ್ ಲಭ್ಯತೆಯ ಕೊರತೆಯಿಂದಾಗಿ ಕೃಷಿ ಕೆಲಸಕ್ಕೆ ಭಾರಿ ತೊಂದರೆಯಾಗಿದೆ. ಬೆಳಗಿನ ನಾಲ್ಕರಿಂದ ಸತತವಾಗಿ ಎಂಟು ಘಂಟೆ ವಿದ್ಯುತ್ ಪೂರೈಕೆ ಮುಂದುವರಿಸಿದರೆ ಮಾತ್ರ ಅನುಕೂಲವಾಗುವುದು.

ಸಂಕಟ ಹಂಚಿ

ಲೋಡ್ ಶೆಡ್ಡಿಂಗ್ ಗ್ರಾಮಾಂತರ ಪ್ರದೇಶಕ್ಕೆ ಮಾತ್ರ ಹೇರಿ, ಅದೂ ಹನ್ನೆರಡು ಘಂಟೆಗಳಷ್ಟು ದೀರ್ಘಕಾಲ ನಿಗಧಿಪಡಿಸಿರುವುದು ಪಕ್ಷಪಾತದ ತೀರ್ಮಾನವಾಗಿದೆ. ಬದಲು ವಿದ್ಯುತ್ತಿನ ಕೊರತೆಯ ಹಿನ್ನೆಲೆಯಲ್ಲಿ ಸಂಕಟವನ್ನು ಹಂಚಿಕೊಳ್ಳುವ ಅನಿವಾರ್ಯತೆಯಿದೆ. ಆದ್ದರಿಂದ ಪಟ್ಟಣಗಳಲ್ಲೂ ಲೋಡ್ ಶೆಡ್ಡಿಂಗ್ ಮೂಲಕ ಕೊರತೆ ತುಂಬಿಕೊಳ್ಳಬಹುದು.

ಖಾಸಗೀಕರಣದಿಂದ ಹಾನಿಕಾರಕ ನೀತಿ

ಸರಕಾರವು ಕರ್ನಾಟಕ ವಿದ್ಯುತ್ ಶಕ್ತಿ ವಿತರಣಾ ನೀತಿಯನ್ನು ಅಂಗೀಕರಿಸಿದೆ. ಇದೊಂದು ವಿದ್ಯುತ್ ವಲಯಕ್ಕೆ ಹಾನಿಕಾರಕವಾದ ತೀರ್ಮಾನವಾಗಿದೆ. ಅಮೆರಿಕ, ಬ್ರಿಟನ್‌ಗಳಲ್ಲಿ ವಿದ್ಯುತ್ ಕ್ಷೇತ್ರ ಖಾಸಗೀಕರಣದ ಹಾವಳಿಯಿಂದ ತತ್ತರಿಸುತ್ತಿವೆ. ಜಗತ್ತಿನಾದ್ಯಂತ, ದೇಶದಾದ್ಯಂತ ಖಾಸಗೀಕರಣ ವಿವಾದಕ್ಕೆ ಒಳಗಾಗಿದೆ. ವಿದ್ಯುತ್ ವಲಯದ ತಜ್ಞರು ಈ ಖಾಸಗೀಕರಣ ನೀತಿಯನ್ನು ಪುನರ್ ಪರಿಶೀಲಿಸಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. **ವಿದ್ಯುತ್‌ಶಕ್ತಿ ಖಾಸಗೀಕರಣ ನೀತಿಯನ್ನು ಸರ್ವ ಪಕ್ಷಗಳ ಸಭೆಯಲ್ಲಿ ಚರ್ಚಿಸಲು ವಿಷಯವಾಗಿ ಪರಿಗಣಿಸಬೇಕೆಂದು ಸಿ.ಪಿ.ಐ(ಎಂ) ಕೆಳಕಂಡ ಕಾರಣಗಳಿಗಾಗಿ ಒತ್ತಾಯಿಸಿತು.**

1. 1991ರಿಂದ ಖಾಸಗೀ ವಲಯದ ಮೇಲೆ ವಿದ್ಯುತ್ ಉತ್ಪಾದನೆಗೆ ಒತ್ತು ನೀಡಲಾಗಿದೆ. ಅಮೆರಿಕ, ಹಾಂಗ್‌ಕಾಂಗ್ ಮೊದಲಾದ ದೇಶಗಳ ಹತ್ತಾರು ಕಂಪನಿಗಳ ಜೊತೆ ಮಾಡಿಕೊಂಡ ತಿಳುವಳಿಕೆ ಒಪ್ಪಂದಗಳು (ಎಂ.ಓ.ಯು.) ಯಾವುದೂ ಫಲ ನೀಡಲಿಲ್ಲ. ಈ ಕಂಪನಿಗಳು ಹತ್ತಾರುಸಾವಿರ ಮೆಗಾವ್ಯಾಟ್ ವಿದ್ಯುತ್ ಸಾಮರ್ಥ್ಯ ಸೃಷ್ಟಿಯಾಗಿ ರಾಜ್ಯದಲ್ಲಿ ವಿದ್ಯುತ್ ಸುಗ್ಗಿಯಾಗಿಬಿಡುವುದೆಂಬ ಭ್ರಮೆಗಳನ್ನು ಸೃಷ್ಟಿ ಮಾಡಲಾಗಿತ್ತು. ಇಂತಹ ನಿರೀಕ್ಷೆಯಲ್ಲಿದ್ದ ರಾಜ್ಯ ಸರ್ಕಾರಗಳು ವಿದ್ಯುತ್ ಉತ್ಪಾದನೆಯ ಮೇಲೆ ಹೂಡುತ್ತಿದ್ದ ಸರ್ಕಾರಿ ಬಂಡವಾಳವನ್ನು ತಗ್ಗಿಸಿದವು. ಇದರಿಂದಾಗಿ ರಾಜ್ಯದಲ್ಲಿ ವಿದ್ಯುತ್ ಕೊರತೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಗಿದೆ. ಇದೇ ಇಂದಿನ ವಿದ್ಯುತ್ ಬಿಕ್ಕಟ್ಟಿನ ಮೂಲ ಕಾರಣವಾಗಿದೆ. ಇಲ್ಲಿಯವರೆಗೆ 2935 ಮಿಲಿಯನ್ ಯೂನಿಟ್ ಮಾತ್ರ ಅಂದರೆ ಕರ್ನಾಟಕದ ಬೇಡಿಕೆಯ ಕೇವಲ ಶೇ. 9ರಷ್ಟು ಮಾತ್ರ ಎಲ್ಲಾ ಖಾಸಗೀ ಮೂಲಗಳಿಂದ ಉತ್ಪಾದನೆ ಮಾಡಲಾಗಿದೆ.

2. ಸರಕಾರ ಸ್ವತಂತ್ರ ವಿದ್ಯುತ್ ಉತ್ಪಾದಕ (ಐ.ಪಿ.ಪಿ)ರಿಂದ ವಿದ್ಯುತ್ ಖರೀದಿ ಮಾಡುತ್ತಿದೆ. ಕರ್ನಾಟಕದಲ್ಲಿ ಸರಕಾರಿ ಸ್ವಾಮ್ಯದ ಕರ್ನಾಟಕ ಪವರ್ ಕಾರ್ಪೋರೇಷನ್ (ಕೆ.ಪಿ.ಸಿ.) ಜಲವಿದ್ಯುತ್‌ನ್ನು 52 ಪೈಸೆಗೆ, ಥರ್ಮಲ್ ವಿದ್ಯುತ್‌ನ್ನು 2.24 ಪೈಸೆಗೆ ಒಂದು ಯೂನಿಟ್‌ನಂತೆ ಉತ್ಪಾದಿಸಿ ಪೂರೈಸುತ್ತಿದೆ. ಸರಕಾರವು ಸ್ವತಂತ್ರ ವಿದ್ಯುತ್ ಉತ್ಪಾದಕರಾದ ತಣ್ಣೀರು ಬಾವಿಯಿಂದ ರೂ. 4.83, ರಾಯಲ್ ಸೀಮಾದಿಂದ ರೂ. 4.60, ಟಾಟಾದಿಂದ ರೂ. 4.19 ಹೀಗೆ ಭಾರಿ ದುಬಾರಿ ದರದಲ್ಲಿ ವಿದ್ಯುತ್ ಖರೀದಿ ಮಾಡುವ ಅನಿವಾರ್ಯತೆ ತಂದುಕೊಂಡಿದೆ.

3. ಸ್ವತಂತ್ರ ವಿದ್ಯುತ್ ಉತ್ಪಾದಕರು ವಿದ್ಯುತ್ ಉತ್ಪಾದನೆಯಲ್ಲಿ ಹೆಚ್ಚು ಬಂಡವಾಳ ತೊಡಗಿಸುವರೆಂಬ ಭರವಸೆಯನ್ನು ಸರಕಾರ ಇಟ್ಟುಕೊಂಡಿದೆ. ಆದರೆ ವಾಸ್ತವಿಕವಾಗಿ ದೇಶದಲ್ಲಿ ಮತ್ತು ಕರ್ನಾಟಕದಲ್ಲಿ ಹೆಚ್ಚಿನ ಬಂಡವಾಳ ಹರಿದು ಬಂದಿಲ್ಲ ಎಂಬುದನ್ನು ಮನಗಾಣಬೇಕಿದೆ.

4. ಸರಕಾರದ ಖಾಸಗೀಕರಣ ಯುಕ್ತಿ ಕಾರ್ಯತಂತ್ರ ಪತ್ರದಲ್ಲಿ ಸಬ್ಸಿಡಿ ಕಡಿತವನ್ನು ಪ್ರಸ್ತಾಪಿಸಿದೆ. ಸಬ್ಸಿಡಿ ಕಡಿತ ರಾಷ್ಟ್ರವ್ಯಾಪೀ ಚರ್ಚೆಯಾಗುತ್ತಿರುವ ಮಹತ್ವದ ವಿಷಯ. ವಿದ್ಯುತ್ ಉತ್ಪಾದನಾ ವೆಚ್ಚ ಸರಬರಾಜು ವೆಚ್ಚಕ್ಕೆ ಸರಿದೂಗಿಸುವಂತೆ ಗ್ರಾಹಕರಿಗೆ ದರ ನಿಗದಿಪಡಿಸಬೇಕೆಂದು ಸರಕಾರ ನಿರ್ಧರಿಸಿದೆ. ಗ್ರಾಹಕರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸದೇ ಈ ರೀತಿ ದರ ನಿಗದಿಪಡಿಸಿದ್ದರಿಂದ ವಿದ್ಯುತ್ ವಲಯವು ಬಿಕ್ಕಟ್ಟಿಗೆ ಒಳಗಾಗುತ್ತಿದೆ ಎಂಬ ಎಚ್ಚರಿಕೆ ಮತ್ತು ಗಮನ ಹರಿಸಬೇಕಿದೆ.

ವಿತರಣಾ ಲಾಭಾಂಶ ಪಡೆಯುವ ಮತ್ತು ನಷ್ಟ ಹಂಚಿಕೆಯ ಪದ್ಧತಿ ಅಂಗೀಕರಿಸಿ ಶೇ. 16ರಷ್ಟು ಲಾಭ ಹಾಗೂ ಪ್ರೋತ್ಸಾಹ ಧನ ನೀಡುವ ಗ್ಯಾರಂಟಿಯನ್ನು ಖಾಸಗೀ ಕಂಪನಿಗಳಿಗೆ ನೀಡಿದೆ. ಈಗಿರುವ ವಿದ್ಯುತ್ ದರಗಳ ಹೊರೆಯನ್ನು ತಡೆಯಲಾರದ ಗ್ರಾಹಕರು ಎರಡೂ ಹೊರೆಗಳನ್ನು ತಡೆಯಲಾರರು ಎಂದು ಮನಗಾಣಬೇಕು.

5. ಕನಿಷ್ಠ ವಸೂಲಾತಿ ಅಗತ್ಯತೆಯನ್ನು ಪ್ರತಿಪಾದಿಸಿ ಗ್ರಾಹಕರಿಂದ ವಸೂಲಿ ಮಾಡಿದ ಬಿಲ್‌ಗಳನ್ನು ವಿತರಣಾ ಕಂಪನಿಗಳು ಪ್ರಸರಣ ನಿಗಮಕ್ಕೆ ಪಾವತಿ ಮಾಡದೇ ರೂ. 300 ಕೋಟಿಯಷ್ಟು ಹಣ ಮುಳುಗಿಸಿದ ಉದಾಹರಣೆ ಒರಿಸ್ಸಾದಲ್ಲಿ ನಡೆದಿದೆ. ಕರ್ನಾಟಕದಲ್ಲೇ ತಣ್ಣೀರು ಭಾವಿ ಕಂಪನಿ ಈ ನೆಲದ ಕಾನೂನನ್ನು ಒಪ್ಪುತ್ತಿಲ್ಲವೆಂದು

ಪುಟ 11ಕ್ಕೆ



ರೇಷ್ಮೆ ಬೆಳೆಗಾರರ ಬೃಹತ್ ಪ್ರತಿಭಟನಾ ಪ್ರದರ್ಶನ

ಈಗಾಗಲೇ ತತ್ತರಿಸಿಹೋಗಿರುವ ರೇಷ್ಮೆ ಕೃಷಿಕ ರೈತರು 'ಕೃಷಿ ಉಳಿಸಿ ತಮ್ಮನ್ನು ರಕ್ಷಿಸಿ' ಎಂದು ಘೋಷಿಸುತ್ತಾ ಹೋರಾಟದ ಹಾದಿ ಹಿಡಿದಿದ್ದಾರೆ. ದೇಶದ ಹಲವು ರಾಜ್ಯಗಳಿಂದ ಬೆಂಗಳೂರಿನಲ್ಲಿರುವ ಕೇಂದ್ರ ರೇಷ್ಮೆ ಮಂಡಳಿ ಎದುರು ಬೃಹತ್ ಮತ ಪ್ರದರ್ಶನ ನಡೆಸಿ ಸರ್ಕಾರ ನೀತಿಗಳನ್ನು ಬದಲಾಯಿಸಿಕೊಳ್ಳಲು ಆಗ್ರಹಿಸಿದರು.


ರೇಷ್ಮೆ ಕೃಷಿ ಮತ್ತು ಉದ್ದಿಮೆ ಹೆಚ್ಚು ಹೆಚ್ಚು ಉದ್ಯೋಗ ಸೃಷ್ಟಿಸುವ ಕ್ಷೇತ್ರವಾಗಿದ್ದು ದೇಶದಲ್ಲಿ ಇಂದು ಸುಮಾರು 70 ಲಕ್ಷಕ್ಕೂ ಮೀರಿದ ರೇಷ್ಮೆ ಕೃಷಿಕರು, ರೀಲರ್ಸ್, ನೇಕಾರರು, ಕೃಷಿ ಕೂಲಿಕಾರರು, ಕಾರ್ಮಿಕರು ಮೊಟ್ಟೆ ಉತ್ಪಾದಕರು ಇತ್ಯಾದಿ ಜನ ಈ ಕೃಷಿ ಮತ್ತು ಉದ್ದಿಮೆಯಲ್ಲಿ ಜೀವನ ನಡೆಸುತ್ತಿದ್ದಾರೆ. ರೇಷ್ಮೆ ಉತ್ಪಾದನೆಯಲ್ಲಿ ಜಗತ್ತಿನಲ್ಲಿ ದ್ವಿತೀಯ ಸ್ಥಾನದಲ್ಲಿರುವ ನಮ್ಮ ದೇಶದಲ್ಲಿ ಈ ಕೃಷಿ ಮತ್ತು ಉದ್ದಿಮೆ ಮತ್ತಷ್ಟು ವಿಸ್ತರಣೆಯಾಗಿ ಕೋಟ್ಯಾಂತರ ಜನರ ಜೀವನಾಧಾರವಾಗುವ ಎಲ್ಲಾ ಸಾಧ್ಯತೆಗಳು ಇತ್ತು. ಆದರೆ ಅಸಂಖ್ಯಾತ ಜನರಿಗೆ ಉದ್ಯೋಗ ಸೃಷ್ಟಿಸುವ, ರೈತರಿಗೆ ನೆಮ್ಮದಿ ನೀಡುವ ಈ ಕೃಷಿ ಮತ್ತು ಉದ್ದಿಮೆಯನ್ನು ಬೆಳೆಸಬೇಕಾದ ಜವಾಬ್ದಾರಿ ಇದ್ದ ಸರ್ಕಾರಗಳು, ಮುಖ್ಯವಾಗಿ ಕೇಂದ್ರ ಸರ್ಕಾರ, ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳ ಜಾರಿಯ ಭಾಗವಾಗಿ ರೇಷ್ಮೆ ಆಮದು ನೀತಿಯನ್ನು ಉದಾರೀಕರಣ ಗೊಳಿಸಿದ ಫಲವಾಗಿ, ಚೀನಾ ಮತ್ತಿತರೆ ದೇಶಗಳ ತೀರ ಅಗ್ಗದ ದರದ ಕಚ್ಚಾ ರೇಷ್ಮೆ ಮತ್ತು ಬಟ್ಟೆ ಯಥೇಚ್ಛವಾಗಿ ಬರುತ್ತಿದೆ. ಸರ್ಕಾರಗಳೇ ನೀಡಿರುವ ಅಂಕಿಸಂಖ್ಯೆಗಳ ಪ್ರಕಾರ ಆಮದಿನ ಪ್ರಮಾಣ 1996ರಲ್ಲಿ ಸುಮಾರು 2300 ಟನ್ ಇದ್ದರೆ, ಈ 2002ರ ಮಾರ್ಚ್‌ಗೆ 6800 ಟನ್‌ಗೂ ಮೀರಿದೆ. ಇದರ ಜೊತೆಗೆ ಸುಮಾರು 4000 ಟನ್‌ಗೂ ಮೀರಿದ ಕಚ್ಚಾ ರೇಷ್ಮೆ ಕಳ್ಳಸಾಗಾಣಿಕೆಯ ಮೂಲಕ ದೇಶದೊಳಗೆ ಬರುತ್ತಿದೆ ಎಂಬ ವರದಿಗಳಿವೆ. ಇದಲ್ಲದೆ ನೇಪಾಳ ಮತ್ತು ಬಾಂಗ್ಲಾ ದೇಶಗಳು ತಮ್ಮ ಅಗತ್ಯಕ್ಕಿಂತ ಹೆಚ್ಚಿಗೆ ರೇಷ್ಮೆಯನ್ನು ಅಗ್ಗದ ದರದಲ್ಲಿ ಚೀನಾ ದೇಶದಿಂದ ಖರೀದಿ ಮಾಡಿ, ಹೆಚ್ಚುವರಿ ರೇಷ್ಮೆಯನ್ನು ಸುಂಕರಹಿತವಾಗಿ ನಮ್ಮ ದೇಶದಲ್ಲಿ ಮಾರಾಟ ಮಾಡುತ್ತಿದೆ ಎಂಬ ವರದಿಗಳು ಸಹ ಇವೆ.

ಹೀಗಾಗಿ ಅಧಿಕೃತ ಮತ್ತು ಅನಧಿಕೃತವಾಗಿ ದೇಶದೊಳಗೆ ಬರುತ್ತಿರುವ ಅಗ್ಗದ ದರದ ರೇಷ್ಮೆ ಪ್ರಮಾಣವು ಮತ್ತು ನಮ್ಮ ಆಂತರಿಕ ಉತ್ಪಾದನೆಯ ಶೇ.75 ರಷ್ಟಾಗುತ್ತದೆ.

ಇದರಿಂದ ದೇಶದ ರೈತರು ಉತ್ಪಾದನೆ ಮಾಡುವ ರೇಷ್ಮೆ ಗೂಡಿನ ದರ 150-160 ರೂನಿಂದ 50 ರಿಂದ 60 ರೂಗಳಿಗೆ ಬಿದ್ದು ಹೋಗಿದೆ. ಅದೇ ರೀತಿಯಲ್ಲಿ ಕಚ್ಚಾ ರೇಷ್ಮೆಯ ದರಗಳು ಕುಸಿದಿದೆ. ಇದರ ಪರಿಣಾಮವಾಗಿ ಈ ಕೃಷಿ ಮತ್ತು ಉದ್ದಿಮೆಯಲ್ಲಿ ತೊಡಗಿರುವ ಅಸಂಖ್ಯಾತ ರೈತರು ಇತರರು ದಿವಾಳಿಯಾಗಿ ಈ ಕೃಷಿ ಮತ್ತು ಉದ್ದಿಮೆಯಿಂದ ಅನಿವಾರ್ಯವಾಗಿ ದೂರ ಸರಿಯಲಾರಂಭಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವಿನಾಶದ ಅಂಚಿಗೆ ತಲುಪಿರುವ ರೇಷ್ಮೆ ಕೃಷಿ ಮತ್ತು ಉದ್ದಿಮೆಯನ್ನು ರಕ್ಷಿಸಿ, ರೈತರನ್ನು ಉಳಿಸಲು ತಕ್ಷಣದಲ್ಲಿ ತಾವುಗಳು ಮುಂದಾಗಬೇಕೆಂದು ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ ಇತ್ಯಾದಿ ರಾಜ್ಯಗಳ ರೈತರು ಹಾಗೂ ಉದ್ದಿಮೆಗೆ ಸಂಬಂಧಿಸಿದ ಸಾವಿರಾರು ಜನ ಜನವರಿ-10 ರ ಶುಕ್ರವಾರ, ಬೆಂಗಳೂರಿನ ಕೇಂದ್ರ ರೇಷ್ಮೆ ಮಂಡಳಿ (CSB) ಎದುರು ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿ, ಬೇಡಿಕೆ ಈಡೇರಿಸಲು ಆಗ್ರಹಿಸಿ ಭಾರೀ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಆಂಧ್ರಪ್ರದೇಶ, ತಮಿಳುನಾಡು, ಕರ್ನಾಟಕ, ಕೇರಳ ಮುಂತಾದ ರಾಜ್ಯಗಳಿಂದ ಇಂದು ನಗರಕ್ಕೆ ಆಗಮಿಸಿದ ರೈತ ಸಮೂಹ ಕೇಂದ್ರ ರೇಷ್ಮೆ ಮಂಡಳಿಯತ್ತ ಬೃಹತ್ ಮೆರವಣಿಗೆಯಲ್ಲಿ ಸಾಗಿದರು. ಅವರ ಘೋಷಣೆ, ಬಿರುಸು ನಡೆಗಳು ಅನುಭವಿಸುತ್ತಿದ್ದ ಸಂಕಟಗಳನ್ನು ಪ್ರತಿಫಲಿಸುತ್ತಿದ್ದವು. ಅಖಿಲಭಾರತ ಕಿಸಾನ್ ಸಭಾ ನೇತೃತ್ವದಲ್ಲಿನ ಈ ಹೋರಾಟಕ್ಕೆ ಕರ್ನಾಟಕದ ರೈತರು ಪಕ್ಷಾತೀತವಾಗಿ ತಂಡೋಪತಂಡವಾಗಿ ಹರಿದು ಬಂದರು. ಬೆಂಗಳೂರು ನಗರ - ಗ್ರಾಮಾಂತರ ಜಿಲ್ಲೆಗಳು, ಮಂಡ್ಯ, ಹಾಸನ, ಕೋಲಾರ, ಮೈಸೂರು ಅಲ್ಲದೇ ದೂರದ ಕೊಪ್ಪಳ ಜಿಲ್ಲೆಗಳಿಂದಲೂ ರೈತರು ಬಂದಿದ್ದರು. ಇದಕ್ಕೆ ಪೂರ್ವಭಾವಿಯಾಗಿ ಹಳ್ಳಿ ಹಳ್ಳಿಗಳಲ್ಲಿ ಸಭೆಗಳು, ಸಮಾವೇಶಗಳು ಜರುಗಿ ರೈತರಲ್ಲಿ ಜಾಗೃತಿ ಉಂಟುಮಾಡಲಾಗಿತ್ತು. ಈ ಪ್ರತಿಭಟನೆಯನ್ನು ಕಳೆದ ತಿಂಗಳೇ ಆಯೋಜಿಸಲಾಗಿತ್ತಾದರೂ ಮಾಜಿ ಸಚಿವ ನಾಗಪ್ಪನವರ ಹತ್ಯೆಯ ಹಿನ್ನೆಲೆಯಲ್ಲಿ ಪೂರ್ಣ ತಯಾರಿ ಆಗಿದ್ದರೂ ಮುಂದೂಡಲಾಗಿತ್ತು. ಈ ಸಲ ಎಲ್ಲಾ ಅನಾನೂಕೂಲಗಳನ್ನು ಲೆಕ್ಕಿಸದೇ ರೈತರು ಬಂದಿದ್ದು ವಿಶೇಷ.

ಕೇಂದ್ರ ರೇಷ್ಮೆ ಮಂಡಳಿ ಮುಂದೆ ಹತ್ತು ಸಾವಿರದಷ್ಟಿದ್ದ ರೈತರ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರ ಅಧ್ಯಕ್ಷರೂ, ಸಂಸತ್ ಸದಸ್ಯರೂ, ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯರೂ ಆಗಿರುವ ಎಸ್.ರಾಮಚಂದ್ರನ್ ಪಿಳ್ಳೆಯವರು ಮಾತನಾಡುತ್ತಾ ಜಾಗತೀಕರಣ-ಉದಾರೀಕರಣದ ಆಕ್ರಮಣದಿಂದ ಕೃಷಿ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. 'ರೈತರನ್ನು - ರೇಷ್ಮೆ ಕೃಷಿಯನ್ನು ಉಳಿಸಬೇಕಾದರೆ ಆಮದು ಸುಂಕವನ್ನು ಶೇ. 100 ಕ್ಕೆ ಹೆಚ್ಚಿಸಬೇಕು. ಅಲ್ಲದೇ ಬೆಂಬಲಿತ ಬೆಲೆಯನ್ನು ಫಸಲಿಗೆ ನೀಡಬೇಕೆಂದು' ಆಗ್ರಹಿಸಿದರು. ಈ ಹೋರಾಟದಲ್ಲಿ ಪಾಲ್ಗೊಂಡ ಎಲ್ಲರನ್ನು ಅಭಿನಂದಿಸಿ, ಮುಂದುವರಿಸಲು ಕರೆ ನೀಡಿ, ಬೆಂಬಲ ಘೋಷಿಸಿದರು. ಸಭೆಯನ್ನುದ್ದೇಶಿಸಿ ಮಾಜಿ ಸಚಿವ ವರದೇಗೌಡ ಹಾಗೂ ನಾಗರಾಜಯ್ಯನವರು, ಮಾಜಿ ಎಂ.ಪಿ. ನಾರಾಯಣ ಸ್ವಾಮಿ, ಎಐಕೆಎಸ್ ಪ್ರಧಾನ ಕಾರ್ಯದರ್ಶಿ ವರದರಾಜನ್, ಮಾಜಿ ಶಾಸಕರಾದ ಶ್ರೀರಾಮರೆಡ್ಡಿ, ಚಂದ್ರಣ್ಣ, ತಮಿಳುನಾಡಿನ ನಾಯಕ ಲಗುಮಯ್ಯ, ಆಂಧ್ರದ ಮುಖಂಡ ನರಸಿಂಹ ರೆಡ್ಡಿ, ಕ.ಪ್ರಾಂ. ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ ಮುಂತಾದವರು ಮಾತನಾಡಿದರು. ವೇದಿಕೆಯಲ್ಲಿ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಮಾಜಿ ಶಾಸಕ ಸೂರಂ ರಾಮಯ್ಯ ಮತ್ತಿತರ ಮುಖಂಡರು ಇದ್ದರು. ಅಧ್ಯಕ್ಷತೆಯನ್ನು ಪ್ರಗತಿಪರ ರೈತರಾದ ನಂಜಪ್ಪರೆಡ್ಡಿ ವಹಿಸಿದ್ದರು. ರೇಷ್ಮೆ ಮಂಡಳಿಯ ಅಧಿಕಾರಿಗಳು ಮನವಿ ಸ್ವೀಕರಿಸಿದರು.




ವೇದಿಕೆಯಲ್ಲಿ ವಿವಿಧ ಪಕ್ಷಗಳು ಮುಖಂಡರು ಮತ್ತು ರೈತ ನಾಯಕರುಗಳು

ಬೇಡಿಕೆಗಳು

- ರೇಷ್ಮೆ ಗೂಡಿಗೆ ಕನಿಷ್ಠ ಬೆಂಬಲ ಬೆಲೆ, ಕೆ.ಜಿ. ಗೂಡಿಗೆ 150 ರೂ ನಿಗದಿ ಮಾಡಬೇಕು.
- ಕಚ್ಚಾ ರೇಷ್ಮೆ ಆಮದನ್ನು ನಿಯಂತ್ರಿಸಬೇಕು. ಅಗತ್ಯವಿರುವಷ್ಟನ್ನು ತಾತ್ಕಾಲಿಕವಾಗಿ ಮಾತ್ರವೇ ಸರ್ಕಾರದ ಏಜೆನ್ಸಿ ಮೂಲಕ ಆಮದು ಮಾಡಿಕೊಳ್ಳಬೇಕು ಮತ್ತು ನೇರವಾಗಿ ನೇಕಾರರಿಗೆ ರಿಯಾಯಿತಿ ದರದಲ್ಲಿ ಒದಗಿಸಬೇಕು.
- ಚೀನಾ ದೇಶದಿಂದ ಆಮದಾಗುತ್ತಿರುವ ಕಚ್ಚಾ ರೇಷ್ಮೆಗೆ ಸಂಬಂಧಿಸಿದಂತೆ ಇತ್ತೀಚೆಗೆ ಆ್ಯಂಟಿ ಡಂಪಿಂಗ್ ಅಥಾರಿಟಿ ನೀಡಿರುವ ಆಜ್ಞೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.
- ರೇಷ್ಮೆ ಆಮದಿನ ಮೇಲೆ ಈಗಿರುವ ಶೇ.34 ಬದಲಿಗೆ ಶೇ.100ರಷ್ಟು ಆಮದು ಸುಂಕ ವಿಧಿಸಬೇಕು.
- ಕಳ್ಳ ಸಾಗಾಣಿಕೆಯ ಮೂಲಕ ವಿದೇಶಗಳಿಂದ ಹರಿದು ಬರುತ್ತಿರುವ ಕಚ್ಚಾ ರೇಷ್ಮೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಅಂತರರಾಷ್ಟ್ರೀಯಗಡಿಗಳಲ್ಲಿ ಕಟ್ಟೆಚ್ಚರ ವಹಿಸಬೇಕು.
- ಉತ್ತಮ ಗುಣಮಟ್ಟದ ಮೊಟ್ಟೆ, ಹಿಪ್ಪು ನೇರಳೆ, ತಳಿ ಇತ್ಯಾದಿಗಳಿಗಾಗಿ ವಿಶೇಷ ಸಂಶೋಧನೆ ನಡೆಸಲು ಹೆಚ್ಚು ಹಣ ನೀಡಬೇಕು ಮತ್ತು ಅವುಗಳನ್ನು ರೈತರಿಗೆ ಒದಗಿಸಬೇಕು.
- ಹುಳು ಸಾಗಾಣಿಕೆ, ಮನೆ, ಹನಿ ನೀರಾವರಿ, ಇತ್ಯಾದಿಗಳಿಗೆ ಸಬ್ಸಿಡಿ ಹೆಚ್ಚಿಸಬೇಕು.
- ರೇಷ್ಮೆ ಕೃಷಿ ಮತ್ತು ಉದ್ದಿಮೆಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ರಾಜ್ಯ ಸರ್ಕಾರಗಳು ವಿಶೇಷ ಯೋಜನೆ ರೂಪಿಸಿ, ಜಾರಿ ಮಾಡಬೇಕು ಹಾಗೂ ರಾಜ್ಯಗಳ ರೇಷ್ಮೆ ಕೃಷಿಯ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಹೆಚ್ಚಿನ ಹಣಕಾಸಿನ ಸಹಾಯ ನೀಡಬೇಕು.

ಕಾಮ್ರೇಡ್ ಬಿ.ಎಂ.ರಾಮಯ್ಯ ಶೆಟ್ಟಿ ಇನ್ನಿಲ್ಲ



ಕೇರಳದ

ಕಾಸರಗೋಡು ಜಿಲ್ಲೆಯ ಮಂಜೇಶ್ವರ ಪ್ರದೇಶದ ಜನಪ್ರಿಯ ಸಿಪಿಐ(ಎಂ) ಮುಂದಾಳು ಬಿ.ಎಂ.ರಾಮಯ್ಯ ಶೆಟ್ಟಿ ಜನವರಿ ಒಂದರಂದು ತಮ್ಮ 77ನೇ ವಯಸ್ಸಿನಲ್ಲಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಅಪಾರ ಬಂಧು ಬಳಗ ಹಾಗೂ ಹಿತೈಷಿಗಳನ್ನೇ ಅಗಲಿದ್ದಾರೆ. ಶೆಟ್ಟರು ಕೆಲಕಾಲದಿಂದ ಮೂಳೆ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು.

ರಾಮಯ್ಯ ಶೆಟ್ಟರು ಮಂಜೇಶ್ವರ ಅಸೆಂಬ್ಲಿ ಕ್ಷೇತ್ರದಿಂದ 1970 ಹಾಗೂ 1991ರಲ್ಲಿ ಎಲ್‌ಡಿಎಫ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. 1979ರಿಂದ 1984ರವರೆಗೆ ಮಂಜೇಶ್ವರ ಪಂಚಾಯತ್ ಅಧ್ಯಕ್ಷರಾಗಿದ್ದರು. ನಂತರ 5 ವರ್ಷಗಳ ಅವಧಿಗೆ ಕಾಸರಗೋಡು ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದರು. ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾಗಿದ್ದ ಶೆಟ್ಟರು, ಕಾಸರಗೋಡು ಜಿಲ್ಲಾ ರೈತ ಸಂಘದ ಕಾರ್ಯದರ್ಶಿಯಾಗಿ ದುಡಿದಿದ್ದರು. ಮಂಜೇಶ್ವರ ಸಹಕಾರಿ ಬ್ಯಾಂಕ್, ಜಿಲ್ಲಾ ಸಹಕಾರಿ ಬ್ಯಾಂಕ್‌ಗಳಲ್ಲಿ ನಿರ್ದೇಶಕರಾಗಿದ್ದರು.

ತನ್ನ 18ನೇ ವಯಸ್ಸಿನಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ ಇವರು ತನ್ನ ಜೀವನವನ್ನೇ ರೈತರನ್ನು ಸಂಘಟಿಸಲು ಪಕ್ಷವನ್ನು ಕಟ್ಟಲು ಮುಡಿಪಾಗಿಟ್ಟರು. 1964ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವು ವಿಭಜನೆಗೊಂಡಾಗ ಪರಿಷ್ಕರಣವಾದವನ್ನೇ ಧಿಕ್ಕರಿಸಿ ಮಾರ್ಕ್ಸ್‌ವಾದ ಲೆನಿನ್‌ವಾದವನ್ನೇ ಬೆಂಬಲಿಸಿ, ಸಿಪಿಐ(ಎಂ)ನ್ನು ಸಂಘಟಿಸಲು ದೃಢ ಸಂಕಲ್ಪ ಮಾಡಿದರು.

ಕೇಂದ್ರ ಸರಕಾರದ ದಬ್ಬಾಳಿಕೆಯ ಕಾರ್ಯಾಚರಣೆಯಲ್ಲಿ ಕಾಂ.ಶೆಟ್ಟರು ಇತರ ಮುಖಂಡರೊಂದಿಗೆ 1.5 ವರ್ಷಗಳ ಕಾಲ ಸೆರೆಮನೆವಾಸ ಅನುಭವಿಸಿದರು.

ಹಿಂದೆಂದೂ ಕಾಣದಷ್ಟು ಉಗ್ರವಾದ ಸವಾಲು

ಬಿಜೆಪಿಯ ಗುಜರಾತ್ ವಿಜಯದಿಂದ ಉಬ್ಬಿದ ಸಂಘ ಪರಿವಾರ ಧಾಳಿಗಳನ್ನು ಆರಂಭಿಸಿದೆ. ಈ ಕುರಿತ ಶಂಕೆ ನಿಜವಾಗಿದೆ. ಕೇಸರಿಪಡೆಯ ಪ್ರಮುಖರು ಕರ್ಕಶ ಕೋಮುವಾದಿ ಪ್ರಚಾರದಲ್ಲಿ ತೊಡಗಿದ್ದಾರೆ. ಒಂದೇ ವ್ಯತ್ಯಾಸವೆಂದರೆ ವಾಜಪೇಯಿಯಂತವರು ಮೇಲ್ನೋಟಕ್ಕೆ ವಿವೇಕಯುತ ನಿಲುಮೆ ತೋರಿಸಿದ್ದಾರೆ. ಹೌದು, ಅವರ ನಿಜ ಚಿಂತನೆ ಆಗಾಗ ಬಯಲಾಗುತ್ತಿರುತ್ತದೆ. ಆದರೆ ಅಡ್ವಾಣಿ, ತೊಗಾಡಿಯಾ, ಕಟಿಯಾರ್‌ರಂತವರಿಗೆ ಈಗ ಇಂತಹ ನಟನೆಯೂ ಅಗತ್ಯವಿಲ್ಲ ಎನಿಸಿದೆ.

ಹರಿಕಿಶನ್ ಸಿಂಗ್ ಸುರ್ಜಿತ್

ಈ ಅರ್ಭಟಗಳು ಕೇವಲ ವಿಜಯೋತ್ಸಾಹ ಮಾತ್ರವಲ್ಲ ಎಂಬುದು ಬೇರೆ ಮಾತು. ಇದು ಮುಂದೆ ಒಂದೂವರೆ ವರ್ಷಗಳಲ್ಲಿ ಬರಲಿರುವ ವಿಧಾನಸಭಾ ಚುನಾವಣೆಗಳು, ನಂತರದ ಲೋಕಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಸಂಘ ಪರಿವಾರದ ಸ್ಥೈರ್ಯ ಮತ್ತೆ ಇಳಿಯದಂತೆ ನೋಡಿಕೊಳ್ಳುವ ಒಂದು ದಾರಿ ಕೂಡಾ. ಆದರೆ ಒಂದು ನಾಗರಿಕ ದೇಶವಾಗಿ ನಮ್ಮ ಅಸ್ತಿತ್ವಕ್ಕೆ ಬಂದಿರುವ ಬೆದರಿಕೆ ಬಹಳ ಗಂಭೀರವಾದದ್ದೇ.

ಹಿಂದುತ್ವ ಬಿಜೆಪಿಯ ಚುನಾವಣಾ ವಿಷಯವಾಗುತ್ತದೆ ಎಂದು ಅಡ್ವಾಣಿಯವರು ಇತ್ತೀಚಿಗೆ ಗಾಂಧಿನಗರದಲ್ಲಿ ಘೋಷಿಸಿದ್ದಾರೆ. ಎರಡು ದಿನಗಳ ಹಿಂದೆಯಷ್ಟೇ ಪ್ರತಿಪಕ್ಷಗಳು ಕೋಮುವಾದದ ವಿಷಯವನ್ನು ಎತ್ತಿದರೆ ಮಾತ್ರ ತಾವು ಹಿಂದುತ್ವವನ್ನು ಚುನಾವಣಾ ವಿಷಯ ಮಾಡುತ್ತೇವೆ ಎಂದಿದ್ದರು. ಪ್ರತಿಪಕ್ಷಗಳು ಕೋಮುವಾದದ ಪ್ರಶ್ನೆ ಎತ್ತದಿದ್ದರೆ ಬಿಜೆಪಿ ಹಿಂದುತ್ವವನ್ನು ಕೈಬಿಡುತ್ತದೆಯೋ ಎಂಬ ಬಗ್ಗೆ ಅವರೇನೂ ಹೇಳಿಲ್ಲ.

ವಿಕೃತಗೊಳಿಸುತ್ತಿರುವವರು ಯಾರು?

ಈಗ ಬಿಜೆಪಿ ಹಳೆಯತನ "ಸಾಂಸತಿಕ ರಾಷ್ಟ್ರವಾದ" ಎಂಬುದನ್ನು ಸಂಘ ಪರಿವಾರದ ಕಸದ ಬುಟ್ಟಿಯಿಂದ ಮತ್ತೆ ಆಯ್ದುಕೊಂಡಿದೆ. ಅಡ್ವಾಣಿ "ವಿಕೃತ ಧರ್ಮನಿರಪೇಕ್ಷತೆಯ ನೆಹರೂ ಪರಿಕಲ್ಪನೆ"ಯನ್ನು ತೋರಿಸಿದ್ದಾರೆ. ಈ ಟೀಕೆ ಅವರ 'ಸಾಂಸತಿಕ ರಾಷ್ಟ್ರವಾದದ ನಿಜ ಸ್ವರೂಪವನ್ನು ಬಯಲಿಗೆ ತಂದಿದೆ. ನೆಹರೂ ಧರ್ಮನಿರಪೇಕ್ಷತೆಯನ್ನು ಎತ್ತಿ ಹಿಡಿದರೂ ಅದು ಅವರು ಕೊಟ್ಟ ಪರಿಕಲ್ಪನೆಯಲ್ಲ ಎಂಬುದನ್ನು ಗಮನಿಸಬೇಕು. ಅದು ನಮ್ಮ ರಾಷ್ಟ್ರೀಯ ವಿಮೋಚನಾ ಆಂದೋಲನದಲ್ಲಿ ಮೂಡಿಬಂದ ಪರಿಕಲ್ಪನೆ. ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ರಕ್ಷಿಸುವಲ್ಲಿ ಅವರ ಅಗತ್ಯವನ್ನು ಸ್ವಾತಂತ್ರ್ಯ ಆಂದೋಲನದ ಮುಖಂಡರು ಮನಗಂಡಿದ್ದಾರೆ. ಇದು ಸಂವಿಧಾನ ಸಭೆಯ ಕಲಾಪಗಳಲ್ಲೂ ಪ್ರತಿಫಲನಗೊಂಡು ಸ್ವತಂತ್ರ ಭಾರತದ ಸಂವಿಧಾನದ ಮೂಲ ಚೌಕಟ್ಟು ಆಯಿತು.

ಅಡ್ವಾಣಿಯವರಿಗೆ ನೆನಪು ಶಕ್ತಿ ಕುಂದಿದೆಯೇ? ಏಕೆಂದರೆ ಕೇವಲ ಒಂದುವರೆ ತಿಂಗಳ ಹಿಂದೆಯಷ್ಟೇ ಅವರು ಲೋಕಸಭೆಯಲ್ಲಿ ಹೇಳಿದ್ದನ್ನು ಮರೆತಿದ್ದಾರೆ. ಧರ್ಮ ನಿರಪೇಕ್ಷತೆ ಒಂದು ವ್ಯಕ್ತಿ ಅಥವಾ ಪಕ್ಷದ ಕೊಡುಗೆಯಲ್ಲ. ಇಡೀ ಸ್ವಾತಂತ್ರ್ಯ ಆಂದೋಲನದ ಉತ್ಪನ್ನ ಎಂದಿದ್ದರು ಅವರು. ಅಂದು ಭಾರತ ಒಂದು ಧಾರ್ಮಿಕ ಪ್ರಭುತ್ವವಾಗುವುದಿಲ್ಲ ಎಂದು ಹೇಳಿದ್ದರೆ ಅಂದು ಸಂವಿಧಾನ ಕರ್ತೃಗಳನ್ನು ಹೊಗಳಿದ್ದರು!

ವಿಕೃತ ಧರ್ಮನಿರಪೇಕ್ಷತೆ ನೆಹರೂ ಪರಿಕಲ್ಪನೆಯಲ್ಲ, ಬದಲಾಗಿ ಅದ್ವಾಣಿಯವರದ್ದೇ. ಅದನ್ನು ಹಿಂದುತ್ವದೊಂದಿಗೆ ನವೀಕರಿಸಿ ಅದನ್ನು ವಿಕೃತಗೊಳಿಸುತ್ತಿರುವವರು ಅಡ್ವಾಣಿಯವರ ಪಡೆಯವರೇ. ಬೊಮ್ಮಾಯಿ ಕೇಸಿನಲ್ಲಿ ಸುಪ್ರಿಂ ಕೋರ್ಟ್ ಧರ್ಮನಿರಪೇಕ್ಷತೆ ಭಾರತ ಸಂವಿಧಾನಗಳ ಮೂಲಚೌಕಟ್ಟು ಎನ್ನುತ್ತಾ ಧರ್ಮನಿರಪೇಕ್ಷತೆಯೆಂದರೆ ರಾಜಕೀಯ ಮತ್ತು ಆಡಳಿತದಿಂದ ಧರ್ಮವನ್ನು ಸಂಪೂರ್ಣವಾಗಿ ಪ್ರತ್ಯೇಕಿಸುವುದು ಎಂದು ನಿರ್ವಚಿಸಿರುವುದನ್ನು ಅವರು ಬೇಕೆಂದೇ ಮರೆಯುತ್ತಾರೆ.

ತಮ್ಮದು ನಿಜವಾಗಿ 'ನೈಜ' ಧರ್ಮನಿರಪೇಕ್ಷತೆಯೆಂದು ಅವರು ಹೇಳುವುದಾದರೆ ಸುಪ್ರಿಂ ಕೋರ್ಟ್ ನೀಡಿರುವ ಈ ನಿರ್ವಚನೆಗೆ ಅವರು ಬದ್ಧರಾಗಿದ್ದಾರೆಯೇ, ರಾಜಕೀಯದೊಳಗೆ ಧರ್ಮವನ್ನು ಎಳೆಯುವುದನ್ನು ನಿಲ್ಲಿಸಲು ಅವರು ಸಿದ್ಧರಿದ್ದಾರೆಯೇ? ಇಂತಹ ಪ್ರಶ್ನೆಗಳಿಗೆ ನೇರ ಉತ್ತರಗಳು ಬೇಕಾಗಿವೆ.

ಭಂಡತನದ ಪ್ರದರ್ಶನ

ಮಾಡಿದ ಪಾಪಗಳಿಗೆ ಇತರರನ್ನು ದೂರುವ ತನ್ನ ಪ್ರಿಯ ಆಟವನ್ನು ಮತ್ತೆ ಆಡಿದ್ದಾರೆ. "ವೈವಿಧ್ಯತೆಯಲ್ಲಿ ಏಕತೆಯ ವಿಷಯ ಬಂದಾಗಲೆಲ್ಲಾ ತೀವ್ರ ಚರ್ಚೆಗಳು, ವಿವಾದಗಳು ಉಂಟಾಗುತ್ತದೆ" ಎಂದು ಅವರು ಕೊರಗುತ್ತಾರೆ. ಈ ವೈವಿಧ್ಯತೆಯಲ್ಲಿ ಏಕತೆಯ ಬಗ್ಗೆ ನಿಮಗೆ ಎಂದಿನಿಂದ ಆಸಕ್ತಿ ಎಂದು ವಾಜಪೇಯಿಯವರ ಭಾರತದಲ್ಲಿ ಬದುಕಬೇಕಾದರೆ ಹಿಂದುತ್ವದ ಪ್ರತೀಕಗಳನ್ನು ಅಂಗೀಕರಿಸಿ ಎನ್ನುವ ಸಲಹೆ, ವೈವಿಧ್ಯತೆಯಲ್ಲಿ ಏಕತೆಗೆ ಅನುಗುಣವಾಗಿದೆಯೇ?

ಈ ವಿಷಯದಲ್ಲಿ ಚರ್ಚೆ, ವಿವಾದಗಳು ಉಂಟಾಗಿದ್ದರೆ ಅದಕ್ಕೆ ಕಾರಣ ತನ್ನ ಪರಿವಾರ ಈ ಪರಿಕಲ್ಪನೆಯನ್ನು ಕೊಲ್ಲ ಹೊರಟಿರುವುದರಿಂದಲೇ, ಆ ಮೂಲಕ ನಮ್ಮ ಐಕ್ಯತೆಗೆ ಕುತ್ತು ತಂದಿರುವುದರಿಂದಲೇ ಎಂಬುದನ್ನು ಶ್ರೀ ವಾಜಪೇಯಿಯವರು ಅರಿಯುವರೇ?

ಪತ್ರಿಕೆಗಳ ಪ್ರಕಾರ ಅದೇ ಗಾಂಧಿನಗರದ ಸಭೆಯಲ್ಲಿ ರಾಷ್ಟ್ರಧ್ವಜದಲ್ಲಿ ಬೌದ್ಧಧರ್ಮದ ಸಂಕೇತವಾದ ಅಶೋಕ ಚಕ್ರವನ್ನು ಅಳವಡಿಸಿರುವುದಕ್ಕಿಂತ ದುರದೃಷ್ಟಕರ ಸಂಗತಿ ಬೇರೆಯಿರಲಿಕ್ಕಿಲ್ಲ ಎನ್ನುವ ಮಟ್ಟಿಗೆ ಅಡ್ವಾಣಿ ಹೋಗಿದ್ದಾರೆ.

ಈ ಪ್ರಶ್ನೆಗಳಿಗೆ ಉತ್ತರ ನೀಡುವ ಧೈರ್ಯವನ್ನು ಅಡ್ವಾಣಿ ಅಥವಾ ಅವರ ಪಡೆಗಳಿಂದ ನಿರೀಕ್ಷಿಸುವಂತಿಲ್ಲ. ರಾಷ್ಟ್ರಧ್ವಜವನ್ನು ಕೂಡಾ ಹೀಯಾಳಿಸುವ ಅವರ ಭಂಡತನದಿಂದ ಬಹಳಷ್ಟು ತಿಳಿಯುತ್ತದೆ. ಪತ್ರಿಕೆಗಳ ಪ್ರಕಾರ ಅದೇ ಗಾಂಧಿನಗರದ ಸಭೆಯಲ್ಲಿ ರಾಷ್ಟ್ರಧ್ವಜದಲ್ಲಿ ಬೌದ್ಧಧರ್ಮದ ಸಂಕೇತವಾದ ಅಶೋಕ ಚಕ್ರವನ್ನು ಅಳವಡಿಸಿರುವುದಕ್ಕಿಂತ ದುರದೃಷ್ಟಕರ ಸಂಗತಿ ಬೇರೆಯಿರಲಿಕ್ಕಿಲ್ಲ ಎನ್ನುವ ಮಟ್ಟಿಗೆ ಅಡ್ವಾಣಿ ಹೋಗಿದ್ದಾರೆ.


ವಿಷ ತುಂಬಿದ ಹೇಳಿಕೆ

ಈ ತರ್ಕದಿಂದ ನಮಗೆ ಆಶ್ಚರ್ಯವಾಗಿಲ್ಲ. ಏಕೆಂದರೆ ಗೋಲ್ವಾಲ್ಕರ್‌ರವರು ಒಮ್ಮೆ ಕ್ರೈಸ್ತ ಮತ್ತು ಇಸ್ಲಾಮ್ ಧರ್ಮಗಳನ್ನಷ್ಟೇ ಅಲ್ಲ ಬೌದ್ಧ ಮತ್ತು ಜೈನ ಧರ್ಮಗಳನ್ನೂ ಟೀಕಿಸಿದ್ದಾರೆ. ಈಗಲೂ ಸಂಘ ಪರಿವಾರದ ಸಾಹಿತ್ಯದಲ್ಲಿ ಬೌದ್ಧ, ಜೈನ ಧರ್ಮಗಳ ಬಗ್ಗೆ ವಿಷತುಂಬಿರುವ ಹೇಳಿಕೆಗಳಿವೆ. ಇವೆರಡು ಅಹಿಂಸೆಯ ಮೇಲಿನ ತಮ್ಮ ಒತ್ತಿನಿಂದಾಗಿ ಭಾರತೀಯರ ಶಕ್ತಿಯನ್ನು ಕುಂಠಿತಗೊಳಿಸಿವೆ ಎಂಬುದು ಅವರ ಗಾನ. ಈ ಸಂಘ ಪರಿವಾರದ ನಾಯಕಮಣಿಗಳು ಎಷ್ಟು ಸಲೀಸಾಗಿ ಒಂದೇ ವೇಳೆಗೆ ಪರಸ್ಪರ ವಿರುದ್ಧ ಮಾತುಗಳನ್ನು ಹೇಳಬಲ್ಲರು ಅಲ್ಲವೇ? ಕಳೆದ ವಾರವಷ್ಟೇ ಇವರು ಡಾ। ಅಂಬೇಡ್ಕರ್‌ರವರ ಹೆಸರನ್ನೂ ತಮ್ಮ ಹೊಲಸು ಮತವಾದೀ ಯೋಜನೆಗೆ ಎಳೆದು ತಂದಿದ್ದರು. ಬೌದ್ಧ ಧರ್ಮ ಡಾ। ಅಂಬೇಡ್ಕರ್ ತನ್ನ ಬದುಕಿನ ಕೊನೆಯ ಭಾಗದಲ್ಲಿ ಅಂಗೀಕರಿಸಿದ ಧರ್ಮ ಎಂಬುದನ್ನು ಮರೆಯಲು ಸಾಧ್ಯವೇ? ಅಷ್ಟೇ ಅಲ್ಲ, ನಮ್ಮ ರಾಷ್ಟ್ರಧ್ವಜದಲ್ಲಿ ಅಶೋಕ ಚಕ್ರವನ್ನು ಅಳವಡಿಸಿದ ಸಂವಿಧಾನ ಸಭೆಯ ಕರಡು ಸಮಿತಿಯ ಅಧ್ಯಕ್ಷರು ಡಾ। ಅಂಬೇಡ್ಕರ್‌ರವರೇ ಅಲ್ಲವೇ?

'ಸೌಮ್ಯವಾದಿ' ಚಿಂತನೆಗಳ ಸೋಗು.

ನಮ್ಮ "ಸೌಮ್ಯವಾದಿ" ಪ್ರಧಾನಮಂತ್ರಿಗಳ ಇತ್ತೀಚಿನ 'ಚಿಂತನೆ'ಗಳಲ್ಲೂ, ಈ ಸೋಗು ಎದ್ದುಕಾಣುತ್ತದೆ. ಅವರು ಸಂಘ ಪರಿವಾರ ಪರಿವಾರವನ್ನು ಕೇಳಬೇಕಾಗುತ್ತದೆ. ಏಕೆಂದರೆ ಈ ಪರಿಕಲ್ಪನೆಯೇ ಆ ಪರಿವಾರಕ್ಕೆ ಹಿಡಿಸದು. ಇದು ತನ್ನ ಮತೀಯ ಯೋಚನೆಗೆ ಒಂದು ದೊಡ್ಡ ಅಡ್ಡಿ ಎಂಬುದು ಅವರ ಅಭಿಪ್ರಾಯ. ಭಾರತದಲ್ಲಿ ವಿವಿಧ ಪ್ರವಾಹಗಳು ಒಂದಾಗಿ ಬೆಸೆಯುವುದಿಲ್ಲ. ಅಮೇರಿಕಾವನ್ನು ಸಾಮಾನ್ಯವಾಗಿ ವರ್ಣಿಸುವಂತೆ ಭಾರತ 'ಕರಗು ಮೂಸೆ' (melting point) ಎಲ್ಲ ಒಂದಾಗಿ ಅದನ್ನು ಬಹುರೂಪದರ್ಶಕ ಎನ್ನಬಹುದು. ಇಲ್ಲಿ ವಿವಿಧ ಪ್ರವಾಹಗಳು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡೇ ಒಟ್ಟುಗೂಡಿ ನಮ್ಮ ಸಂಸ್ಕೃತಿಯ ವಿರಾಟ ರೂಪವನ್ನು ತೋರಿಸುತ್ತವೆ. ಇದೇ ಭಾರತದ ಶಕ್ತಿಯಾಗಿದ್ದರೂ ದಶಕಗಳಿಂದ ಸಂಘ ಪರಿವಾರದ ಕಣ್ಣನ್ನು ಕುಕ್ಕುತ್ತಿರುವ ಅಂಶ ಇದು.

ಆದರೆ ಪ್ರಧಾನಿಗಳ ಕೊರಗು ಆರ್.ಎಸ್.ಎಸ್. ಮುಖಂಡರ ಬಗ್ಗೆ



ಇರಬೇಕಾಗಿತ್ತೇ ಹೊರತು ಭಾರತ ಜನ ಸಾಮಾನ್ಯರಿಗೆ ಈ ಬಗ್ಗೆ ಅವರು ಪಾಠ ಹೇಳಿಕೊಡಬೇಕಾಗಿಲ್ಲ. ತನ್ನ ಏಕಸ್ವರೂಪದ ಫ್ಯಾಸಿಸ್ಟ್ ಸಂಸ್ಕೃತಿಯನ್ನು ದೇಶದ ಮೇಲೆ ಹೇರಲು ಕೇಸರಿ ಪಡೆ ಈ ಬಹುರೂಪತೆಯನ್ನು ಕೊಲ್ಲಹೊರಟಿದೆ, ಎಂಬುದು ಸತ್ಯಸಂಗತಿಯಲ್ಲವೆ? ಒರಿಸ್ಸಾದ ಹಳ್ಳಿಯೊಂದರಲ್ಲಿ ಕ್ರೈಸ್ತ ಪಾದರಿಯನ್ನು ಆತನ ಚಿಕ್ಕ ಮಕ್ಕಳನ್ನು ಜೀವಂತ ಸುಡುವಾಗ ಈ ಕೇಸರಿ ಪಡೆ ವೈವಿಧ್ಯತೆಯಲ್ಲಿ ಏಕತೆಯ ಬಗ್ಗೆ ಪ್ರೀತಿ ತೋರಿಸಿತೇ? ಗುಜರಾತಿನಲ್ಲಿ ನಾಲ್ಕು ತಿಂಗಳ ಕಾಲ ಮುಸ್ಲಿಮರ ಹತ್ಯಾಕಾಂಡ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಪಾಡಿಕೊಳ್ಳಲು ನಡೆಸಿದ ಕೃತ್ಯವೇ?

ಒಂದು ನಾಣ್ಯದ ಎರಡು ಮುಖಗಳು

"ಧರ್ಮನಿರಪೇಕ್ಷತೆ ಮತ್ತು ಹಿಂದುತ್ವ ಪರಸ್ಪರ ವಿರುದ್ಧಾದದ್ದು ಎಂಬ ನಂಬಿಕೆಯಿಂದ ಅವನ್ನು ಪರಸ್ಪರ ಎತ್ತಿಕಟ್ಟಲಾಗುತ್ತಿದೆ" ಎಂದೂ ವಾಜಪೇಯಿಯವರ ಕೊರಗು. ಇದು ಸರಿಯಲ್ಲವಂತೆ. ಏಕೆ ಸರಿಯಲ್ಲ? ಏಕೆಂದರೆ" ಧರ್ಮನಿರಪೇಕ್ಷತೆಯ ಪ್ರಕಾರ ಎಲ್ಲಾ ನಂಬಿಕೆಗಳಿಗೆ ಗೌರವ ತೋರಬೇಕಾದ್ದು ಪ್ರಭುತ್ವದ ಕರ್ತವ್ಯ. ನಂಬಿಕೆಗಳ ಆಧಾರದಲ್ಲಿ ನಾಗರೀಕರಲ್ಲಿ ಬೇಧ-ಭಾವ ಮಾಡಬಾರದು.

ಇದರ ಹಿಂದಿರುವ ಮಂಡನೆ ಸ್ಪಷ್ಟ ಎಲ್ಲಾ ನಂಬಿಕೆಗಳಿಗೆ ಗೌರವದ ಮಾತಾಡುತ್ತಲೇ ವಾಜಪೇಯಿಯವರು ಧರ್ಮನಿರಪೇಕ್ಷತೆಯೆಂದರೆ ರಾಜಕೀಯದಿಂದ ಪ್ರಭುತ್ವದ ವ್ಯವಹಾರಗಳಿಂದ ಧರ್ಮವನ್ನು ಸಂಪೂರ್ಣವಾಗಿ ಪ್ರತ್ಯೇಕಿಸುವುದು ಎಂಬ ಪ್ರಮುಖ ಅಂಶವನ್ನು ಉಪೇಕ್ಷಿಸಬಯಸುತ್ತಾರೆ. ಇದು ಆಕಸ್ಮಿಕವಲ್ಲ ಎಲ್ಲಾ ನಂಬಿಕೆಗಳಿಗೆ ಗೌರವವೆಂದು ಯಾವುದೇ ಒಂದು ಅಥವಾ ಎಲ್ಲಾ ಧರ್ಮಗಳು ರಾಜಕೀಯದಲ್ಲಿ ತಲೆ ತೂರಿಸಲು ಅವಕಾಶ ಕೊಡುವುದೆಂದರ್ಥವೇ?

ಇದು ಏನನ್ನು ತೋರಿಸುತ್ತದೆ? ಗೋವಾದಲ್ಲಿ ವಾಜಪೇಯಿಯವರಾಗಲೀ, ಗಾಂಧಿನಗರದಲ್ಲಿ ಅಡ್ವಾಣಿಯವರಾಗಲೀ ಒಂದೇ ನಾಣ್ಯದ ಎರಡು ಮುಖಗಳು. ಅವರು ಬಳಸುವ ಭಾಷೆ ಬೇರೆಯಷ್ಟೆ.

ಹಿಂದುತ್ವ ಒಂದು ಜೀವನ ವಿಧಾನ ಎಂಬುದು ಕೇವಲ ಮಾತಿನ ಮಂಟಪ. ಮೊದಲನೆಯದಾಗಿ ಹಿಂದುತ್ವವೆಂದರೆ ಹಿಂದೂ ಧರ್ಮವಲ್ಲ. ಈ ಪದವನ್ನು ಸೃಷ್ಟಿಸಿದ ಸಾರ್ವರ್ಕರ್‌ರವರೇ ಅದನ್ನು ಒಪ್ಪಿಕೊಂಡಿದ್ದಾರೆ. ಎರಡನೆಯದು ಹಿಂದು ಧರ್ಮ ಎಷ್ಟರಮಟ್ಟಿಗೆ ಜೀವನ ವಿಧಾನವೋ ಬೌದ್ಧ ಧರ್ಮ, ಜೈನ ಧರ್ಮ, ಇಸ್ಲಾಂ ಧರ್ಮ, ಕ್ರೈಸ್ತ ಧರ್ಮ ಅಥವಾ ಇವ್ಯಾವುದೇ ಧರ್ಮವೂ ಅಷ್ಟರಮಟ್ಟಿಗೆ ಜೀವನ ವಿಧಾನವೇ.

"ನಾವು ಸಂಭ್ರಮ ಪಡಬೇಕಾದರೂ ಭಾರತೀಯತ್ವದ ಆಚರಣೆ ಮತ್ತು ಅದನ್ನು ಇನ್ನಷ್ಟು ಬಲಪಡಿಸುವಲ್ಲಿ" ಎಂಬ ವಾಜಪೇಯಿಯವರ ಸಲಹೆ ಸ್ವಾಗತಾರ್ಹ. ಆದರೆ ಸಮಸ್ಯೆ ಬರುವುದು ಅವರು ಭಾರತೀಯತೆ ಮತ್ತು ಹಿಂದುತ್ವ ಒಂದೇ ಎಂದು ಹೇಳುವಾಗ ಇದು ಅಪಾಯಕಾರಿ. ಅವರ ಮಾತಿನ ಕಸರತ್ತು ಏನೇ ಇರಲಿ, ಅದರರ್ಥ ಹಿಂದುತ್ವವನ್ನು ಎತ್ತಿ ಹಿಡಿಯುವವರು ಮಾತ್ರ ಭಾರತೀಯರು ಎಂದಾಗುತ್ತದೆ. ಎಲ್ಲಾ ಹಿಂದೂವೇತರರು ಅಭಾರತೀಯರು ಎಂಬ ಅವರ ಗುಂಗು ಗೋಲ್ವಾಲ್ಕರ್‌ರವರ ಮಾತಿಗಿಂತ ಇದು ಭಿನ್ನವಾಗಿದೆಯೇ?

ಆದ್ದರಿಂದ ವಾಜಪೇಯಿಯವರ ಈ ಬಾರಿಯ

ಪುಟ 10 ಕ್ಕೆ

‘ಇನ್ನೊಂದು ಜಗತ್ತು ಸಾಧ್ಯ’ ಎಂದು ಸಾರಿದ ಜಾಗತೀ


ಹೊಸವರ್ಷದ ಮೊದಲ ವಾರದಲ್ಲೇ ಹೈದರಾಬಾದಿನಲ್ಲೊಂದು ವಿಶೇಷ ಸಮ್ಮೇಳನ ನಡೆಯಿತು ಜನವರಿ 1 ರಿಂದ 7 ರವರೆಗೆ. 15 ಸಾವಿರ ಪ್ರತಿನಿಧಿ ಸಮ್ಮೇಳನವನ್ನು ಉತ್ಸವ ಎಂದರೆ ಸರಿಯಾದೀತು! ‘ಇನ್ನೊಂದು ಜಗತ್ತು ಸಾಧ ಸಾಗರಕ್ಕೆ ಸಾವಿರಾರು ನದಿಗಳು’ ಎಂಬ ಕವನದ ದೃಶ್ಯರೂಪವಾಗಿತ್ತು. ಸಾಮಾಜಿಕ-ಸಾಂಸ್ಕೃತಿಕ ಚಳುವಳಿಗಳು, ಸಾಮೂಹಿಕ ಸಂಘಟನೆಗಳು, ಎಡ - ಹೀಗೆ ಹತ್ತು ಹಲವು ಪ್ರಗತಿಪರ ಚಳುವಳಿಗಳ ಸಮಾಗಮವಾಗಿತ್ತು. “ಜಾಗ ತಿರಸ್ಕರಿಸಿ, ಸಮಾನತೆ, ಸಾಮಾಜಿಕ ನ್ಯಾಯ, ಸಮೃದ್ಧಿ, ಪ್ರಜಾಪ್ರಭುತ್ವ, ಶಾಂತಿ ಇರುವ ‘ಇನ್ನೊಂದು ಜಗತ್ತು ಸಾಧ್ಯ’ ಮತ್ತು ಅಗತ್ಯ ಪ್ರಚಂಡ ಐಕ್ಯತೆಯ ವೇದಿಕೆ ಒದಗಿಸಿತು. ಜಾಗತೀಕರಣಕ್ಕೆ ಬದಲಿ ಇಲ್ಲವೆನ್ನುವವರಿಗೆ ಸವಾಲು ಹಾಕಿತು. ಅವರನ್ನು ನಡುಗಿಸಿತು. ಬ ಇಂತಹದೇನು ಆಗೇ ಇಲ್ಲ ಎಂದು ನಟಿಸಲು ಯತ್ನಿಸಿದರೂ ಫೋರಂ ಅದ್ಭುತ ಪರಿಣಾಮ ಬೀರಲಿದೆ. ಈ ಉತ್ಸವದ ಬಗ್ಗೆ ಒಂದು ವ

ಹೈದರಾಬಾದಿನಲ್ಲಿ ಯಶಸ್ವಿ ಏಶಿಯಾ ಸೋಶಿಯಲ್

ತಮಿಳು ನಾಡಿನ ದಲಿತ ಮಹಿಳೆ, ಆಂಧ್ರ ಪ್ರದೇಶದ ಕೃಷಿ ಕೂಲಿಕಾರ, ಅಫಘಾನಿಸ್ತಾನದಲ್ಲಿ ಶಿಕ್ಷಣಕ್ಕಾಗಿ ಹಾತೊರೆಯುವ ಮಹಿಳೆ, ನರ್ಮದಾ ಆಣೆಕಟ್ಟಿನಿಂದ ನಿರಾಶ್ರಿತನಾದ ಆದಿವಾಸಿ, ಬರ್ಮಾದಿಂದ ಮಿಲಿಟರಿ ಸರ್ಕಾರದ ದಮನದಿಂದ ಓಡಿಬಂದ ವಿದ್ಯಾರ್ಥಿ, ಪಾಕಿಸ್ತಾನದ ಗೇಣಿದಾರ ರೈತ, ಜಪಾನ್ ಮೇಲೆ ಅಣು ಯುದ್ಧದಲ್ಲಿ ಉಳಿದ ದುರ್ಭಾಗ್ಯೆ, ವೃದ್ಧ ಮಹಿಳೆ, ಫಿಲಿಪ್ಪೈನ್ಸ್‌ನ ಆರ್ಥಿಕ ತಜ್ಞ, ಬೊಲಿವಿಯಾದಲ್ಲಿ ನೀರು ಖಾಸಗೀಕರಣದ ವಿರುದ್ಧ ಹೋರಾಟದ ನಾಯಕ, ಅರ್ಜೆಂಟಿನಾದಲ್ಲಿ ಹದಿಹರೆಯದ ಮಕ್ಕಳು ಮಿಲಿಟರಿ ಸರ್ಕಾರದ ದಮನಚಕ್ರದಲ್ಲಿ ಕಾಣೆಯಾದವರ ವಿರುದ್ಧ ಹೋರಾಡಿದ ‘ಕಾಣೆಯಾದವರ ತಾಯಂದಿರು’ ಗೋದ್ರಾದಲ್ಲಿ ಹತ್ಯಾಕಾಂಡ ನೋಡಿನೊಂದ ಮುಸ್ಲಿಂ ಮಹಿಳೆ, ನೇಪಾಳದಲ್ಲಿ ಮೈಮಾರಿ ಬದುಕುವವರಿಗಾಗಿ ಹೋರಾಡುವ ಸಂಘಟನೆ ಕಾರ್ಯಕರ್ತರು, ಪ್ರಗತಿಪರ ಆರ್ಥಿಕ ತಜ್ಞರು, ಪ್ಯಾಲೆಸ್ಟೈನ್ ಸರ್ಕಾರದ ಮಂತ್ರಿ, ಸೆನೆಗಾಲ್‌ನ ಪ್ರಖ್ಯಾತ ಮಾರ್ಕ್ಸ್‌ವಾದಿ ಚಿಂತಕ, ಪಾಕಿಸ್ತಾನದಲ್ಲಿ ಮಾನವ ಹಕ್ಕುಗಳಿಗಾಗಿ ಹೋರಾಡುತ್ತಿರುವವರು, ಬಾಂಗ್ಲಾದೇಶದ ಹಾಡುಗಾರ, ಸಾಕ್ಷ್ಯಚಿತ್ರ ತಯಾರಿಸುವ ಫಿಲಂ ಡೈರೆಕ್ಟರ್ - ಇವರೆಲ್ಲಾ ಹೈದರಾಬಾದಿನ ಏಶಿಯಾ ಸೋಶಿಯಲ್ ಫೋರಂನಲ್ಲಿ ನೆರೆದಿದ್ದರು. ಇವರಿಗೆಲ್ಲಾ ಏನು ಸಾಮಾನ್ಯ ಅಂಶ? ಇವರೆಲ್ಲಾ ಸೇರಿ ಆರು ದಿನ ಏನು ಮಾಡಿದರು? ಯಾಕಾದರೂ ಸೇರಿದರು? ನೂರಾರು ಸಾವಿರಾರು ಮೈಲಿ ಪ್ರಯಾಣ ಮಾಡಿ (ಕೆಲವರು ಗುಪ್ತವಾಗಿ) ಕಷ್ಟಪಟ್ಟು ಇಷ್ಟು ದೂರ ಯಾಕೆ ಬಂದಿದ್ದರು? ಇವರನ್ನೆಲ್ಲಾ ಸೇರಿಸಿದವರು ಯಾರು?

ಬದಲಿ ಜಾಗತಿಕ ವ್ಯವಸ್ಥೆ ರೂಪಿಸುವ ಪ್ರಕ್ರಿಯೆ

ಇವರಿಗೆಲ್ಲಾ ಸಾಮಾನ್ಯ ಅಂಶ ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ವಿರೋಧ. ಅವರು ಯಾವ ದೇಶ, ಜಾತಿ, ಕುಲದಲ್ಲಿರಲಿ, ಯಾವುದೇ ಪ್ರದೇಶದಲ್ಲಿ ಯಾವುದೇ ಸಮಸ್ಯೆಗೆ ಹೋರಾಡುತ್ತಿರಲಿ, ಅವರ ಆಸಕ್ತಿ-ಆತಂಕಗಳು


ಉದ್ಘಾಟನಾ ಸಮಾರಂಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವೊಂದರ ದೃಶ್ಯ-ವೇದಿಕೆಯಿಂದ ಒಂದು ನೋಟ

ಯಾವ ವಿಷಯದಲ್ಲೇ ಇರಲಿ. ಅವರಿಗೆಲ್ಲಾ ಒಂದು ವಿಷಯ ಸ್ಪಷ್ಟವಾಗಿದೆ. ಅವರ ಸಮಸ್ಯೆಗಳನ್ನು ಸಾಮ್ರಾಜ್ಯಶಾಹಿ ಜಾಗತೀಕರಣ ಸೃಷ್ಟಿಸಿದೆ. ಇಲ್ಲವೆ ಉಲ್ಬಣಗೊಳಿಸಿದೆ. ಅವರ ತಕ್ಷಣದ ಶತ್ರುಗಳು ಅಂತರ್‍ರಾಷ್ಟ್ರೀಯ ತ್ರಿಮೂರ್ತಿ ಡಬ್ಲ್ಯುಟಿಓ - ವಿಶ್ವಬ್ಯಾಂಕ್ - ಐಎಂಎಫ್ ಜತೆ ಶಾಮಿಲಾಗಿದ್ದಾರೆ. ಅವರ ನಿರ್ದಿಷ್ಟ, ಸ್ಥಳೀಯ ಹೋರಾಟದಲ್ಲಿ ಅವರು ವಿಜಯ ಪಡೆದಿರಬಹುದು. ಇಲ್ಲದಿರಬಹುದು. ಆದರೆ ಅವರ ಸಮಸ್ಯೆಗಳಿಗೆ ಶಾಶ್ವತ ಪರಿಹಾರಕ್ಕೆ ಸ್ಥಳೀಯ, ಪ್ರಾದೇಶಿಕ, ದೇಶದ ಚೌಕಟ್ಟಿನೊಳಗೂ ಸಾಧ್ಯವಿಲ್ಲ. ಈಗಿನ ಜಾಗತಿಕ ವ್ಯವಸ್ಥೆ ಅದಕ್ಕೆ ಅವಕಾಶ ಕೊಡುವುದಿಲ್ಲ. ಇನ್ನೊಂದು ಬದಲಿ ಜಾಗತಿಕ ವ್ಯವಸ್ಥೆ ಅಗತ್ಯ. ಸಾಧ್ಯ ಎಂದು ಇವರೆಲ್ಲಾ ತಮ್ಮ ಅನುಭವಗಳಿಂದ ಕಂಡುಕೊಂಡಿದ್ದಾರೆ. ಇನ್ನೊಂದು ಜಾಗತಿಕ ವ್ಯವಸ್ಥೆ ರಾತ್ರೋರಾತ್ರಿ ಆಕಾಶದಿಂದ ಉದುರುವುದಿಲ್ಲ. ಯಾವುದೇ ಪ್ರವಾದಿ ಅದನ್ನು ಕೊಡುವುದಿಲ್ಲ. ಅದು ನಮ್ಮ ಮಧ್ಯದಿಂದಲೇ ಹುಟ್ಟಬೇಕು. ಇದಕ್ಕಾಗಿ ಅನುಭವಗಳ, ವಿಶ್ಲೇಷಣೆಗಳ ವಿನಿಮಯ, ವಿಚಾರ ಮಂಥನ ಬೇಕು. ಇದು ಸತತವಾಗಿ ನಡೆಯಬೇಕಾದ ಪ್ರಕ್ರಿಯೆ. ಇದಕ್ಕೊಂದು ವೇದಿಕೆ ಬೇಕು. ಜಾಗತಿಕ ಸೋಶಿಯಲ್ ಫೋರಂ ಮತ್ತು ಅದರ ಏಶ್ಯನ್ ಅವತಾರ ಏಶಿಯನ್ ಸೋಶಿಯಲ್ ಫೋರಂ ಇದಕ್ಕೆ ಕಂಡುಕೊಂಡ ಪರಿಹಾರ. ಫೋರಂ ಒಂದು ಬರಿಯ ವೇದಿಕೆ. ಅದು ಒಂದು ಸಂಘಟನೆ ಅಲ್ಲ. ಅದಕ್ಕೆ ನಿರ್ದಿಷ್ಟ ಕಾರ್ಯಕ್ರಮ - ಸದಸ್ಯತ್ವ ಇಲ್ಲ. ಸಾಮ್ರಾಜ್ಯಶಾಹಿ ಸಂಘಟನೆಗಳಿಗೆ ಮತ್ತು ದೈತ್ಯ ಬಹುರಾಷ್ಟ್ರೀಯ ಕಂಪನಿಗಳನ್ನು ಬಿಟ್ಟರೆ ಬೇರೆ ಎಲ್ಲರಿಗೂ ಸ್ವಾಗತ. ಇದು ಒಂದು ವಾರ್ಷಿಕ ಸಭೆ. (ವಿವರಗಳಿಗೆ ‘ಏನಿದು

ಶರತ

ಗಾಂಧಿ ನಿನ್ನ ಕೊಂದವರು ಜೀವಂತ

ಗಾಂಧಿ ಹಮ್ ಶರ್ಮಿಂದಾ ಹೈ
ತೇರಾ ಖಾತಿಲ್ ಜಿಂದಾ ಹೈ
ಏ ಬಡಾ ದೌರ್ಭಾಗ್ಯ ಹೈ!

★ ★ ★

ಗಾಂಧಿ ನಮಗೆ ನಾಚಿಕೆಯಾಗುತ್ತದೆ
ನಿನ್ನ ಕೊಂದವರಿನ್ನೂ ಜೀವಂತವಿದ್ದಾರೆ
ಇದು ದೊಡ್ಡ ದೌರ್ಭಾಗ್ಯವಾಗಿದೆ!


- ಸ್ವಾಮಿ ಅಗ್ನಿವೇಶ್

‘ಧಾರ್ಮಿಕ ಮತ್ತು ಜನಾಂಗೀಯ ಅಸ್ತಿತ್ವ - ಪ್ರಜಾಪ್ರಭುತ್ವಕ್ಕೆ ಸವಾಲು’ ಎಂಬ ಏಷಿಯಾ ಸಾಮಾಜಿಕ ವೇದಿಕೆಯ ಚರ್ಚಾ ಗೋಷ್ಠಿಯಲ್ಲಿ ಮಾತನಾಡುತ್ತಾ



‘ಸಮಾಜವಾದವೇ ಬದಲಿ - ಕಾಮನಬಿಲ್ಲು ಕೂಟ ಬಲಗೊಳ್ಳಲಿ’ - ಸೀತಾರಾಂ ಯೆಚೂರಿ

ಈ ಎಲ್ಲಾ ಸಂಭ್ರಮ, ಸಂವಾದ, ವೈವಿಧ್ಯತೆ, ಹಲವು ಗೊಂದಲಗಳ ನಡುವೆ ಈ ಫೋರಂ ಏನಾದರೂ ಸಾಧಿಸಿತೆ? ಈ ಎಲ್ಲಾ ಚಳುವಳಿಗಳ, ಸಂಘಟನೆಗಳು ಒಂದೆಡೆ ಕಲೆತದ್ದೇ ಅತ್ಯಂತ ಮಹತ್ವದ ಸಂಗತಿ. ಆದರೆ ಈ ಎಲ್ಲಾದರ ನಡುವೆ ಸಮಾಜವಾದದ ಕನಸು ಎಲ್ಲಾ ಕಳೆದುಹೋಯಿತೆ? ಸಾಮ್ರಾಜ್ಯಶಾಹಿ - ಬಂಡವಾಳಶಾಹಿಗೆ ಸಮಾಜವಾದವೇ ಬದಲಿ ಅಲ್ಲವೇ? ಅದಕ್ಕೆ ಇಷ್ಟೆಲ್ಲಾ ಗದ್ದಲ - ಗೊಂದಲಗಳು ಯಾಕೆ? ಎನ್ನುವ ಪ್ರಶ್ನೆ ಉದ್ಭವಿಸುವುದು ಸಹಜ. ಈ ಎಲ್ಲದಕ್ಕೆ ಉತ್ತರಿಸಿದವರು ಕೊನೆ ದಿನದ ಸಮ್ಮೇಳನದಲ್ಲಿ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ. ಎಲ್ಲಾ ಚಳುವಳಿಗಳು, ಪ್ರಗತಿಪರ ಸಂಘಟನೆಗಳು, ಎಡಪಕ್ಷಗಳು, ಎಡ ಸಂಘಟನೆಗಳು ತಮ್ಮ ಅನುಭವದಿಂದ ಸಾಮ್ರಾಜ್ಯಶಾಹಿ - ಬಂಡವಾಳಶಾಹಿ ವಿರುದ್ಧ ಹೋರಾಡಲು ಒಂದು ‘ಕಾಮನಬಿಲ್ಲು ಕೂಟ’ ಅಗತ್ಯ ಎಂದು ಕಂಡುಕೊಂಡಿವೆ. ಫೋರಂ ಅದಕ್ಕೆ ಮಹತ್ವದ ಚಾಲನೆ, ಸೃಜನಶೀಲತೆ, ಕ್ರಿಯಾಶೀಲತೆ ಒದಗಿಸಿದೆ. ಹಿಂದೆ ಈ ಚಳುವಳಿಗಳ ನಡುವೆ ಇದ್ದ ಭಿನ್ನಾಭಿಪ್ರಾಯ, ಬೇರೆ ಬೇರೆಯಾಗಿ ನಡೆಯುವ, ಸಂವಾದಕ್ಕಿಂತ ಹೆಚ್ಚು, ವಿವಾದಕ್ಕೆ ಇಳಿಯುತ್ತಿದ್ದ ಧೋರಣೆ ಕಡಿಮೆಯಾಗಿದೆ. ಬರುವ




‘ಸಮಾಜವಾದವೇ ಬದಲಿ’ ‘ಕಾಮನಬಿಲ್ಲು ಕೂಟ ಕಟ್ಟೋಣ’ ಎಂದು ಫೋರಂನಲ್ಲಿ ಘೋಷಿಸಿದ ಸೀತಾರಾಂ ಯೆಚೂರಿ

ದಿನಗಳಲ್ಲಿ ಈ ‘ಕಾಮನಬಿಲ್ಲು ಕೂಟ’ ಬಲಪಡಿಸಬೇಕು. ಈ ಪ್ರಕ್ರಿಯೆಯನ್ನು ತೀವ್ರಗೊಳಿಸಬೇಕು. ಈ ಎಲ್ಲಾ ಚಳುವಳಿಗಳು ಒಂದು ಅರ್ಥದಲ್ಲಿ ರಾಜಕೀಯ ಹೋರಾಟ. ಈ ಎಲ್ಲಾ ಜನತಾ ಹೋರಾಟಗಳು ಸಮಾಜವಾದಿ ಬದಲಿಯ ಹಲವು ಆಯಾಮಗಳ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲುತ್ತವೆ. ಆದರೆ ಸಾಮಾಜಿಕ ಚಳುವಳಿ, ಸ್ಥಳೀಯ ಚಳುವಳಿ, ನಿರ್ದಿಷ್ಟ ವಿಷಯಗಳ ಮೇಲೆ ಆಧಾರಿತವಾದವು - ಸ್ಪಷ್ಟ ರಾಜಕೀಯ ಸ್ವರೂಪ ಪಡೆದುಕೊಳ್ಳದೇ ಬದಲಿ ಜಗತ್ತು ಸಾಧ್ಯವಿಲ್ಲ. ಸಾಮ್ರಾಜ್ಯಶಾಹಿ ಜಾಗತೀಕರಣ ಸ್ಪಷ್ಟ ಸೈದ್ಧಾಂತಿಕ - ರಾಜಕೀಯ ಉದ್ದೇಶ ಹೊಂದಿದೆ. ಅದಕ್ಕೆ ಬದಲಿ ರೂಪಿಸಲು ‘ಕಾಮನ ಬಿಲ್ಲು ಕೂಟ’ ಸ್ಪಷ್ಟ ಬದಲಿ ಸೈದ್ಧಾಂತಿಕ ರಾಜಕೀಯ ರೂಪಿಸಬೇಕು. ಅದರ ಸಮಗ್ರ ಆಶಯವುಳ್ಳ ಸಮಾಜವಾದವೇ ಅಂತಹ ಬದಲಿ. ಭಾರತದಲ್ಲಿ ಕೋಮುವಾದಿ-ಫ್ಯಾಸಿಸಂ ಜಾಗತೀಕರಣದ ತಮ್ಮ ಈಗಾಗಲೇ ಈ ಎರಡೂ ಅಪಾಯಗಳ ಬಗ್ಗೆ ‘ಕಾಮನಬಿಲ್ಲು ಕೂಟ’ದಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ ಎನ್ನುವುದು ಸಂತಸದ ಸಂಗತಿ.

ಈ ಮೊದಲು ಫೋರಂನಲ್ಲಿ ಬಂದ ಹೆಚ್ಚಿನ ಚಳುವಳಿಗಳು, ಎಡ-ಪಕ್ಷಗಳ ಸಂಘಟನೆಗಳನ್ನು ಹತ್ತಿರ ಸೇರಿಸುತ್ತಿರಲಿಲ್ಲ. ಕೆಲವು ವೈರಿಗಳಂತೆ ನೋಡುತ್ತಿದ್ದವು. ಎಡ ಚಳುವಳಿಯಲ್ಲೂ ಇತರ ಸಂಘಟನೆಗಳ ಬಗ್ಗೆ ಸಂಶಯ ಇದೆ. ಈ ಅಸಹನೆ, ದ್ವೇಷ, ಸಂಶಯ ಮಾಯವಾಗಿ ಐಕ್ಯ ಹೋರಾಟದ ಆಶಾಕಿರಣ ಫೋರಂನಲ್ಲಿ ಕಂಡುಬಂತು. ಪರಿಸರ, ದಲಿತ, ಮಾನವಹಕ್ಕು ಮುಂತಾದ ಸಾಮಾಜಿಕ ಚಳುವಳಿಗಳು ಇದ್ದಷ್ಟೇ ಸಂಖ್ಯೆಯಲ್ಲಿ ಭಾರತದ ಎಲ್ಲಾ ಎಡಪಕ್ಷಗಳ - ಸಾಮೂಹಿಕ ಸಂಘಟನೆಗಳು ಭಾಗವಹಿಸಿದ್ದವು. ಇದು ಬಹುಶಃ ಹಿಂದೆಂದೂ ಆಗಿರಲಿಲ್ಲ. ಫೋರಂ ಸಮಾಜವಾದವೇ ಬದಲಿ ಎಂದು ಘೋಷಿಸಿಲ್ಲ ನಿಜ. ಬಹುಶ ಎಂದೂ ಘೋಷಿಸುವುದಿಲ್ಲ. ಆದರೆ ಫೋರಂ ಬಲಪಡಿಸುವ ಈ ‘ಕಾಮನಬಿಲ್ಲು - ಕೂಟ’ ತೀವ್ರ ಪ್ರಜಾಸತ್ತಾತ್ಮಕ ಜನಪದ ಬದಲಿಗೆ, ಸಮಾಜವಾದದತ್ತ ಪ್ರಮುಖ ಹೆಜ್ಜೆ ಎಂಬುದರ ಬಗ್ಗೆ ಫೋರಂನಲ್ಲಿ ಭಾಗವಹಿಸಿದ ಎಡಪಂಥೀಯರಿಗೆ ಯಾವುದೇ ಸಂಶಯ ಇಲ್ಲ. ಏಶಿಯನ್ ಸೋಶಿಯಲ್ ಫೋರಂ ಈ ಹೋರಾಟದಲ್ಲಿ ಅತ್ಯಂತ ಮಹತ್ವದ ಹೆಜ್ಜೆ. ○

...ಿ ವಿರೋಧಿ ಕುಂಭಮೇಳ

...ಲ್ ಫೋರಂನ ಮೊದಲ ಬೃಹತ್ ...ಕ್ಕೆ ಹೆಚ್ಚು ದೇಶಗಳಿಂದ ಆಕರ್ಷಿಸಿದ ಈ ...ನ್ನು ಸಾರಿದ ಈ ಉತ್ಸವ 'ಹೋರಾಟದ ...ತ, ಶಾಂತಿ, ಮಾನವಹಕ್ಕು, ಇತರ ...ಂಘಟನೆಗಳು, ಜನ ವಿಜ್ಞಾನ ಚಳುವಳಿ ...ತ್ತು ಕೋಮುವಾದಿ ಜಗತನ್ನು ಬಲವಾಗಿ ...ು. ಅದಕ್ಕೆ ಸಾಗಬೇಕಾದ ಹೋರಾಟಕ್ಕೆ ...ಗಳು, ಟಿ.ವಿ., ಸುದ್ದಿ ಮಾಧ್ಯಮಗಳು

...ನ ಕಾರ್ಯಕ್ರಮ

...ಶಿಯನ್ ಸೋಶಿಯಲ್ ಫೋರಂ ನೋಡಿ).

ಆದರೂ 15 ಸಾವಿರ ಜನ ಪ್ರತಿನಿಧಿಗಳು ಆರು ದಿನ ಏನು ಮಾಡಿದರು ಎಂದಿರಾ?

'ಮರೋ ಪ್ರಪಂಚಂ ಪಿಲಿಸಿಂದಿ' ಸೋಶಿಯಲ್ ಫೋರಂನ ರೂಪವೇ ...ಾಗಿತ್ತು. ಎಲ್ಲರನ್ನೂ ಹತ್ತು ಹಲವು ರೀತಿಯಲ್ಲಿ ಒಳಗೊಳ್ಳುವ ರೀತಿಯಲ್ಲಿ ಅದನ್ನು ಸಂಘಟಿಸಲಾಗಿತ್ತು. ಯಾರಿಗೂ ಯಾಕಪ್ಪ ಇಲ್ಲಿಗೆ ಬಂದೆ ಅಂತ ಅನಿಸಲಿಲ್ಲ. ಫೋರಂನಲ್ಲಿ ಒಂದೇ ಬಾರಿಗೆ ನಡೆಯುತ್ತಿದ್ದ ನೂರಾರು ಚಟುವಟಿಕೆಗಳಲ್ಲಿ ಯಾವುದನ್ನು ಆಯ್ದುಕೊಳ್ಳುವುದು ಎಲ್ಲರಿಗೂ ಸಮಸ್ಯೆಯಾಗಿತ್ತು. ಮೊದಲ ದಿನ ನಿಜಾಮ ಕಾಲೇಜಿನ ಬಯಲು ಸಭಾಂಗಣದಲ್ಲಿ ಅತ್ಯಂತ ಸ್ಫೂರ್ತಿದಾಯಕವಾಗಿ ಆರಂಭವಾದ ಫೋರಂನ ಮೊದಲ ದಿನವೇ ಎಲ್ಲರಿಗೂ ಇಲ್ಲಿಗೆ ...ರಲು ಪಟ್ಟ ಶ್ರಮ, ಕಷ್ಟ ವ್ಯರ್ಥವಾಗಿಲ್ಲ ...ನ್ನಿಸಿತ್ತು. (ವಿವರಗಳಿಗೆ 'ಸ್ಫೂರ್ತಿದಾಯಕ ...ದ್ಘಾಟನೆ' ನೋಡಿ).

ಮುಂದಿನ ನಾಲ್ಕು ದಿನದ ಕಾರ್ಯಕ್ರಮಗಳು ...ಜವಾಗಿಯೂ ಫ್ಯಾಕ್ ಆಗಿದ್ದವು. ಪ್ರತಿದಿನ ಬೆಳಿಗ್ಗೆ ...ರಿಂದ ರಾತ್ರಿ 11 ಗಂಟೆಯವರೆಗೆ ಏನಾದರೂ ...ಾರ್ಯಕ್ರಮ. ಅಲ್ಲ, ಹಲವಾರು ...ಾರ್ಯಕ್ರಮಗಳು ಪ್ರತಿದಿನ 9 ರಿಂದ 1 ವರೆಗೆ ...ಮುಖ ವಿಷಯಗಳ ಮೇಲೆ ಎರಡು ...ಮಾನಾಂತರ ಸಮ್ಮೇಳನ. ಇದು ನಿಜಾಂ ...ಲೇಜಿನ ಬಯಲಿನಲ್ಲಿ. ಇದಕ್ಕಾಗಿ ವಿಶೇಷವಾಗಿ ...ರ್ಮಿಸಿದ್ದ ಅರ್ಧಗೋಲಾಕೃತಿಯ ಎರಡು ...ಹತ್ ಚಪ್ಪರಗಳಲ್ಲಿ ನಡೆಯುತ್ತಿತ್ತು. ಈ ಸಮ್ಮೇಳನಗಳಲ್ಲಿ ತೆಗೆದುಕೊಳ್ಳಲಾದ ಪ್ರಮುಖ ವಿಷಯಗಳೆಂದರೆ - ಸಾಮಾಜಿಕ ಹಕ್ಕುಗಳು ; ಶಾಂತಿ ಮತ್ತು ಭದ್ರತೆ; ದೇಶ-ಪ್ರಜಾಸತ್ತೆ ಮತ್ತು ಅದರಿಂದ ಹೊರಗುಳಿದವರು; ಸಾಲ, ಬೆಳವಣಿಗೆ ಮತ್ತು ವ್ಯಾಪಾರ; ದಲಿತರು ಮತ್ತು ಜಾಗತೀಕರಣ; ಜಾಗತೀಕ'ರಣಕ್ಕೆ ಮಹಿಳೆಯರ ಪ್ರತಿರೋಧ; ಜನತಾ ಚಳುವಳಿಗಳು ಮತ್ತು ಬದಲಿ; ಸಂಪನ್ಮೂಲಗಳ ಮೇಲೆ ಜನರ ಹಕ್ಕುಗಳ ರಕ್ಷಣೆ - ಇವೆಲ್ಲಾ ಘನವಾದ, ಕಬ್ಬಿಣದ ಕಡಲೆಯಂತಹ ವಿಷಯಗಳು. ಪರಿಣತರು, ಅನುಭವಿಗಳು ಮಾತ್ರ ಹೇಳುವುದು - ಉಳಿದವರೆಲ್ಲಾ ಕೇಳುವುದು ಎಂದು ಅಂದುಕೊಳ್ಳಬೇಕಿಲ್ಲ. ಅಲ್ಲೂ ಫೋರಂ ಹೊಸತನ ತೋರಿತು. ಸಮ್ಮೇಳನದಲ್ಲಿ ಬರಿಯ ಪರಿಣಿತರ ಭಾಷಣಗಳಿರಲಿಲ್ಲ. ಚಳುವಳಿಯಲ್ಲಿ ತೊಡಗಿದವರ ಅನುಭವದ ಕಥನ, ಕಿರುನಾಟಕ, ಸ್ಕಿಡ್ ಶೋ, ಹಾಡುಗಳು, ವೈವಿಧ್ಯಮಯ ಘೋಷಣೆಗಳು - ಇವೆಲ್ಲಾ ಸೇರಿ ಸಮ್ಮೇಳನ ಶ್ರೀಮಂತ ಅನುಭವವಾಗಿತ್ತು. ಪ್ರತಿ ಸಮ್ಮೇಳನದಲ್ಲಿ 'ಸ್ಟಾರ್ ಆಕರ್ಷಣೆ' ಪ್ರಸಿದ್ಧ ಪರಿಣಿತರಾಗಿರಲಿಲ್ಲ. ಅನುಭವ ಕಥನಗಳನ್ನು ಕೊಟ್ಟ ಸಾಮಾನ್ಯರು 'ಸ್ಟಾರ್'ಗಳಾಗಿದ್ದರು. ಪ್ರಸಿದ್ಧ ಪರಿಣತರು (ಹಲವರು ಬಹಳ ಕಷ್ಟಪಟ್ಟು) ಇಂತಹ ಬೃಹತ್ ವೈವಿಧ್ಯಮಯ ಶ್ರೋತೃಗಳಿಗೆ ಸರಳವಾಗಿ

ಪುಟ 8 ಕ್ಕೆ

ಹೈದರಾಬಾದಿನಲ್ಲೇ ಏಕೆ?

ಏಶಿಯಲ್ ಸೋಶಿಯಲ್ ಫೋರಂಗೆ ಹೈದರಾಬಾದನ್ನು ಏಕೆ ಆಯ್ಕೆ ಮಾಡಲಾಯಿತು? ಇದಕ್ಕೆ ಸಂಘಟನಾ ಸಮಿತಿ ಸದಸ್ಯ ಚಕ್ರಪಾಣಿ ಉತ್ತರ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ವಿಶ್ವಬ್ಯಾಂಕ್‌ನ ಅಧೀನ ಕಂಪನಿಯಾಗಿ ಬದಲಾಯಿಸಿ, ಅವರ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾರೆ. ಆಂಧ್ರಪ್ರದೇಶ ಜಾಗತೀಕರಣದ ಕಹಿ ಉಂಡಿದೆ. ಜಾಗತೀಕರಣದ ವಿರುದ್ಧ ತೀವ್ರ ಸೆಣಸಾಟ - ವಿದ್ಯುತ್ ಬೆಲೆ ಏರಿಕೆ ವಿರುದ್ಧ ಎಡಪಕ್ಷಗಳು ನಡೆಸಿದ ಧೀರೋದಾತ್ತ ಹೋರಾಟವೂ ಇಲ್ಲೇ ನಡೆದಿದೆ. ಆಂಧ್ರಪ್ರದೇಶಕ್ಕೆ ಕ್ರಾಂತಿಕಾರಿ ಚಳುವಳಿಯ ಉಜ್ವಲ ಇತಿಹಾಸವಿದೆ. ಅದಕ್ಕಾಗಿ ಹೈದರಾಬಾದ್ ಆಯ್ಕೆ' ಎಂದರು.

...ಾಕಿಸ್ತಾನದ ಪ್ರಮುಖರಿಂಗೆ ಭಾರತ ಸರ್ಕಾರದಿಂದ ವೀಸಾ ನಕಾರ!?

ಫೋರಂನಲ್ಲಿ ಪಾಕಿಸ್ತಾನದಿಂದ ಬಹಳಷ್ಟು ಪ್ರತಿನಿಧಿಗಳು ಬರಲು ಆಶಿಸಿದ್ದರು. ಆದರೆ ಭಾರತ ಸರ್ಕಾರ ಕ್ಷುಲ್ಲಕ ಕಾರಣಗಳನ್ನು ಕೊಟ್ಟು ಹಲವು ಪ್ರಮುಖರಿಗೆ ವೀಸಾ ನಿರಾಕರಿಸಿತು. ಉದ್ಘಾಟನಾ ಸಮಾರಂಭದಲ್ಲಿ ಮಾತನಾಡ ಬೇಕಾಗಿದ್ದ ಅಸ್ಮಾ ಜಹಂಗೀರ್ ಅವರಿಗೆ ವೀಸಾ ನಿರಾಕರಿಸ ಲಾಯಿತು. ಅಸ್ಮಾ ಪಾಕಿಸ್ತಾನದ ಮಿಲಿಟರಿ ಸರ್ಕಾರದ ವಿರುದ್ಧ ದನಿ ಎತ್ತುತ್ತಿರುವ ಮಾನವ ಹಕ್ಕು-ಪ್ರಜಾಸತ್ತೆ ರಕ್ಷಣೆಗೆ ದುಡಿಯುತ್ತಿ ...ರುವ ಹೋರಾಟಗಾರ್ತಿ. ಆಕೆಯನ್ನು ದೇಶ ...ಬಿಡಲು ಪಾಕಿಸ್ತಾನ ಸರ್ಕಾರ ಅಡೆತಡೆ ಒಡ್ಡಿದರೆ ...ಅರ್ಥ ಮಾಡಿಕೊಳ್ಳಬಹುದು. ಭಾರತ ಸರ್ಕಾರಕ್ಕೆ ...ಏನು ಸಮಸ್ಯೆ? ಭಾರತದಲ್ಲಿ ಪ್ರಜಾಸತ್ತೆ ಇದೆ ...ಎಂದುಕೊಂಡವರಿಗೆ ಕಸಿವಿಸಿ. ಉದ್ಘಾಟನಾ ...ಸಮಾರಂಭದಲ್ಲಿ ಹಿರಿಯ ಗಾಂಧಿವಾದಿ ನಿರ್ಮಲಾ ದೇಶಪಾಂಡೆ ಈ ಬಗ್ಗೆ ತಿಳಿಸಿದಾಗ ಸಾವಿರಾರು ಕಂಠಗಳು ಭಾರತ ಸರ್ಕಾರಕ್ಕೆ ಛೀಮಾರಿ ಹಾಕಿದವು. ವೀಸಾ ತಿರಸ್ಕರಿಸಲ್ಪಟ್ಟ ಹಲವು ಪ್ರಮುಖ ಪಾಕಿಸ್ತಾನಿಗಳು ಭಾಗವಹಿಸ ಬೇಕಾಗಿದ್ದ, ಸೆಮಿನಾರು/ ಸಮ್ಮೇಳನಗಳಲೆಲ್ಲಾ ಭಾರತ ಸರ್ಕಾರಕ್ಕೆ 'ಛೀಮಾರಿ' ಬಿತ್ತು. ಏಶಿಯಾ ಸೋಶಿಯಲ್ ಫೋರಂಗೆ ಅಡ್ಡಗಾಲು ಹಾಕಲು ಪ್ರಯತ್ನಿಸಿದ ಇನ್ನೊಂದು ಸರ್ಕಾರ ಎಂದರೆ ಇಸ್ರೇಲ್ ಸರ್ಕಾರ. ಹಲವಾರು ಪ್ಯಾಲೆಸ್ಟೈನ್ ಪ್ರತಿನಿಧಿಗಳನ್ನು ಫೋರಂಗೆ ಬರದಂತೆ ತಡೆಯಲು ಪ್ರಯತ್ನಿಸಿತು. ಆದರೂ ಪ್ಯಾಲೆಸ್ಟೈನ್‌ರು ದೊಡ್ಡ ಸಂಖ್ಯೆಯಲ್ಲಿ ಬಂದರು. ಪ್ಯಾಲೆಸ್ಟೈನರಿಗೆ ಇಸ್ರೇಲಿ ಸರ್ಕಾರದ ಕರಾಮತ್ತುಗಳನ್ನು ದಾಟಿ ಬರಲು ಗೊತ್ತು. ಭಾರತ ಸರ್ಕಾರ ಭಯೋತ್ಪಾದಕ ಸರ್ಕಾರಗಳ ಕಂಪನಿಯಲ್ಲಿದೆ.

ಹೋರಾಟದ ಬೆಳಕಿನಲ್ಲಿ ಮೂಡಿ ಬರುತ್ತಿದ ಕಾಮಬಿಲ್ಲು ಕೂಟ




ಉದ್ಘಾಟನಾ ಸಮಾರಂಭದಲ್ಲಿ

"ಜಾಗತೀಕರಣ ನೀತಿಗಳನ್ನು ಹಿಮ್ಮೆಟ್ಟಿಸಲು ಒಂದಾಗಿ ನಿಲ್ಲಬೇಕು"

ವಿಶ್ವದ ಏಕಮಾತ್ರ ಶಕ್ತಿಯೊಂದು ಇಡೀ ಜಗತ್ತನ್ನು ತನ್ನ ಅಧೀನಕೊಳಪಡಿಸಿಕೊಳ್ಳಲು ನಡೆಸಿರುವ ಪ್ರಕ್ರಿಯೆಯೇ ಇಂದಿನ ಜಾಗತೀಕರಣವಾಗಿದೆ. ಇದರ ಬುದ್ಧಿಗೇಡಿ ಮುನ್ನಡೆಯು ಜನತೆಯನ್ನು ಬಾಧಿಸುತ್ತಿದೆ. ಜಾಗತೀಕರಣ ಇಂದಿನ ವಾಸ್ತವ, ಜನತೆಯ ಬದುಕನ್ನು ಅದು ಕಸಿಯುತ್ತಿದೆ. ಇಡೀ ವಿಶ್ವವನ್ನು ಸಾಲದ ಬವಣೆಗೆ ಅದು ದೂಡಿದೆ. ಯಾವುದೇ ರಾಷ್ಟ್ರವು ಅದರಿಂದ ಹೊರತಾಗಿಲ್ಲ. ಈ ಪ್ರಕ್ರಿಯೆಯ ಭಾಗವಾಗಿ ಸುಧಾರಣೆಗಳು ನಡೆದಿವೆ. ಸಮಸ್ಯೆಗಳ ಪರಿಹರಿಸಿಕೊಂಡು ಮುನ್ನಡೆಯಲು ಸುಧಾರಣೆಗಳು ಅಗತ್ಯ. ಅವುಗಳಿಂದ ಜನತೆಗೆ ಉದ್ಯೋಗ ದೊರಕಬೇಕೆ ವಿನಃ ಜನತೆಯನ್ನು ತಮ್ಮ ದುಡಿಮೆಯಿಂದ ಹೊರದೂಡಬಾರದು. ಹಾಗಾಗಿ ಇಂದಿನ ಈ ಸುಧಾರಣೆಗಳು ಯಾರಿಗಾಗಿ? ಮತ್ತು ಏತಕ್ಕಾಗಿ? ಎಂಬ ಪ್ರಶ್ನೆ ಸರ್ವರ ಮುಂದಿರುವ ಪ್ರಶ್ನೆಯಾಗಿದೆ ಎಂದವರು ಭಾರತದ ನಿಕಟಪೂರ್ವ ರಾಷ್ಟ್ರಪತಿಗಳಾದ ಕೆ.ಆರ್.ನಾರಾಯಣನ್‌ರವರು.

ಸಮಾರೋಪದಲ್ಲಿ ಮಾಜಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್



ಜನತೆ ಉತ್ತರ ಹೇಳಬೇಕು

ಏಷಿಯಾ ಸಾಮಾಜಿಕ ವೇದಿಕೆಯ ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ಭಾರತದಲ್ಲಿ ಬೆಲೆ ಕಟ್ಟಲಾಗದ ಸಾರ್ವಜನಿಕ ಉದ್ದಿಮೆಗಳನ್ನು ಅವಿರತ ಶ್ರಮದ ಮೂಲಕ ನಾವು ನಿರ್ಮಿಸಿದ್ದೇವೆ. ರಾಷ್ಟ್ರದ ಹೆಗ್ಗಳಿಕೆಯ ಸಂಕೇತಗಳಾದ ಅವುಗಳನ್ನು ಲಾಭಕ್ಕಾಗಿ ಖಾಸಗೀಕರಿಸುವುದು ಸಮ್ಮತವಲ್ಲ. ಇಂತಹ ದಿವಾಳಿಕೋರ ನೀತಿಗಳಿಗೆ ಜನತೆ ತಕ್ಕ ಉತ್ತ ನೀಡಬೇಕೆಂದರು.

ವಿಶ್ವ ಆರ್ಥಿಕ ವೇದಿಕೆಗೆ ಪರ್ಯಾಯವಾಗಿ ಜರುಗುತ್ತಿರುವ ವಿಶ್ವ ಸಾಮಾಜಿಕ ವೇದಿಕೆ, 'ಮತ್ತೊಂದು ವಿಶ್ವ ಸಾಧ್ಯವಿದೆ' ಎಂಬ ಘೋಷಣೆಯೊಂದಿಗೆ ನಡೆಯುತ್ತಿದೆ. ಮಾರ್ಕ್ಸ್ ಮತ್ತು ಎಂಗೆಲ್ಸ್ ಈ ಹಿಂದೆಯ 'ಮತ್ತೊಂದು ವಿಶ್ವದ ಸಾಧ್ಯತೆ' ಬಗ್ಗೆ ತಿಳಿಸಿದ್ದಾರೆ. ಪ್ರಸ್ತುತ ಅನೇಕ ಮಂದಿ ಸಮಾಜವಾದ ಸತ್ತುಹೋಯಿತು, ಇನ್ನು ಮುಂದೆ ಪ್ರಭುತ್ವದ ಪಾತ್ರ ಏನೂ ಇಲ್ಲ ಎಂದು ಬೊಬ್ಬೆಯಿಡುತ್ತಿದ್ದಾರೆ. ಆದರೆ ಪ್ರಭುತ್ವದ - ಸರ್ಕಾರದ ಪಾತ್ರ ಆರ್ಥಿಕತೆಯಲ್ಲಿ ಅನಿವಾರ್ಯ. ಅಮೆರಿಕಾದ ಖಾಸಗಿ ರಂಗಕ್ಕೆ ಅದರ ಅಧ್ಯಕ್ಷರಾದ ಜಾರ್ಜ್.ಡಬ್ಲ್ಯು.ಬುಶ್ ಇತ್ತೀಚಿಗೆ ಪ್ರಕಟಿಸಿರುವ 300 ದಶಲಕ್ಷ ಡಾಲರ್ ಸಹಾಯಧನವೇ ಇದಕ್ಕೆ ಉದಾಹರಣೆ ಎಂದರು.

'ನೂತನ ಜಾಗತಿಕ ವ್ಯವಸ್ಥೆಯನ್ನು ರೂಪಿಸಲು, ಐಎಂಎಫ್-ವಿಶ್ವಬ್ಯಾಂಕ್ ಮತ್ತು ಅಮೆರಿಕಾ ಸರ್ಕಾರವು 'ವಾಶಿಂಗ್‌ಟನ್ ಸರ್ವಸಮ್ಮತಿ' ಯನ್ನು ರೂಪಿಸಿದ್ದು, ಐಎಂಎಫ್ ವಸಾಹತು ರಾಜನಂತೆ ವರ್ತಿಸುತ್ತಿದೆ" ಎಂಬ ವಿಶ್ವಬ್ಯಾಂಕ್‌ನ ಮುಖ್ಯ ಅರ್ಥಶಾಸ್ತ್ರಜ್ಞರಾಗಿ ಕಾರ್ಯನಿರ್ವಹಿಸಿರುವ ನೊಬೆಲ್ ಪ್ರಶಸ್ತಿ ವಿಜೇತ ಅಮೆರಿಕಾದ ಜೋಸೆಫ್ ಸ್ಟಿಗ್‌ಲಿಟ್ಸರ ಮಾತುಗಳನ್ನು ಉದಾಹರಿಸಿದ ನಾರಾಯಣನ್‌ರವರು ತಾವು **ವಿವಿಧ ಧರ್ಮಗಳು ಹಾಗೂ ರಾಷ್ಟ್ರೀಯತೆಗಳುಳ್ಳ ಬಹುಸಂಸ್ಕೃತಿಯ ಜಗತ್ತಿನಲ್ಲಿ ನಂಬಿಕೆ ಇರಿಸಿದ್ದೇವೆ. ಅದು ಹಾಗೆ ಉಳಿಯಬೇಕೆಂದು ಬಯಸುತ್ತೇವೆ. ನಮಗೆ ಏಕಧ್ರುವ ವ್ಯವಸ್ಥೆಯಡಿಯ ಜಾಗತೀಕರಣ ಬೇಕಿಲ್ಲ. ಬದಲಾಗಿ ಬೇಕಿರುವುದು ಬಹುಧ್ರುವ ವ್ಯವಸ್ಥೆ.**

ಏಶಿಯಾದ ಎಲ್ಲಾ ರಾಷ್ಟ್ರಗಳು ಜಾಗತೀಕರಣ ಚಾಲಿತ ಉದಾರೀಕರಣ ನೀತಿಗಳನ್ನು ಹಿಮ್ಮೆಟ್ಟಿಸಲು ಒಂದಾಗಿ ನಿಲ್ಲಬೇಕು..

ಬ್ರಿಟಿಶರನ್ನು ಹಿಮ್ಮೆಟ್ಟಿಸಲು ಭಾರತ ನಡೆಸಿದ ಸ್ವತಂತ್ರ ಸಂಗ್ರಾಮದಲ್ಲಿ ರಾಷ್ಟ್ರದ ಜನತೆ ಒಂದಾಗಿ ಎದ್ದು ನಿಂತಂತೆ, ಇಡೀ ಏಶಿಯಾದ ಜನತೆ ಎದ್ದು ನಿಲ್ಲಬೇಕು. ಈ ನಿಟ್ಟಿನಲ್ಲಿ ಹೈದರಾಬಾದಿನಲ್ಲಿ ಜರುಗಿರುವ ಏಶಿಯಾ ಸಾಮಾಜಿಕ ವೇದಿಕೆ ನಾಂದಿಯಾಗಲಿ ಎಂದರು.

ಸಮಾರೋಪ ಸಮಾರಂಭವನ್ನು ಉದ್ದೇಶಿಸಿ ಎಐಡಿಡಬ್ಲ್ಯುಎ ದ ಬೃಂದಾ ಕಾರಟ್, ಮಲೇಶಿಯಾದ ಮೊಹಿದ್ದೀನ್ ಅಬ್ದುಲ್ ಖಾದರ್, ರಾಂಚಿ ವಿ.ವಿ.ಯ ನಿವೃತ್ತ ಉಪಕುಲಪತಿ ಡಾ. ರಾಮ್ ದಯಾಲ್ ಮುಂಡಾ, ಮುಂಬೈಯ ವಿ.ವಿ.ಯ ಡಾ. ಬಾಲಚಂದ್ರ ಮುಂಜ್ರೇಕರ್ ಮತ್ತು ಬ್ರೆಜಿಲ್‌ನ ಫ್ರಾನ್‌ಸಿಸ್ಕೊ ವೈಟೆಕರ್ ಮಾತನಾಡಿದರು.

ಬರ್ಮಾದ ಹೋರಾಟಗಾರ್ತಿ ಹ್ಯಾನ್ ಸ್ಯಾನ್ ಸೂಕಿಯ ಧ್ವನಿಮುದ್ರಿತ ಭಾಷಣವನ್ನು ಬಿತ್ತರಿಸಲಾಯಿತು. □

ಇನ್ನೊಂದು ಜಗತ್ತು ಸಾಧ್ಯ'.....

ಪುಟ 7 ರಿಂದ

ಗುರುವಾದ ವಿಷಯಗಳನ್ನು ತಿಳಿ ಹೇಳುವುದನ್ನು ಸಾಧಿಸಿದರು. ಇಷ್ಟು ದೇಶಗಳಿಂದ ಇಷ್ಟು ವೈವಿಧ್ಯಮಯ ಹಿನ್ನಲೆಗಳಲ್ಲಿ ಬಂದಿದ್ದರೂ ಭಾಷೆ ಸಂವಾದಕ್ಕೆ, ಭಾವನಾತ್ಮಕ ಮಿಡಿತಕ್ಕೆ ಅಡ್ಡಿ ಬರಲಿಲ್ಲ. ರಾಜಸ್ತಾನದ ಹಸಿವು ಸಾವುಗಳಲ್ಲಿ ಇಡೀಕುಟುಂಬ ಕಳೆದುಕೊಂಡ ಸಹಾರಿಯಾ ಯುವಕ, ಶ್ರೀಲಂಕಾದ ರಫ್ತು ವಲಯಗಳಲ್ಲಿ ದುಡಿಯುವ ಮಹಿಳೆ ಚಂದ್ರ, ಅಣು ಯುದ್ಧದಲ್ಲಿ ಬದುಕುಳಿದ ಜಪಾನಿ ವೃದ್ದೆ ಮುಶುಕೋಶಿ ಅವರ ಭಾಷೆಗಳಲ್ಲಿ ಮಾತನಾಡಿದಾಗ ಹೇಗೋ ಎಲ್ಲರಿಗೂ (ಅದರ ಭಾಷಾಂತರ ಮಾಡುವ ಮೊದಲೇ) ಅರ್ಥವಾದಂತಿತ್ತು. ಅತ್ಯಂತ ಆಸಕ್ತಿ ಮತ್ತು ನಿಶ್ಶಬ್ದವಾಗಿ ಕೇಳಲಾಯಿತು ಇಂತಹ ಹೇಳಿಕೆಗಳನ್ನು. ಎಷ್ಟೆಲ್ಲಾ ವೈವಿಧ್ಯತೆ, ಆದರೂ ನಮ್ಮ ಸಮಸ್ಯೆಗಳಲ್ಲಿ, ಸನ್ನಿವೇಶ ಗಳಲ್ಲಿ ಎಷ್ಟು ಸಾಮ್ಯ ಎಂದು ಆಶ್ಚರ್ಯವಾಗುವಷ್ಟು ಎರಡೂ ಸಮ್ಮೇಳನಗಳಲ್ಲಿ ಆರಿಸಿದ ಭಾಗಗಳನ್ನು ಕೇಳಬೇಕೆಂದಿದ್ದವರು, ಎರಡಲ್ಲಿ ಭಾಗವಹಿಸ ದವರೂ ಇದ್ದರು. ಎರಡು ಬೃಹತ್ ಸಮ್ಮೇಳನದ ಮಂಟಪಗಳಿಗೆ ಬಿಡುವೆ ಇರಲಿಲ್ಲ. ಇಡೀ ಫೋರಂನ ನಾಲ್ಕು ದಿನಗಳ ಸಭೆಗಳಲ್ಲಿ ಊಟದ, ಕಾಫಿ ಬಿಡುವು ಇರಲಿಲ್ಲ. ಸತತವಾಗಿ ಕಾರ್ಯಕ್ರಮ ನಡೆಯುತ್ತಿತ್ತು. ಮಧ್ಯಾಹ್ನ ಒಂದರಿಂದ ಎರಡವರೆವರೆಗೆ ವಿವಿಧ ಸಂಘಟನೆಗಳಿಂದ ವಿವಿಧ ಸನ್ನಿವೇಶಗಳಿಂದ ಬಂದ ಸಾಮಾನ್ಯ ಜನರ ಅನುಭವ ಕಥನಗಳಿಗೆ ಮೀಸಲಾಗಿತ್ತು. ಅತ್ಯಂತ ಹೃದಯಸ್ಪರ್ಶಿ ಅನುಭವಗಳು. ಇದಕ್ಕೆ 'ಜನರ ದನಿ' ಎಂದು ಹೆಸರಿಸಲಾಗಿತ್ತು. ಆದರೆ 'ಜನರ ದನಿ' ಮತ್ತು ಊಟದ ಮಧ್ಯೆ ಆಯ್ಕೆ ಮಾಡಬೇಕಾಗಿತ್ತು! 'ಬಫೆ ಊಟ' ತೆಗೆದುಕೊಂಡು ಹೋಗಿ 'ಜನರ ದನಿ' ಆಲಿಸಿದವರೂ ಇದ್ದರು.

ಮಧ್ಯಾಹ್ನದ ಮೇಲೆ ನೂರಾರು ಆಯ್ಕೆಗಳು

ಮಧ್ಯಾಹ್ನ ಊಟವಾದ ಮೇಲಂತೂ ಮಹಾಪೂರ. ನೂರಾರು ಆಯ್ಕೆಗಳು. ಅದು ಹತ್ತಾರು ಬೇರೆ ಬೇರೆ ಸ್ಥಳಗಳಲ್ಲಿ. ಮುಖ್ಯವಾಗಿ ನಿರ್ದಿಷ್ಟ ವಿಷಯಗಳ ಮೇಲೆ ಸೆಮಿನಾರುಗಳು, ವರ್ಕ್‌ಶಾಪ್‌ಗಳು. ಪ್ರತಿದಿನ ಸುಮಾರು 60, ಮೂವತ್ತು-ನಲ್ವತ್ತು ಬೇರೆ ಬೇರೆ ಸ್ಥಳಗಳಲ್ಲಿ, ಪ್ರತಿ ಸೆಮಿನಾರು/ ವರ್ಕ್‌ಶಾಪ್‌ಗಳಲ್ಲಿ 50 ರಿಂದ 500 ವರೆಗೆ ಪಾಲುಗೊಂಡರು (ವಿಷಯ, ಭಾಷಣಕಾರರು, ಜಾಗದ ಮೇಲೆ ಅವಲಂಬಿಸಿ) ಇಲ್ಲೂ ಅತ್ಯಂತ ತೀವ್ರವಾದ ಪಾಲ್ಗೊಳ್ಳುವಿಕೆ ಕಂಡು ಬಂತು. ಪ್ರತಿ ಸೆಮಿನಾರು-ವರ್ಕ್‌ಶಾಪ್ ಸಾಮಾನ್ಯವಾಗಿ ಒಂದಕ್ಕಿಂತ ಹೆಚ್ಚು ಸಂಘಟನೆಗಳು ಸಂಘಟಿಸಿದ್ದವು. ಈ ಸೆಮಿನಾರು-ವರ್ಕ್‌ಶಾಪ್‌ಗಳಲ್ಲಿ ವಿವಿಧ ಚಳುವಳಿ/ ಸಂಘಟನೆಗಳ ನಡುವೆ ವಿಚಾರ-ವಿನಿಮಯ, ಸಂವಾದ ತೀವ್ರವಾಗೇ ನಡೆಯಿತು. ಇಲ್ಲೂ ಅಷ್ಟೇ ಭಾಷೆ ಅಡ್ಡಿಯಾಗಲಿಲ್ಲ. ಸೆಮಿನಾರು - ವರ್ಕ್‌ಶಾಪ್‌ಗಳಲ್ಲಿ ಹೆಚ್ಚಾಗಿ ಎಲ್ಲಾ ಭಾಷಣಕಾರರಿಗೂ ಭಾಷಾಂತರಗಳಿರುತ್ತಿರಲಿಲ್ಲ. ಆದರೂ ಸಂವಾದಕ್ಕೆ ಅಡ್ಡಿಯಾಗಲಿಲ್ಲ. ಕೆಲವೊಮ್ಮೆ ಭಾಷಾಂತರಕಾರರು ಶ್ರೋತೃಗಳಿಂದಲೇ ಪುಟಿದು ಬಂದು ಸ್ವಯಂಸ್ಫೂರ್ತಿಯಾಗಿ ತಯಾರಾಗುತ್ತಿದ್ದರು. ಸಾಮಾನ್ಯವಾಗಿ



'ಕಾಣುವ ಕೆಲಸ, ಕಾಣದ ಮಹಿಳೆಯರು' ಪಿ.ಸಾಯಿನಾಥರ ಫೋಟೋ ಪ್ರದರ್ಶನದಲ್ಲಿನ ಒಂದು ಚಿತ್ರ


ಸೆಮಿನಾರುಗಳು -ವರ್ಕ್‌ಶಾಪ್‌ಗಳು ಐದೂವರೆ - ಆರಕ್ಕೆ ಮುಗಿದು ಪ್ರತಿನಿಧಿಗಳ ನಿಜಾಂ ಕಾಲೇಜು ಬಯಲಿಗೆ ಮರಳುತ್ತಿದ್ದರು. ಸೆಮಿನಾರು ವರ್ಕ್‌ಶಾಪ್ ತಾಣಗಳು ನಿಜಾಂ ಕಾಲೇಜಿನಿಂದ ಒಂದು ಕಿಲೋಮೀಟರ್‌ನಿಂದ 5 ಕಿ.ಮಿ. ವರೆಗೆ ದೂರ ಇದ್ದವು. ಹೋಗುವಾಗಲೋ ಬರುವಾಗಲೋ ದಾರಿತಪ್ಪಿ ಪರದಾಡಿದವರು ಎಷ್ಟೋ! ಐದುವರೆಯಿಂದ ಪುನಃ ಮುಖ್ಯ ಎರಡು ಮಂಟಪಗಳಲ್ಲಿ 'ಪ್ಯಾನೆಲ್ ಚರ್ಚೆ'. ಇನ್ನಷ್ಟು 'ಜನರ ದನಿ'ಗಳು.

ಏನಿದು ಏಶಿಯನ್ ಸೋಶಿಯಲ್ ಫೋರಂ?

ಏಶಿಯನ್ ಸೋಶಿಯಲ್ ಫೋರಂ ಕಳೆದ ಎರಡು ವರ್ಷಗಳಿಂದ ಬ್ರೆಜಿಲ್‌ನ ಪೋರ್ಟೋ ಅಲೆಗ್ರೆ ಎಂಬಲ್ಲಿ ಪ್ರತಿ ಫೆಬ್ರವರಿಯಲ್ಲಿ ನಡೆಯುತ್ತಿರುವ ಜಾಗತಿಕ ಸೋಶಿಯಲ್ ಫೋರಂನ ಏಶ್ಯನ್ ಅವತಾರ. 1995 ರಲ್ಲಿ ಅಮೆರಿಕದ ಸಿಯಾಟಲ್‌ನಲ್ಲಿ ಡಬ್ಲ್ಯುಟಿಓ ಸಭೆಯ ಸಂದರ್ಭದಲ್ಲಿ ಆರಂಭವಾಗಿ ಜಾಗತಿಕವಾಗಿ ಹಬ್ಬಿದ ವ್ಯಾಪಕ ಸಾಮ್ರಾಜ್ಯಶಾಹಿ, ಜಾಗತೀಕರಣ - ವಿರೋಧಿ ಪ್ರತಿಭಟನೆಯ ಮುಂದುವರಿಕೆಯಾಗಿ ಇದು ಆರಂಭವಾಯಿತು. ಪ್ರತಿವರ್ಷ ಸಾಮ್ರಾಜ್ಯಶಾಹಿ ಜಾಗತೀಕರಣದ ಪ್ರತಿನಿಧಿಗಳು ಸೇರಿ ನಡೆಸುವ ಜಾಗತಿಕ ಆರ್ಥಿಕ ಫೋರಂನ ಸಮಯದಲ್ಲೇ! ಅದಕ್ಕೆ ಪ್ರತಿಭಟನೆಯಾಗಿ ನಡೆಯುವಂತಹದು. ಸಾಮ್ರಾಜ್ಯಶಾಹಿ-ಜಾಗತೀಕರಣಕ್ಕೆ ವಿರುದ್ಧವಾಗಿರುವ ಎಲ್ಲಾ ಸಂಘಟನೆಗಳು, ಚಳುವಳಿಗಳು, ಒಂದೆಡೆ ಕಲೆತು ಚರ್ಚಿಸಿ ಅದಕ್ಕೆ ಬದಲಿ ರೂಪಿಸಲು ಆರಂಭವಾದ ವೇದಿಕೆ. ಸೋಶಿಯಲ್ ಫೋರಂ ಒಂದು ಸಂಘಟನೆಯಲ್ಲ. ಒಂದು ವೇದಿಕೆ. ಸಾಮ್ರಾಜ್ಯಶಾಹಿ-ಜಾಗತೀಕರಣಕ್ಕೆ ವಿರುದ್ಧವಾಗಿರುವವರನ್ನು ಒಂದೆಡೆ ತಂದು ಅದಕ್ಕೆ ಬದಲಿ ರೂಪಿಸುವ ಪ್ರಕ್ರಿಯೆ. ಈ ವರ್ಷದಿಂದ ಈ ಪ್ರಕ್ರಿಯೆಯನ್ನು ಎಲ್ಲಾ ಖಂಡಗಳಿಗೆ ತಲುಪಿಸುವ ಕೆಲಸ ಆರಂಭವಾಗಿದ್ದು, ನವೆಂಬರ್‌ನಲ್ಲಿ ಇಟಲಿಯ ಫ್ಲೋರೆನ್ಸ್‌ನಲ್ಲಿ ಯುರೋಪಿಯನ್ ಸೋಶಿಯಲ್ ಫೋರಂ ನಡೆಯಿತು. ಜನವರಿಯಲ್ಲಿ ಏಶಿಯನ್ ಸೋಶಿಯಲ್ ಫೋರಂ ನಡೆಯಿತು.

ನೂರು ಹೂವುಗಳು - ಸಾವಿರಾರು ನದಿಗಳು

'ಇನ್ನೊಂದು ಜಗತ್ತುಸಾಧ್ಯ' ಎಂಬ ಘೋಷಣೆ ಈಗಿನ ಜಾಗತಿಕ ವ್ಯವಸ್ಥೆಗೆ ಬದಲಿ ಇದೆ ಎಂಬ ಸ್ಪಷ್ಟ ಧೋರಣೆ ಒಳಗೊಂಡಿದೆ. ಅದೇ ರೀತಿ ಈ ಬದಲಿಗೆ ಅಂತರ್ರಾಷ್ಟ್ರೀಯ ಆಯಾಮ ಇದೆ ಎಂದೂ ಧ್ವನಿಸುತ್ತದೆ. ಫೋರಂ ನಲ್ಲಿ ಭಾಗವಹಿಸಿದ ಬಹುಸಂಖ್ಯಾತ ಸಂಘಟನೆಗಳಿಗೆ (ಒಟ್ಟು 840) ಈ ಬಗ್ಗೆ ತಮ್ಮದೇ ಆದ ಕಲ್ಪನೆ ಇದೆ. ಆದರೂ ಇಂತಹ ಫೋರಂನಲ್ಲಿ ಭಾಗವಹಿಸುತ್ತಿವೆ. ಈ ಬಗ್ಗೆ ತಮ್ಮ ಧೋರಣೆ ತಿದ್ದಿಕೊಳ್ಳಲು, ಬದಲಾಯಿಸಿಕೊಳ್ಳಲು ತಯಾರಿದೆ. ಈ ಬಗ್ಗೆ ಸಂವಾದ, ವಿಚಾರ ಮಂಥನಕ್ಕೆ ತಯಾರಿವೆ. ಜನವಿಜ್ಞಾನ, ಪರಿಸರ, ಮಾನವ ಹಕ್ಕು, ದಲಿತ, ಶಾಂತಿ, ಶಿಕ್ಷಣ, ಆರೋಗ್ಯಕ್ಕೆ ಸಂಬಂಧಿಸಿದ ಸ್ವಯಂಸೇವಾ ಸಂಘಟನೆಗಳು. ಇವುಗಳಲ್ಲಿ ಒಂದು ನಿರ್ದಿಷ್ಟ ವಿಷಯ (ಉದಾ: ಮಹಿಳಾ ಆರೋಗ್ಯ, ನರ್ಮದಾ ಆಣೆಕಟ್ಟು) ಅಥವಾ ನಿರ್ದಿಷ್ಟ ಪ್ರದೇಶಕ್ಕೆ ಮೀಸಲಾದ ಸಂಘಟನೆಗಳಿವೆ. ಇವುಗಳಲ್ಲಿ ಕೆಲವು ಸಂಘಟನೆಗಳು ತಮ್ಮದೇ ಜಾಲ ಹೊಂದಿವೆ. ಇತರ ಸಂಘಟನೆಗಳೊಂದಿಗೆ ಕೆಲಸ ಮಾಡುತ್ತಿವೆ. ಇವುಗಳಲ್ಲಿ ಕೆಲವು ಸರ್ಕಾರಿ, ಸರ್ಕಾರೇತರ (ದೇಶೀಯ, ಅಂತರ್ರಾಷ್ಟ್ರೀಯ) ಫೌಂಡೇಶನ್‌ಗಳ ಹಣ ಅನುದಾನ ಸಹ ಪಡೆಯುತ್ತಿವೆ. ರೈತ, ಕಾರ್ಮಿಕ, ಕೃಷಿಕೂಲಿ ಕಾರರ, ವಿದ್ಯಾರ್ಥಿ, ಯುವಜನ, ಮಹಿಳೆಯರ ಸಂಘಟನೆಗಳು ಇನ್ನೊಂದು ರೀತಿಯ ಸಂಘಟನೆಗಳು. ಫೋರಂನಲ್ಲಿ ಭಾಗವಹಿಸಿದ ಇಂತಹ ಸಂಘಟನೆಗಳಲ್ಲಿ ಹೆಚ್ಚಿನವು ಸ್ಪಷ್ಟ ಎಡಪಂಥೀಯ ವಿಚಾರಧಾರೆ ಯಾಗಿದ್ದವು. ಬೆಳವಣಿಗೆಯ ಹಲವು ಆಯಾಮಗಳ ಬಗ್ಗೆ (ಉದಾ: ವಿಜ್ಞಾನದ ಪಾತ್ರ, ವಿದೇಶಿ ಸಾಲ, ಬೆಳವಣಿಗೆ ಸಿದ್ಧಾಂತಗಳು, ಕೃಷಿಯಲ್ಲಿ ಜೈವಿಕ ತಂತ್ರಜ್ಞಾನ) ಕೆಲಸ ಮಾಡುವ ಅಧ್ಯಯನ/ ಶಿಕ್ಷಣದಲ್ಲಿ ತೊಡಗಿರುವ ಸಂಘಟನೆಗಳು ಇನ್ನೊಂದು ಬಗೆಯ ಸಂಘಟನೆಗಳು. ಇವರಲ್ಲದೆ ಯಾವುದೇ ಸಂಘಟನೆಗೆ ಸೇರದ ವ್ಯಕ್ತಿಗಳು (ಬುದ್ದಿಜೀವಿಗಳು, ಪತ್ರಕರ್ತರು, ಕಲಾವಿದರು, ಫಿಲಂ ಡೈರೆಕ್ಟರುಗಳು, ಇತ್ಯಾದಿ) ಇಲ್ಲಿ ಬಂದಿದ್ದರು. ಫೋರಂನಲ್ಲಿ ಈ ಎಲ್ಲದರ ಪರಿಣಾಮವಾಗಿ 'ನೂರು ಹೂವುಗಳು' ಅರಳಿದವು. ಬದಲಿ ಜಾಗತಿಕ ವ್ಯವಸ್ಥೆಯ ನೂರಾರು ಆಯಾಮಗಳ ಬಗ್ಗೆ ಚರ್ಚೆಯಾಯಿತು. ಸಾಕಷ್ಟು ಸ್ಪಷ್ಟತೆ ಸಹ ಬಂತು. ಹಲವು ಚಳುವಳಿಗಳ 'ಸಾವಿರಾರು ನದಿಗಳು' ಐಕ್ಯ ಹೋರಾಟದ ಸಾಗರಕ್ಕೆ ಸೇರಿ ಭೋರ್ಗರೆದವು. ಬಿಜಿವಿಎಸ್ ಸೇರಿರುವ IPSN(ಜನ ವಿಜ್ಞಾನ ಜಾಲ)ದಿಂದ 1500 ರಷ್ಟು ಪ್ರತಿನಿಧಿಗಳು, ಒಟ್ಟಾರೆ ದಲಿತ ಚಳುವಳಿಗಳಿಂದ 1500 ಪ್ರತಿನಿಧಿಗಳು, ಜನವಾದಿ ಮಹಿಳಾ ಸಮಿತಿಯಿಂದ, ಡಿವೈಎಫ್‌ಐ, ಎಸ್‌ಎಫ್‌ಐ, ಎಲ್‌ಐಸಿ ಯೂನಿಯನ್‌ಗಳಿಂದ ತಲಾ ನೂರಕ್ಕೂ ಹೆಚ್ಚು ಪ್ರತಿನಿಧಿಗಳು - ವ್ಯಾಪಕ ಪಾಲ್ಗೊಳ್ಳುವಿಕೆಯ ಚಿತ್ರ ನೀಡುತ್ತದೆ.




ಉದ್ಘಾಟನಾ ಸಮಾರಂಭದಲ್ಲಿ ಪ್ರಜಾ ನಾಟ್ಯ ಮಂಡಳಿ ನೃತ್ಯ ನಾಟಕ.

ಸ್ಫೂರ್ತಿದಾಯಕ ಉದ್ಘಾಟನೆ - 'ಮರೋ ಪ್ರಪಂಚಂ ಪಿಲಿಸಿಂದಿ'

200 ತಮಟೆಗಳು ಮತ್ತು 'ಮರೋ ಪ್ರಪಂಚಂ ಪಿಲಿಚಿಂದಿ' (ಇನ್ನೊಂದು ಜಗತ್ತು ಕರೆಯುತ್ತಿದೆ) ಎಂಬ ಕ್ರಾಂತಿಕಾರಿ ತೆಲುಗು ಕವಿ ಶ್ರೀ ಶ್ರೀ ರವರ ಹಾಡಿನಿಂದ ಫೋರಂ ಸ್ಫೂರ್ತಿದಾಯಕ ಉದ್ಘಾಟನಾ ಸಮಾರಂಭ ಆರಂಭವಾಯಿತು. ಮೊದಲು ಸುಮಾರು 30 ನಿಮಿಷ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮೀಸಲಾಗಿದ್ದು ಸಮಾರಂಭದ ವಿಶೇಷತೆ ಯಾಗಿತ್ತು. ಪ್ರಜಾನಾಟ್ಯ ಮಂಡಳಿ ಪ್ರದರ್ಶಿಸಿದ (ಸುಮಾರು ನೂರಕ್ಕೆ ಹೆಚ್ಚು ಕಲಾವಿದ/ ಕಲಾವಿದೆಯರು ಭಾಗವಹಿಸಿದ)ನೃತ್ಯ ನಾಟಕ ಫೋರಂನ ಉದ್ದೇಶ ಮತ್ತು ಇಂದಿನ ಸನ್ನಿವೇಶ ಅತ್ಯಂತ ಪರಿಣಾಮಕಾರಿಯಾಗಿ ಬಿಂಬಿಸಿತು.

ಸಮಾರಂಭವನ್ನು ನಿರ್ಮಲಾ ದೇಶಪಾಂಡೆ (ಹಿರಿಯ ಗಾಂಧಿವಾದಿ), ಅಮರ್ ಜೀತ್ ಕೌರ್ (ಎಐಟಿಯುಸಿ ನಾಯಕಿ), ಪ್ರೊ. ನರಸಿಂಹ ರೆಡ್ಡಿ, ಪ್ರೊ. ಹರಗೋಪಾಲ್ (ಹೈದರಾಬಾದಿನ ವಿಶ್ವವಿದ್ಯಾಲಯ ಪ್ರೊಫೆಸರುಗಳು), ಹಬೀಬ್ ತನ್ವೀರ್(ಖ್ಯಾತ ಕಲಾವಿದ, ನಾಟಕಕಾರ) - ಈ ಐವರು ಇರುವ ಅಧ್ಯಕ್ಷೀಯ ಮಂಡಳಿ ನಿರ್ವಹಿಸಿತು. ನೋರಾ ದಿ ಕೋಟಿನಾಸ್ (ಅರ್ಜೆಂಟಿನಾದ 'ಕಾಣೆಯಾದವರ ತಾಯಂದಿರು' ಸಂಘಟನೆಯ ಸಂಸ್ಥಾಪಕಿ 80 ವರ್ಷದ ಮಹಿಳೆ) ಅಬ್ದುಲ್ ಜನಾಬ್ ಸಲೆಹ್(ಪ್ಯಾಲೆಸ್ತೀನ್ ಸರ್ಕಾರದಲ್ಲಿ ಮಂತ್ರಿ), ಪ್ರಭಾತ್ ಪಟ್ನಾಯಕ್(ಖ್ಯಾತ ಆರ್ಥಿಕ ತಜ್ಞ ಮತ್ತು ಜೆಎನ್‌ಯು ಪ್ರೊಫೆಸರ್), ಸಮೀರ್ ಅಮಾನ್ (ಈಜಿಪ್ಟ್ ಮೂಲದ ಈಗ ಸೆನೆಗಲ್‌ನಲ್ಲಿರುವ ವಿಶ್ವಖ್ಯಾತ ಮಾರ್ಕ್ಸ್‌ವಾದಿ ಬುದ್ಧಿಜೀವಿ, 'ಮಂಥ್‌ಲೀ ರಿವ್ಯೂ' ಲೇಖಕ), ಮೇಧಾ ಪಾಟ್ಕರ್(ನರ್ಮದಾ ಬಚಾವೋ ಆಂದೋಲನದ ಖ್ಯಾತ ನಾಯಕಿ ಮತ್ತು ಈಗ ವಾಲಂಟರಿ ಸಂಘಟನೆಗಳ ರಾಷ್ಟ್ರೀಯ ಜಾಲ NAPMನ ಸಂಚಾಲಕಿ), ವಾಲ್ಡೆನ್ ಬೆಲ್ಲೊ (ಫಿಲಿಪ್ಪೈನ್ಸ್‌ನ ಏಶ್ಯಾ ಬೆಳವಣಿಗೆ ಅಧ್ಯಯನ ಸಂಸ್ಥೆಯ ಪ್ರಮುಖ), ಬೊಜ್ಜ ತಾರಕಂ (ಆಂಧ್ರ ಆರ್‌ಪಿಐ ಘಟಕದ ಅಧ್ಯಕ್ಷ ಮತ್ತು ಪ್ರಮುಖ ವಕೀಲ) ಇವರು ಭಾಷಣಕಾರರಾಗಿದ್ದರು. **ನೋರಾ ದಿ ಪೋರ್ಟಿನಾಸ್ ಅರ್ಜೆಂಟಿನಾದ 70 ರ ದಶಕದಲ್ಲಿ ಮಿಲಿಟರಿ ಸರ್ಕಾರದ (ಸಾಮ್ರಾಜ್ಯಶಾಹಿ ಕೊತ್ತು) ವಿರುದ್ಧ ಹೋರಾಟದಲ್ಲಿ ಶಾಶ್ವತವಾಗಿ ಕಾಣೆಯಾದ 30 ಸಾವಿರ ಯುವಕ/ ಯುವತಿಯರನ್ನು ಇಲ್ಲಿ ನಿಮ್ಮಲ್ಲಿ ಕಂಡೆ** ಎಂಬ ಆರಂಭದ ವಾಕ್ಯಗಳು ಮತ್ತು ಕೊನೆಗೆ ಯುದ್ಧ, ಜನಾಂಗೀಯವಾದ, ಜಾಗತೀಕರಣ ಬೇಡ ಎಂದು ಕೂಗಿದ ಘೋಷಣೆ ಈ ಸಮಾರಂಭದ ಉತ್ತಮ ಸಾರಾಂಶವಾಗಿತ್ತು.

ಗೋವಾದ ಸುಂದರ ಕಡಲ ಕಿನಾರೆಯಲ್ಲಿ ಕಾಲು ಚಾಚಿ, ಮುಳುಗುತ್ತಿರುವ ಸೂರ್ಯನ ಮುಖದೆದುರು ಕುಂತ ಪ್ರಧಾನಿ ವಾಜಪೇಯಿಯವರ ಮನಸ್ಸಿನಲ್ಲಿ ಅಲೆಯನ್ನನುಸರಿಸಿ ಚಿಂತನೆಗಳು ಹೊಮ್ಮುತ್ತವೆ. ಅವರ ಮನಸ್ಸಿನ ಕೋಣೆಯ ಮೂಲೆ ಹಿಡಿದು ಮಲಗಿದ್ದ ಕವಿ-ಲೇಖಕ ಎದ್ದು ಮಾತನಾಡುತ್ತಾನೆ. ಸನಾತನ ಸಂಸ್ಕೃತಿ ಮೇಲಿನ ಪ್ರೀತಿ ಉಕ್ಕಿ ಹರಿಯುತ್ತದೆ. ಅವರು ಕಣ್ಣು ಮುಚ್ಚಿ ಶಾಶ್ವತ ಜಿಜ್ಞಾಸೆಗೆ ತೊಡಗಿದಂತೆ ಕಾಣುತ್ತಾರೆ. ಈ 'ಸ್ವಯಂಸೇವಕನ' ಒಳಬೇಗುದಿ ಅರ್ಥವಾಗುವಂತಹದ್ದೇ. ಅವರು 'ಹಿಂದುತ್ವ ಮತ್ತು ಭಾರತೀಯತೆ'ಯಲ್ಲಿನ ಅಂತರವನ್ನು ಕಡಿಮೆಗೊಳಿಸುತ್ತ ನಯವಾಗಿ ವಿಲೀನಗೊಳಿಸಿಬಿಡುತ್ತಾರೆ.ಇಡೀ ದೇಶದ ಜನರ ಪ್ರಥಮ ಪ್ರಾಶಸ್ತ್ಯ ವಿಚಾರವೆಂದು ಅಜೆಂಡಾವನ್ನು ನಿಗದಿ ಮಾಡುತ್ತಾರೆ ಹೊಸ ವರುಷದಲ್ಲಿ. ಸಂಘಪರಿವಾರದ ಶ್ರಮ ವಿಭಜನೆಯಂತೆ ತನ್ನ ಪಾಲಿನ ಕೆಲಸ ಮುಗಿಸಿ ಒಂದು ಕ್ಷಣ ಹಾಗೇ ಕಣ್ಣು ಮುಚ್ಚುತ್ತಾರೆ. ಮುತ್ಸದ್ದಿಗಳು, ಇತರರನ್ನು ಮುಚ್ಚಿಸುತ್ತಾರೆ. ಆದರೆ ಈ ಭವ್ಯ ಭಾರತ ಬಹಳ ವಿಶಾಲ ವೈವಿಧ್ಯ ಎಷ್ಟೇ ಮುಚ್ಚಿಟ್ಟರೂ ಅದುಮಿ ಹಿಡಿದರೂ ಮತ್ತೆ ಬಿಚ್ಚಿಕೊಳ್ಳುವ ವಿಪರ್ಯಾಸಗಳು ವೈರುಧ್ಯಗಳು. ಹಾಗಾಗಿ ಈ ಕವಿ, ಖಾವಿ ಪಡೆ ಮರೆಸಬೇಕೆಂಬುದನ್ನು ಮಾಧ್ಯಮ ಲೋಕದ ವಿಭಿನ್ನ ಪಯಣಿಗ ಪಿ.ಸಾಯಿನಾಥ್ ಜನರೆದುರು ತೆರೆದಿಡುತ್ತಾರೆ. ಒಡಲ ಕಿಚ್ಚಿನಲಿ ಬೇಯುತ್ತಿರುವ ನಿಜ ಭಾರತೀಯರ ಬದುಕನ್ನು ......



ಬವಣೆಯ ಈ ಬದುಕಿಗೆ ಬೇಕಿಲ್ಲ ವಿವರಣೆ...

ಬಡವರು ಮತ್ತು ಶಾಶ್ವತ ಬರ - ಹತಾಶೆಯ ಮೋಡಗಳು

ಸತತವಾಗಿ ಹತ್ತು ಉತ್ತಮ ಮುಂಗಾರುಗಳಾಗಿವೆ ಮತ್ತು ಭಾರತೀಯ ಕೃಷಿಯನ್ನು ಉತ್ತಮವಾಗಿ ಕಾಪಾಡಿಕೊಳ್ಳಲು ನಮಗಿನ್ನೂ ಸಾಧ್ಯವಾಗಿದೆ. ಆದರೆ ಕೆಟ್ಟ ಪರಿಸ್ಥಿತಿಯಲ್ಲಿ ನಾವೇನು ಮಾಡಬಹುದೆಂದು ಊಹಿಸಿಕೊಳ್ಳಿ.

ಇದುವರೆಗಿನ ಪರಿಸ್ಥಿತಿ ಉತ್ತಮವಾಗೇನೂ ಕಂಡುಬಂದಿಲ್ಲ. ನೀರನ್ನು ಬಳಸಿಕೊಳ್ಳಲಾಗದ ಸ್ಥಿತಿಗೆ ಒರಿಸ್ಸಾದ ಅನೇಕ ಅಣೆಕಟ್ಟುಗಳು ತಲುಪಿವೆ. ನೀರಾವರಿಗಾಗಲೀ, ವಿದ್ಯುತ್ ಉತ್ಪಾದನೆಗಾಗಲೀ ನೀರನ್ನು ಬಳಸಲು ನಮಗೆ ಸಾಧ್ಯಾಗುವುದಿಲ್ಲ ಮತ್ತು ಕಳೆದ ಫಸಲನ್ನು ನಷ್ಟಕ್ಕೆ ಮಾರಿರುವ ಲಕ್ಷಾಂತರ ರೈತರು ಹತಾಷೆಯಿಂದ ನರಳುತ್ತಿದ್ದಾರೆ.



ಹ್ಯಾರ ನೀರಿಗಾಗಿ ಮೈಲುಗಟ್ಟಲೇ ಪರದಾಟ

ಆಂಧ್ರಪ್ರದೇಶದಲ್ಲಿ ಅನೇಕ ರೈತರು ಭತ್ತವನ್ನೇ ತಮ್ಮ ಬದುಕಿನ ನೆಲೆಯಾಗಿಸಿಕೊಂಡಿದ್ದಾರೆ. ಅತಿ ಹೆಚ್ಚು ವಲಸೆಗಾರರಿಂದ ಕೂಡಿರುವ ಅನಂತರಪುರದಲ್ಲೂ ಸಹಾ ಇದೇ. ರಾಜಸ್ಥಾನದ ಗ್ರಾಮೀಣ ಬಡವರು ತಮಗಿದ್ದ ಸ್ವಲ್ಪ ಆಹಾರ ಭದ್ರತೆಯೂ ಚಿಂದಿಯಾದ ಕಡೆಯೇ ನೋಡುತ್ತಿದ್ದಾರೆ.

ಇದು ಕೇವಲ ಆರಂಭವಷ್ಟೆ

ಗ್ರಾಮೀಣ ಬಡವರು, ಅದರಲ್ಲೂ ವಿಶೇಷವಾಗಿ ಭೂಹಿನ ಕೃಷಿಕೂಲಿಕಾರರು ಹಲವಾರು ವಿಧಾನಗಳಿಂದ ಭಾದಿಸಲ್ಪಡುತ್ತಿದ್ದಾರೆ. ಅವರ ಆದಾಯದಲ್ಲಿ ಕುಸಿತಗೊಂಡಿರುವುದಂತೂ ನಿರೀಕ್ಷಿತ. ಆಗಸ್ಟ್‌ನಿಂದ ಅಕ್ಟೋಬರ್‌ವರೆಗಿನ ಪರಿಸ್ಥಿತಿಯಂತೂ ಶೋಚನೀಯ. ಸಾಮಾನ್ಯವಾಗಿ ಮುಂಗಾರಿನಲ್ಲೂ ಹಸಿವಿನ ದಿನಗಳು ಸಾಮಾನ್ಯ. ಕೆಲಸ ಶ್ರಮದಾಯಕವಾಗಿದ್ದಾಗಲಂತೂ ಉಳಿವಿಗಾಗಿನ ಹೋರಾಟಗಳು ತೀವ್ರಗೊಳ್ಳುತ್ತವೆ. ಬಿತ್ತನೆ ಕಾರ್ಯ ನಡೆಯದಿದ್ದಾಗಲಂತೂ ಪರಿಸ್ಥಿತಿ ಮತ್ತಷ್ಟು ಭೀಕರವಾಗುತ್ತಿದೆ. ಬೆಳೆ ಹಾಳಾದರೂ ಅಥವಾ ಸಾಮಾನ್ಯಕ್ಕಿಂತ ಕಡಿಮೆಯಾದಾಗ ದುಡಿಮೆ ಮತ್ತಷ್ಟು ಕುಸಿಯುತ್ತದೆ. ಹಸಿವಿನ ಕೆಲವು ದಿನಗಳನ್ನಾದರೂ ದೂರ ಮಾಡುವ ಕೂಲಿಯೂ ಸಹ ತಪ್ಪಿಹೋಗುತ್ತದೆ. ಕುಸಿತಗೊಂಡ ಕಟಾವಿನ ಸಮಯ ಕೂಡ ಪರಿಸ್ಥಿತಿಯನ್ನು ಮತ್ತಷ್ಟು ಘಾಸಿಗೊಳಿಸುತ್ತದೆ. ರೈತರು ಉತ್ಪಾದನೆಯಿಂದ ತಮ್ಮ ಹಿಡಿತ ಕಳೆದುಕೊಳ್ಳುತ್ತಾರೆ.

ಆಹಾರ ವಸ್ತುಗಳ ಬೆಲೆ ಹೆಚ್ಚಳವಾದಂತೆಲ್ಲಾ ಗ್ರಾಮೀಣ ಮನೆತನಗಳ ಹಸಿವು ಕೂಡ ಹೆಚ್ಚಾಗುತ್ತಿದೆ. ಕಳೆದ ವರ್ಷ ಸಹ ರಾಜಸ್ಥಾನದ ಆದಿವಾಸಿ ಕುಟುಂಬಗಳು ತಮ್ಮ ಮನೆಯ ಸದಸ್ಯರ ನಡುವೆ ಹಸಿವನ್ನು ಹಂಚಿಕೊಳ್ಳುತ್ತಿದ್ದರು. ಪ್ರತಿದಿನ ಅವರಲ್ಲಿ ಯಾರಾದರೂ ಒಬ್ಬ ಏನನ್ನೂ ತಿನ್ನದೆ ಹೋಗಬೇಕಾದ ಪರಿಸ್ಥಿತಿಯಿತ್ತು. ಯಾರಿಗೆ ಉಣ್ಣಲು ಒಂದು ಊಟವಾದರೂ ಸಿಗುತ್ತದೋ ಅವರು ಆ ದಿನದ ಕೆಲಕ್ಕಾಗಿ ಹೊರಹೋಗುತ್ತಿದ್ದರು.

ಯಾರು ಕೆಲವು ಮೇಕೆಗಳನ್ನು ಅಥವಾ ಆಕಳುಗಳನ್ನು ಹೊಂದಿದ್ದರೋ ಅವರು ಅವುಗಳನ್ನು ಕಳೆದುಕೊಳ್ಳಬೇಕಿತ್ತು. ಸಾಕುಪ್ರಾಣಿಗಳನ್ನು ಸಂಕಟಮಾತ್ರವಾಗಿ (ಕಡಿಮೆ ಬೆಲೆಗೆ) ಮಾರುವುದು ಇಂದಿಗೂ ಅನೇಕ ರಾಜ್ಯಗಳಲ್ಲಿದೆ. ಹೆಚ್ಚುತ್ತಿರುವ ಮೇವಿನ ಬೆಲೆ ಮತ್ತು ನೀರಿನ ಅಲಭ್ಯತೆಯಿಂದ ಕೃಷಿ ಬಳಕೆಯ ಪ್ರಾಣಿಗಳನ್ನು ಸಹ ನೋಡಿಕೊಳ್ಳುವುದು ತುಂಬಾ ಸಮಸ್ಯೆಯಾಗುತ್ತಿದೆ.

ಸಾಲದ ಸ್ಥಿತಿಯಂತೂ ಮತ್ತಷ್ಟು ಶೋಚನೀಯವಾಗಿದೆ. ಒಂದು ಅಥವಾ ಎರಡು ಎಕರೆ ಜಮೀನು ಹೊಂದಿರುವವರು ಕೂಡ ಅದನ್ನು ಕಳೆದುಕೊಳ್ಳುವ ಅಪಾಯವಿದೆ. ಬೇರೆ ಕಾಲಗಳಲ್ಲಿ ಕೆಲಸ ಮಾಡಲು ಸಾಮಾನ್ಯ ಬಂದಂತೆಲ್ಲಾ ಅವರ ಬಿ.ಪಿ.ಎಲ್. ಮತ್ತು ಎ.ಪಿ.ಎಲ್. ಪಡಿತರ ಚೀಟಿಗಳಿಗೆ ಯಾವ ಅರ್ಥವೂ ಇರುವುದಿಲ್ಲ. ಅದರಲ್ಲೂ ಒರಿಸ್ಸಾದಲ್ಲಿ ಕಳೆದ ಬಾರಿ ಆದಂತೆ ಹಳ್ಳಿಯ ಲೇವಾದೇವಿ ಗಾರರಿಗೆ ತಮ್ಮ ಚೀಟಿಗಳನ್ನು ಮಾರಿಕೊಳ್ಳದಿದ್ದಾಗ.

ಗ್ರಾಮೀಣ ಮನೆತನಗಳ ಮಹಿಳೆಯರ ಮೇಲಿನ ಒತ್ತಡವಂತೂ ವಿಪರೀತ. ನೀರು, ಸೌಧೆ ಮತ್ತು ಮೇವಿಗಾಗಿ ಅವರು ಹಾಕುವ ಸಮಯ ಮತ್ತು ಶಕ್ತಿಯನ್ನು ವಿಪರೀತ ಹೆಚ್ಚಿಸುತ್ತದೆ. ಆದರೆ ಅವರ ಆಹಾರ ಸೇವನೆ ಕಡಿಮೆಗೊಳ್ಳುತ್ತದೆ. ಕುಟುಂಬದವರೆಲ್ಲ ಉಂಡ ನಂತರ ಕೊನೆಯಲ್ಲಿ ಮಹಿಳೆ ಉಣ್ಣುತ್ತಾಳೆ. ನಂತರ ಜಾನುವಾರುಗಳಿಗೆ ಮೇವು ಒದಗಿಸಲು ಅವರು ಶ್ರಮಿಸಬೇಕಾಗುತ್ತದೆ. ಹೆಚ್ಚುವ ಶ್ರಮ ಮತ್ತು ಕಡಿಮೆಗೊಳ್ಳುವ ಆಹಾರ ಸೇವನೆ ಹಲವರನ್ನು ಅಸಹನೀಯಗೊಳಿಸುತ್ತದೆ.

ಪರಿಸ್ಥಿತಿ ಬಿಗಡಾಯಿಸಿದಾಗ ಆರೋಗ್ಯ ವೆಚ್ಚಗಳನ್ನು ಅವರು ಭರಿಸಲಾಗದು. ಕಳೆದ ದಶಕದಲ್ಲಿ ಅನುಸರಿಸಿದ ನೀತಿಗಳು ಗ್ರಾಮೀಣ ಬಡವರಿಗೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಿಂದ ಸಿಗುತ್ತಿದ್ದ ಸ್ವಲ್ಪ ಸಹಾಯವೂ ತಪ್ಪಿಹೋಗಿದೆ. ಖಾಸಗೀಕರಣ ಮತ್ತು ಸೇವಾಶುಲ್ಕಗಳ ವಸೂಲಿ ಭರಾಟೆಯಿಂದ ಸಾಗಿದೆ. ಆದ್ದರಿಂದ ಆರೋಗ್ಯಕ್ಕಾಗಿ ಸಾಲ ಮಾಡುವುದು ಗ್ರಾಮೀಣ ಸಾಲಗಳಲ್ಲಿ ಅತಿವೇಗವಾಗಿ ಹೆಚ್ಚುತ್ತಿರುವ ಪ್ರವೃತ್ತಿಯಾಗಿದೆ.

ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗದಿರುವುದಕ್ಕೆ ಅನೇಕ ಮಕ್ಕಳು ಶಾಲೆ ಬಿಡುತ್ತಿದ್ದಾರೆ ಅಥವಾ ಅವರ ವಲಸೆಗಾರ ಪೋಷಕರನ್ನು ಸೇರಿಕೊಳ್ಳುತ್ತಿದ್ದಾರೆ. ಇದು ಕಳೆದ ಅನೇಕ ವರ್ಷಗಳಿಂದ ಬರವಿರಲಿ, ಇಲ್ಲದಿರಲಿ, ಆಗುತ್ತಿರುವ ಬಿಕ್ಕಟ್ಟು. ಕಳೆದ ವರ್ಷ ಅನಂತಪುರ ಜಿಲ್ಲೆಯ ಭಾಗವೊಂದರಲ್ಲಿ ಅನೇಕ ಕುಟುಂಬಗಳು ಆಗಸ್ಟ್ ತಿಂಗಳಿನ ಇಡೀ ದುಡಿಮೆಯ ಹಣವನ್ನು ತಮ್ಮ ಮಕ್ಕಳಿಗೆ ಬಂದ ರೋಗ ವಾಸಿ ಮಾಡಲು ವಿನಿಯೋಗಿಸಬೇಕಾಯಿತು.

ಆದ್ದರಿಂದ ಗ್ರಾಮೀಣ ಬಡವರಿಗೆ ಕೆಲಸ ಕೊಡುವ ಮತ್ತು ಅವರ ಆದಾಯವನ್ನು ಹೆಚ್ಚಿಸುವ ತುರ್ತು ಅಗತ್ಯವಿದೆ. ಆದರೆ ಅನೇಕ ಸರ್ಕಾರಗಳು ಇದನ್ನು ಮಾಡುತ್ತಿಲ್ಲ. ಆದರೆ ಶ್ರೀಮಂತರಿಂದ ವಸೂಲಿಯಾಗಬೇಕಿರುವ 1,00,000(ಒಂದು ಲಕ್ಷ)ಕೋಟಿಗಳನ್ನು ಬೇಕಾದರೆ ಸಹಿಸಿಕೊಳ್ಳಬಲ್ಲರು.

ಭೂಹೀನ ಬಡವರಿಗೆ ಹಣಕಾಸು ಮಂತ್ರಿಗಳನ್ನೂ ಖುಷಿಪಡಿಸಲು ಆಗುವುದಿಲ್ಲ. ಹಣಕಾಸು ಮಂತ್ರಿಗಳಿಗೆ ಭೋಜನ ಕೂಟವೇರ್ಪಡಿಸಲು ಸಾಧ್ಯವಿಲ್ಲ. ಹೆಚ್ಚೆಂದರೆ ಬಡವರು ಒಂದು ದೊಡ್ಡ ಪ್ರತಿಭಟನಾ ರ್‍ಯಾಲಿ ನಡೆಸಬಹುದು. ಮಾಧ್ಯಮಗಳು ಇದನ್ನು ಬಹುವಾಗಿ ನಿರ್ಲಕ್ಷಿಸುತ್ತವೆ. ಬಡವರು ಪತ್ರಿಕೆ ಅಥವಾ ಟಿವಿ ಚಾನೆಲ್‌ಗಳನ್ನು ಕೊಳ್ಳಲು ಸಾಧ್ಯವಿಲ್ಲ.

ಈಗೇನೋ ಸಾರ್ವಜನಿಕ ಒತ್ತಡದಿಂದ ಕೂಲಿಗಾಗಿ ಕಾಳು ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಆದರೆ 50 ವರ್ಷ ದಾಟಿದವರ ಕಥೆ? ಬರವನ್ನು ಸಾಮಾನ್ಯವಾಗಿ ಅದೊಂದು ಪ್ರಾಕೃತಿಕ ಘಟನೆ ಎಂಬಂತೆ ಚರ್ಚಿಸಲಾಗುತ್ತಿದೆ. ಬರದೊಡನೆ ಎಲ್ಲವೂ ಚೆನ್ನಾಗಿಯೆ ಇತ್ತು ಎನ್ನಲಾಗುತ್ತಿದೆ. ಇದೊಂದು ಪಾಪದ ಫಲವೆಂಬಂತೆ ತಿಳಿಯಲಾಗುತ್ತಿದೆ. ಆದರೆ ಇದು ಸತ್ಯವೆ? ವಾಸ್ತವವಾಗಿ ಇದು ಆಳುವವರು ಅನುಸರಿಸುತ್ತಿರುವ ನೀತಿಗಳ ಫಲ. ಅನೇಕ ನೀತಿಗಳು ಅವುಗಳ ರಚನೆ ಮತ್ತು ತಿರುಳಿನಲ್ಲಿ ಬಡವರ ವಿರೋಧಿ.

ನಿಜವಾಗಿ ಕಳೆದ ದಶಕ ಕೆಟ್ಟ ನೀತಿಗಳನ್ನು ಅತಿ ಚೆನ್ನಾಗಿ ಜಾರಿಗೊಳಿಸಿದ ದಶಕ.

ಕೃಷಿಯಲ್ಲಿ ಬಂಡವಾಳ ವಿನಿಯೋಗ ಕಡಿಮೆಯಾಗಿದೆ. 1980 ಕ್ಕಿಂತ 1990ರ ದಶಕದಲ್ಲಿ ಕೃಷಿ ಉತ್ಪಾದನೆ ಪ್ರಮಾಣ ಅರ್ಧದಷ್ಟು ಕಡಿಮೆಯಾಗಿದೆ.

1990 ದಶಕದ ಕಳೆದ ಏಳುವರ್ಷಗಳು 1947 ನಂತರದಲ್ಲೆ ಅತೀ ಕಡಿಮೆ ಉದ್ಯೋಗ ಸೃಷ್ಟಿಸಿದ ವರ್ಷಗಳು. ಅಂದರೆ ಅದರ ಪ್ರಮಾಣ ಶೇ. 0.67. ಗ್ರಾಮೀಣ ಸಾಲ ವಿಪರೀತವಾಗಿದೆ, ಬಡವರನ್ನು ಲೇವಾದೇವಿಗಾರರತ್ತ ನೂಕಿದೆ. ಇಂತಹ ಶೋಚನೀಯ ಸ್ಥಿತಿಯಲ್ಲಿ ನೀರಿನ ಖಾಸಗೀಕರಣ ಬರುತ್ತಿದೆ. ಕುಡಿಯುವ ನೀರನ್ನು ಖಾಸಗೀಕರಿಸಲಾಗುತ್ತಿದೆ. ಆದ್ದರಿಂದ ಇದರ ಖರ್ಚನ್ನು ಬಳಕೆದಾರನೇ ನೀಡಬೇಕಾಗಿದೆ. ಬಳಕೆದಾರರು ಎಂದರೆ ಭೂಮಿ, ಪಟ್ಟಾ ಇರುವವರು, ಉಳಿದವರು ಬಳಕೆದಾರರಲ್ಲ. ಅಂದರೆ ಭೂಮಿ ಇರುವ ಅವರು ಮಾತ್ರ ನೀರು ಬಳಕೆದಾರರ ಸಂಘದಲ್ಲಿರುತ್ತಾರೆ ಭೂಮಿಯಿಲ್ಲದ ಕಾರಣಕ್ಕೆ ಇವರು ಪ್ರಜಾಪ್ರಭುತ್ವವನ್ನು ಕಳೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಈ ಬಳಕೆದಾರರ ಸಂಘಗಳನ್ನು ಆ ಪ್ರದೇಶದ ಶ್ರೀಮಂತರೇ ನಿಯಂತ್ರಿಸುತ್ತಾರೆ. ಇದರೊಡನೆ ಎಲ್ಲಾ ರೀತಿಯ ಶೋಷಣೆಯೂ ಆರಂಭವಾಗುತ್ತದೆ. ○

ಅಕ್ರಮ ವಿದೇಶಿಯರು ಮತ್ತು ಖಾವಿಪಡೆ ಅಜೆಂಡಾ?

ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಪ್ರಜೆಗಳ ವೀಸಾ ಮುಗಿದುಹೋಗಿ ಅಕ್ರಮವಾಗಿ ವಾಸವಾಗಿರುವ ವಿಚಾರವನ್ನು ಗೃಹಸಚಿವರಾದ ಅಡ್ವಾಣಿಯವರು ಹೊರಗೆಡಹಿದ್ದಾರೆ. ನಿಜ ಯಾವ ದೇಶವೂ ಅಂತಹವರನ್ನು ಉಳಿಯಲು ಬಿಡಲಾರದು. ಆದರೆ ಅವರನ್ನು ಹೊರಹಾಕುವ ಮಾತಿನ ಹಿಂದಿರುವ ಕಾರಣಗಳೇನು? ಅಂತಿಮ ಉದ್ದೇಶ ಎತ್ತಕಡೆಗೆ... ಓದಿ.

11,500 ಪಾಕಿಸ್ತಾನಿ ಮತ್ತು ಅರ್ಧ ಕೋಟಿಗೂ ಹೆಚ್ಚು ಬಾಂಗ್ಲಾದೇಶಿ ಜನ ತಮ್ಮ ವೀಸಾ ಕಾಲಾವಧಿ ಮುಗಿದ ನಂತರವು ಭಾರತದಲ್ಲಿ ಅಕ್ರಮವಾಗಿ ಉಳಿದಿದ್ದಾರೆ ಎಂಬ ವಿಷಯವನ್ನು ರಾಷ್ಟ್ರದ ಉಪಪ್ರಧಾನಿ ಹಾಗೂ ಗೃಹ ಸಚಿವರು ಬಹಿರಂಗ ಪಡಿಸಿದ್ದಾರೆ. ಅಕ್ರಮವಾಗಿ ಭಾರತದಲ್ಲಿ ವಾಸಿಸುತ್ತಿರುವ ಈ ಜನತೆ ಭಾರತದ ಅಂತರಿಕ ಸುರಕ್ಷತೆಗೆ ಗಂಭೀರ ಅಪಾಯ ಒಡ್ಡಿದ್ದಾರೆ. ಹಾಗಾಗಿ ಅವರನ್ನು ಹೊರಹಾಕಬೇಕು ಎಂದು ಅವರು ನುಡಿದಿದ್ದಾರೆ.

ವಿದೇಶಿಯರು ಅಕ್ರಮವಾಗಿ ದೇಶದೊಳಗೆ ನೆಲೆಸಲು ಯಾವುದೇ ರಾಷ್ಟ್ರವು ಬಿಡಲಾರದು. ಅವರನ್ನು ಗುರುತಿಸಿ ಅವರವರ ದೇಶಗಳಿಗೆ ಕಳುಹಿಸಬೇಕು. ಆದರೆ ಮೊದಲನೆಯದಾಗಿ ರಾಷ್ಟ್ರದ ಅಂತರಿಕ ಸುರಕ್ಷತೆಯ ಹಾಗೂ ವೀಸಾ ನಿರ್ವಹಣೆಯ ಹೊಣೆ ಹೊತ್ತಿರುವ ಕೇಂದ್ರ ಗೃಹ ಸಚಿವರು ಇಂತಹ ಪರಿಸ್ಥಿತಿಯ ನಿರ್ಮಾಣದ ಹಿಂದಿನ ಕಾರಣಗಳನ್ನು ತಿಳಿಸಬೇಕು. ಗಂಭೀರ ಲೋಪಗಳು ಮತ್ತು ಅಸಮರ್ಪಕತೆಯನ್ನು ಕೂಡಲೇ ನಿರ್ಮೂಲನೆಮಾಡಬೇಕು. ಭಯೋತ್ಪಾದಕತೆ ವಿರುದ್ಧದ ಹೋರಾಟದ ಮುಂಚೂಣಿ ತಾವು ಎಂದು ಹೇಳಿ ಕೊಳ್ಳುವ ಇವರ ಆಡಳಿತಾವಧಿಯಲ್ಲೇ ಹೆಚ್ಚೆಚ್ಚು ಭಯೋತ್ಪಾದಕ ದಾಳಿಗಳು ಹಾಗೂ ಇಂತಹ ಅಘಾತಕಾರಿ ಅಂಶಗಳು ಬೆಳಕಿಗೆ ಬರುತ್ತಿರುವುದು.



ಇಬ್ಬಗೆ

ರಾಷ್ಟ್ರದೊಳಗೆ ಅಕ್ರಮವಾಗಿ ವಾಸಿಸಿರುವ ವರ ನೆಪದಲ್ಲಿ ಖಾವಿ ಪಡೆಗಳ ಕೋಮು ದ್ವೇಷಕ್ಕೆ ಒತ್ತಾಸೆ ನೀಡಲಾಗದು. ಅಕ್ರಮವಾಗಿ ನೆಲೆಸಿರುವವರನ್ನು ಹೊರಹಾಕುವ ಹೆಸರಿನಲ್ಲಿ ನಿರ್ದಿಷ್ಟ ರಾಷ್ಟ್ರಗಳ ಹಾಗೂ ಜನಾಂಗಗಳನ್ನು ಬೇಟೆಯಾಡುವುದರ ಕುರಿತು ಟೈಮ್ಸ್ ಆಫ್ ಇಂಡಿಯಾ ಕೂಡಾ ಎಚ್ಚರಿಸಿದೆ.

ಪ್ರಸ್ತುತ ನಡೆದಿರುವ ಇತರೆ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನೋಡಿದಲ್ಲಿ ಬಿಜೆಪಿಯ ಚುನಾವಣಾ ಭವಿಷ್ಯತ್ತಿಗಾಗಿ ಇದನ್ನು ರೂಪಿಸಲಾಗುತ್ತಿರುವಂತೆ ಕಂಡುಬರುತ್ತಿದೆ. ನ್ಯಾಯಾಂಗ ತೀರ್ಪು ಏನೇ ಆದರೂ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಿಸುವ ತಮ್ಮ ಚಳುವಳಿ ಮುಂದುವರಿಸುವ ವಿಷಯವನ್ನು ವಿಹೆಚ್‌ಪಿ ಮತ್ತು ಬಜರಂಗದಳ ಸ್ಪಷ್ಟಪಡಿಸಿವೆ. ನೂರು ಸರ್ಕಾರಗಳು ಉರುಳಿದರೂ ಸರಿಯೇ ರಾಮ ಮಂದಿರ ಕಟ್ಟೇ ತೀರುತ್ತೇವೆ ಎಂದು ಅವರು ಎಚ್ಚರಿಸಿದ್ದಾರೆ. ಗುಜರಾತ್ ಚುನಾವಣೆಗಳಿಂದ ಉತ್ತೇಜಿತರಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಜಿಲ್ಲಾವಾರು ಸಮಾವೇಶಗಳನ್ನು ಸಂಘಟಿಸಿ ನಾಜಿ ಫ್ಯಾಸಿಸ್ಟ್ ಪಡೆಯ ಕಪ್ಪು ಶರ್ಟ್‌ಗಳ ರೀತಿ ತ್ರಿಶೂಲದಾರಿಯುವ ಪಡೆಗಳನ್ನು ನಿರ್ಮಿಸಲು ವಿ.ಹೆಚ್.ಪಿ. ಯೋಜಿಸಿದೆ. ಹಿಂದುತ್ವದ ಹೆಸರಿನಲ್ಲಿ ಕಾನೂನು ಬಾಹಿರ ಹಾಗೂ ಉತ್ತೇಜನಕಾರಿ ತ್ರಿಶೂಲ ದೀಕ್ಷೆಯನ್ನು ಮುಂದುವರಿಸಲಾಗುತ್ತಿದೆ. "ಅದರ ಕುರಿತು ತಮಗೇನು ಪಶ್ಚಾತಾಪವಿಲ್ಲ" ಎಂದು ಹೇಳುವ ಮೂಲಕ 'ಹಿಂದುತ್ವ' ಕುರಿತ ತಮ್ಮ ಬದ್ಧತೆಯನ್ನು ಕೇಂದ್ರದ ಬಿಜೆಪಿ ತೋರಿದೆ.

ಪ್ರಧಾನಿಗಳ ಇಬ್ಬಗೆ ಮಾತುಗಳ ನಡುವೆಯೂ ಗುಜರಾತ್ ಪ್ರಯೋಗವನ್ನು ಇತರೆಡೆಗಳಲ್ಲಿ ಅನುಕರಿಸುವ ತನ್ನ ಉದ್ದೇಶವನ್ನು ಬಿಜೆಪಿ ಪ್ರಕಟಿಸಿದೆ.

ಸರ್ವಾಧಿಕಾರತ್ವ

ಸರ್ವಾಧಿಕಾರತ್ವದೆಡೆಗೆ ನಡೆಯುತ್ತಲೇ ಇಂತಹ ಉಗ್ರಸ್ವರೂಪದ ಕೋಮುವಾದಿ ಧೋರಣೆ ಹಾಗೂ ಅದಕ್ಕಾಗಿ ಅಣಿನೆರೆಸುವ ಯತ್ನ ನಡೆಸಿರುವುದು ಗಂಭೀರ ಅಪಾಯದ ಅಂಶವಾಗಿದೆ. ಪತ್ರಕರ್ತ ಇಫ್ತೆಕಾರ್ ಜಿಲಾನಿ ಬಂಧನ ಕುರಿತಂತೆ ನಡೆದಿರುವ ನ್ಯಾಯಾಂಗ ಪ್ರಕ್ರಿಯೆ ಕುರಿತ ಗೃಹ ಸಚಿವಾಲಯದ ಪ್ರತಿಕ್ರಿಯೆ ಈ ನಿಟ್ಟಿನ ಸೂಚಕವಾಗಿದೆ. ಪತ್ರಕರ್ತರ ಬಳಿಯಿದ್ದ ಮಾಹಿತಿ, ಯಾವುದರ ಆಧಾರದಲ್ಲಿ ಅವರನ್ನು ಬಂಧಿಸಲಾಗಿದೆಯೋ ಅದಕ್ಕೆ ಯಾವುದೇ 'ರಕ್ಷಣೆಯ ಮೌಲ್ಯ' ಇಲ್ಲಾ ಎಂದು ಸೈನ್ಯೆಯ ಗುಪ್ತದಳ ತಿಳಿಸಿದೆ. ಸಂಬಂಧಿತ ಮಾಹಿತಿಯನ್ನು ಮುಕ್ತವಾಗಿ ಲಭ್ಯವಾಗುವ ಮೂಲಗಳಿಂದ ಸಂಗ್ರಹಿಸ ಲಾಗಿದೆ ಎಂದು ಸಹಾ ಹೇಳಿದೆ. ಆದರೆ ಅದ್ವಾನಿಯವರ ನೇತೃತ್ವ ದಲ್ಲಿ ರುವ ಗೃಹ ಸಚಿವಾಲಯ ಮಾತ್ರ ವ್ಯತಿರಿಕ್ತ ಅಭಿಪ್ರಾಯ ಪ್ರಕಟಿಸಿದೆ. ಹಾಗಾಗಿ ರಾಷ್ಟ್ರಕ್ಕೆ ಅಪತ್ತಾಗಲಿದೆ ಎಂದು ಗೃಹ ಸಚಿವಾಲಯ ಭಾವಿಸುವ ಯಾವುದೇ ಮುದ್ರಿತ ಮಾಹಿತಿಯನ್ನು ಯಾರಾದರೂ ಹೊಂದಿದ್ದರೆ, ಅವರನ್ನು ಶಿಕ್ಷಿಸಬಹುದೆಂದಾಗಿದೆ. ಹೇಗಿದೆ ನೋಡಿ ಸರ್ವಾಧಿಕಾರತ್ವದ ಸಂಕೇತ ನುಸುಳುವಿಕೆ?

ಮುಂದಿನ ಹಂತದ ಚುನಾವಣೆಗಳ ಮೇಲೆ ಕಣ್ಣಿರಿಸಿ, ಈ ಖಾವಿ ಪಡೆಯ 'ಆಕ್ಟೋಪಸ್' ಪ್ರಾಣಿ ತನ್ನ ಬಾಹುಗಳನ್ನು ಚಾಚುತ್ತಿದೆ. ಅದರೆಲ್ಲಾ ಬಾಹುಗಳು ಕ್ರಿಯಾಶೀಲವಾಗಿವೆ. ಅವುಗಳು ಒಂದೊಂದು ಸ್ವತಂತ್ರವೆಂದು ಗೋಚರವಾದರೂ, ಒಂದೇ ಹೃದಯದಿಂದ ಈ ಎಲ್ಲಾ ಬಾಹುಗಳಿಗೆ ರಕ್ತ ಸಂಚಲನವಾಗುತ್ತಿದೆ. ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತದ ಗಣ ರಾಜ್ಯವನ್ನು ಫ್ಯಾಸಿಸ್ಟ್ "ಹಿಂದೂ ರಾಷ್ಟ್ರವನ್ನಾಗಿ" ಮಾರ್ಪಡಿಸಬೇಕೆಂದಿರುವ ಆರ್‌ಎಸ್‌ಎಸ್ ಈ ಹೃದಯ. ಸ್ವಾತಂತ್ರದ ಸಮಯದಲ್ಲಿ ಇಂತಹ ಯತ್ನ ವನ್ನು ಭಾರತದ ಜನತೆ ಸೋಲಿಸಿದ್ದಾರೆ. ಮತ್ತೊಮ್ಮೆ ಆ ರೀತಿ ಮಾಡಬೇಕಾದ ಕಾಲವೀಗ ಬಂದಿದೆ.

ಹಿಂದೆಂದೂ ಕಾಣದಷ್ಟು ಉಗ್ರವಾದ.....

ಪುಟ 5 ರಿಂದ

ವಾರ್ಷಿಕ 'ಚಿಂತನೆ' ಮತಾಂಧರಿಗೆ ಧೈರ್ಯ ತುಂಬಿದ್ದರೆ ಆಶ್ಚರ್ಯವಿಲ್ಲ. ಪಿ. ಚಿದಂಬರವರು ತಮ್ಮ ಲೇಖನವೊಂದರಲ್ಲಿ ಹೇಳಿದಂತೆ ವಾಜಪೇಯಿಯವರು ಉತ್ತಮ ಆಶಯ ಮತ್ತು ಹೆಚ್ಚಿನ ಒಮ್ಮತ್ರದೊಂದಿಗೆ ಹೊಸ ವರ್ಷವನ್ನು ಆರಂಭಿಸುವ ಬದಲು ಇನ್ನಷ್ಟು ಕಹಿಯೊಂದಿಗೆ, ಇನ್ನಷ್ಟು ಛಿದ್ರಕಾರಿಕೆಯೊಂದಿಗೆ ಆರಂಬಿಸಿದ್ದಾರೆ.

ವಂಚನೆಯ ಆಟ

ವಾಜಪೇಯಿಯವರ 'ಸೌಮ್ಯವಾದಿ' ಮುಖವಾಡದ ಹಿಂದಿರುವ ನಿಜವಾದ ಚಿಂತನೆ ಅವರ ಮಾನವ ಸಂಪನ್ಮೂಲ ಮಂತ್ರಿ ಎಂ.ಎಂ. ಜೋಷಿಯವರ ಜನ್ಮದಿನದಂದು ಮತ್ತೊಮ್ಮೆ ಸ್ಪಷ್ಟವಾಯಿತು. ಅವರ ಬೆನ್ನು ತಟ್ಟುತ್ತಾ "ಜೋಷಿ ಶಿಕ್ಷಣವನ್ನು ಕೇಸರೀಕರಣ ಮಾಡುವುದಲ್ಲದೆ ಬೇರೆನು ನಿರೀಕ್ಷಿಸುತ್ತೀರಿ? ಬದಲಿಗೆ ಶಿಕ್ಷಣಕ್ಕೆ ಹಸಿರು ಬಣ್ಣ ಕೊಡಬೇಕೆ?" ಎಂದಂತೆ ಹಸಿರನ್ನು ಸಾಮಾನ್ಯವಾಗಿ ಇಸ್ಲಾಮ್ ಮತ್ತು ಮುಸ್ಲಿಮರೊಂದಿಗೆ ಗುರುತಿಸುವ ಹಿನ್ನೆಲೆಯಲ್ಲಿ ಈ ಬಣ್ಣದ ಹಿಂದೆ ದುಷ್ಟ ಸ್ವರವೊಂದು ಇಲ್ಲದಿಲ್ಲ. ಆದರೆ ಇಷ್ಟೇ ಅಲ್ಲ, ಪ್ರಧಾನ ಮಂತ್ರಿಗಳು ನಿಜವಾದ ಸಮಸ್ಯೆಗಳನ್ನು ಟೊಳ್ಳು ಪದ ಪುಂಜಗಳ ಮೂಲಕ ಬದಿಗೊತ್ತುತ್ತಾರೆ ಎಂಬುದನ್ನು ಇದು ತೋರಿಸುತ್ತದೆ. ಶಿಕ್ಷಣ ವ್ಯವಸ್ಥೆಯನ್ನು ಮತ್ತು ಪಠ್ಯಪುಸ್ತಕಗಳನ್ನು ಐಕ್ಯತೆಗೊಳಿಸುವ ಪ್ರಯತ್ನಗಳಿಂದ ಆತಂಕಗೊಂಡಿರುವವರಿಗೆ ಪ್ರಧಾನ ಮಂತ್ರಿಗಳ ಬಳಿಯಿರುವುದು ನಿಂದನೆಯಷ್ಟೇ "ವರ್ಷಗಳ ಕಾಲ ನೀವು ಅದನ್ನು ವಿಕೃತಗೊಳಿಸಿದಿರಿ" ತಾನೊಬ್ಬ ಹುತಾತ್ಮ ಎಂಬಂತೆಯೂ ಮಾತಾಡುತ್ತಾ "ನಾವು ಸರಿಯಾದ ದಿಕ್ಕಿನಲ್ಲಿ ಹೊರಟಾಗ ತೊಂದರೆಗಳನ್ನು ಎದುರಿಸಬೇಕಾಗಿದೆ" ಎಂದರು.

ಇಂತಹ ಮಂಡನೆಯೇ ಅದರ ನಡುವೆ ಹಿಂದುತ್ವ ಬಿಜೆಪಿಯ ಚುನಾವಣಾ ವಿಷಯವಾಗುತ್ತದೆ ಎಂದು ಅಡ್ವಾಣಿಯವರ ಬೆದರಿಕೆ ಬಂದಿದೆ. ಇಲ್ಲಿ, ಗುಜರಾತಿನಲ್ಲಿ ಮೋದಿ ಮಾಡಿದಂತೆ **'ಜೆಹಾದಿ ಭಯೋತ್ಪಾದನೆ'ಯ ಹೆಸರಲ್ಲಿ ಅಡ್ವಾಣಿ ಕೋಮುವಾದಿ ಆಟವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಹಿಂದೂ ಮನಸ್ಸಿನಲ್ಲಿ ಭಯ ಹುಟ್ಟಿಸುವುದೇ ಅವರ ಪ್ರಯತ್ನ. ಇಂತಹ ಭಯ ಹುಟ್ಟಿಸ ದಿದ್ದರೆ ಅವರಿಗೆ ಚುನಾವಣಾ ಭಿಕ್ಷೆಯೂ ಸಿಗಲು ಸಾಧ್ಯವಿಲ್ಲ.** ಆದರೆ ಚಿದಂಬರಂ ಮೇಲೆ ಪ್ರಸ್ತಾಪಿಸಿದ ಲೇಖನದಲ್ಲಿ ಹೇಳುವಂತೆ "ಹಿಂದೂಗಳು ಭಾರಿ ಮತದಲ್ಲಿರುವ ಭಾರತದಲ್ಲಿ ಹಿಂದೂ ಧರ್ಮಕ್ಕೆ ಎಂದೂ ಅಪಾಯ ಬರಲು ಸಾಧ್ಯವಿಲ್ಲ".

ಡಾ। ತೊಗಾಡಿಯಾರಂತಹ ವಾಚಾಳಿಗಳು ಕೂಡಾ ದೇವಸ್ಥಾನಗಳ ವಿಷಯದಲ್ಲಿ ಹಿಂದೂ ಗಳನ್ನು ಬಡಿದೆಬ್ಬಿಸಲು ಪ್ರಯತ್ನಿಸುತ್ತಿದ್ದಾರೆ. ಇಲ್ಲಿಯ ಪ್ರಶ್ನೆ ಒಂದು ದೇವಸ್ಥಾನವನ್ನು ಕಟ್ಟಬೇಕೇ ಬೇಡವೇ ಎಂದಲ್ಲ, ಅವರು ಕೆಡವಿದ ಮಸೀದಿಯಿದ್ದಲ್ಲೇ ಕಟ್ಟಬೇಕೇ ಎಂಬುದು. ಈ ಸರಳ ಸತ್ಯವನ್ನು ತೊಗಾಡಿಯಾ ಮರೆತಂತೆ ಕಾಣುತ್ತದೆ. ತಮ್ಮ ನಿಲುಮೆ ಸರಿಯೆಂಬ ಬಗ್ಗೆ ಅವರಿಗೆ ಅಷ್ಟೊಂದು ಚುನಾವಣಾ ಹಿತಾಸಕ್ತಿಗಳ ಬಂಧಿಗಳಾಗಿರುವಂತೆ ಕಾಣುತ್ತದೆ. ಇದು ಕೆಲವು ಸ್ಥಾನಗಳನ್ನು ಪಡೆಯುವ ಪ್ರಶ್ನೆಯಲ್ಲ ಬೇರೇನೇ ಭಿನ್ನಾಭಿಪ್ರಾಯಗಳಿದ್ದರೂ ನಮ್ಮ ರಾಷ್ಟ್ರೀಯ ಐಕ್ಯತೆ, ಧರ್ಮನಿರಪೇಕ್ಷ ದಾರಿ ಮತ್ತು ಸಮಿಶ್ರ ಸಂಸ್ಕೃತಿಗೆ ಬಂದಿರುವ ಬೆದರಿಕೆಯನ್ನು ಎದರಿಸುವಲ್ಲಿ ನಾವು ಒಂದಾಗಿದ್ದೇವೆ ಎಂಬ ಸಂದೇಶವನ್ನು ಧರ್ಮನಿರಪೇಕ್ಷ ಶಕ್ತಿಗಳು ಜನಸಾಮಾನ್ಯರ ನಡುವೆ ಒಯ್ಯಬೇಕು.

ಎನ್‌ಡಿಎ ಪಕ್ಷಗಳ ಮಜಾ

ಇನ್ನು ಎನ್.ಡಿ.ಎ. ಪಕ್ಷಗಳು ಬಿಜೆಪಿ ಜತೆಗೂಡಿ ಮಜಾ ಮಾಡುವಂತೆ ಕಾಣುತ್ತವೆ. ಆದರೆ ಅವರ ಕಾರ್ಯಕರ್ತರು, ಮತದಾರರು ಈ ಮಂದದೃಷ್ಟಿಗೆ ಖಂಡಿತಾ ಜವಾಬು ಕೇಳುತ್ತಾರೆ. ಕಳೆದ ನಾಲ್ಕುವರೆ ವರ್ಷಗಳಲ್ಲಿ ಅವರ ಸಾಮಾಜಿಕ ನೆಲೆ ಕುಸಿಯುತ್ತದೆ. ಲೋಕಜನಶಕ್ತಿ ಪಕ್ಷ ಆಗಲೇ ಹೊರಬಂದಿದೆ. ವಿಹೆಚ್‌ಪಿ ಬೆದರಿಕೆಗಳಿಗೆ ಡಿಎಂಕೆ ಅಥವಾ ಪಿಎಂಕೆ ಪಿಸುಗುಟ್ಟುತ್ತಿವೆ. ಈಗ ಅಕಾಲಿಗಳು ಈಗ ಹಿನ್ನೋಟ ಮಾಡುತ್ತಿದ್ದಾರೆ. ನಿಜವಾಗಿ ಈ ಪಕ್ಷಗಳೇ ಬಿಜೆಪಿಯನ್ನು ಸ್ವಲ್ಪ ಮಟ್ಟಿಗೆ ಗೌರವಾರ್ಹಗೊಳಿಸಿದ್ದು ಹಾಗೂ ತಮ್ಮ ಭಾವನೆಗಳನ್ನೇ ಉಪೇಕ್ಷಿಸುವ ಭಂಡತನವನ್ನು ಪ್ರದರ್ಶಿಸಲು ಬಿಜೆಪಿಗೆ ಅವಕಾಶ ಮಾಡಿಕೊಟ್ಟಿದ್ದು.

ಅದೇನೇ ಇರಲಿ ಹಿಂದುಸ್ತಾನ್ ಟೈಮ್ಸ್‌ನಲ್ಲಿ ಬರೆಯುತ್ತಾ ಪಂಕಜ್ ವೋರಾ ನೆನಪಿಸಿಕೊಂಡಂತೆ 1979ರಲ್ಲಿ ತುಂಬಾ ತಡವಾಗಿ ಶ್ರೀ ರಾಜನಾರಾಯಣ್ ದ್ವಿಸದಸ್ಯತ್ವದ ಪ್ರಶ್ನೆಯೆತ್ತಿ ಆಗಿನ ಜನತಾಪಕ್ಷದ ಜನಸಂಘ ವಿಭಾಗಕ್ಕೆ ಆತ್ಮಹತ್ಯೆಗೆ ಇಳಿಯುವಂತೆ ಮಾಡಿದರು. ಈಗಲೂ ಆ ಪ್ರಶ್ನೆ ಇದ್ದೇ ಇದೆ. ಎನ್.ಡಿ.ಎ. ಪಕ್ಷಗಳು ಅವರನ್ನು ಉಪೇಕ್ಷಿಸುವಂತಿಲ್ಲ. ಸಂಘಪರಿವಾರ ಭರವಸೆಯಿದ್ದರೆ ಅವರು ಕಾನೂನು ತನ್ನ ದಾರಿಯಲ್ಲಿ ಸಾಗಲು ಏಕೆ ಬಿಡುತ್ತಿಲ್ಲ? ಮಾಯಾವತಿಯವರನ್ನು ದಾಳವಾಗಿ ಬಳಸಿ ಉತ್ತರ ಪ್ರದೇಶ ಸರಕಾರದ ನೋಟಿಫಿಕೇಶನನ್ನು ರದ್ದು ಮಾಡಿ ಅಡ್ವಾಣಿ, ಜೋಶಿ ಮತ್ತಿತರರು ತಕ್ಷಣ ಕೊಳ್ಳುವಂತೆ ಏಕೆ ಮಾಡಿದರು?

ಈ ಎಲ್ಲಾ ಪ್ರಶ್ನೆಗಳನ್ನು ಜನ ಕೇಳಬೇಕು. ಕೇಸರಿ ಪಡೆಗಳಿಗೆ ಇವೆಲ್ಲದರ ಪರಿವೆಯಿಲ್ಲ. ಮುಂದಿನ ಒಂದೆರಡು ವರ್ಷಗಳಲ್ಲಿ ಪ್ರಮುಖವಾಗಿ ಅವರು ದೇವಸ್ಥಾನದ ಪ್ರಶ್ನೆಯ ಮೇಲೆ ಭಾವೋನ್ಮಾದವನ್ನು ಬಡಿದೆಬ್ಬಿಸಲು ಪ್ರಯತ್ನಿಸುತ್ತಾರಷ್ಟೆ.

ಭವಿಷ್ಯವೇ ಬೆದರಿಕೆ

ಧರ್ಮನಿರಪೇಕ್ಷ ಶಕ್ತಿಗಳ ಮುಂದೆ ಹಿಂದೆಂದೂ ಇಷ್ಟು ಗಂಭೀರವಾದ ಸವಾಲು ಬಂದಿರಲಿಲ್ಲ. ಆರ್ಥಿಕ ಮತ್ತು ಇತರ ರಂಗಗಳಲ್ಲಿ ವಾಜಪೇಯಿ ಸರಕಾರದ ಶೋಚನೀಯ ವಿಫಲತೆಯ ಹಿನ್ನೆಲೆಯಲ್ಲಿ **ಸಂಘ ಪರಿವಾರ ತನ್ನ ಕೋಮುವಾದಿ ಆರ್ಭಟವನ್ನು ಬಹಳಷ್ಟು ಹೆಚ್ಚಿಸುವುದು ಖಂಡಿತ. ಈಗಿರುವ ಪ್ರಶ್ನೆ ಧರ್ಮನಿರಪೇಕ್ಷ ಶಕ್ತಿಗಳು ಎದ್ದು ನಿಲ್ಲುತ್ತವೆಯೇ?.**

ಇತ್ತೀಚೆಗೆ ಕಾಂಗ್ರೆಸ್ ಬೆದರಿಕೆಯ ಗಂಭೀರತೆಯನ್ನು ಅರಿತಂತೆ ಕಾಣುತ್ತದೆ. ಈ ಸಕಾರಾತ್ಮಕ ಸಂಕೇತ ಗುಜರಾತ್ ಚುನಾವಣೆಯ ಮೊದಲು ಬರುತ್ತಿದ್ದರೆ ಚಿತ್ರವೇ ಬೇರೆಯಿರುತ್ತಿತ್ತು. ಆದರೆ ಇತರ ಕೆಲವು ಪಕ್ಷಗಳು ತಮ್ಮ ಸಂಕುಚಿತ ಹಿಂದುತ್ವಕ್ಕೆ ಬದ್ಧವಾಗಿದೆ. ಎನ್.ಡಿ.ಎ.ಗಲ್ಲ ಎಂದು ತೊಗಾಡಿಯಾ ಈಗಾಗಲೇ ಸ್ಪಷ್ಟಪಡಿಸಿ ದ್ದಾರೆ. ಬಿಜೆಪಿ ವಿಹೆಚ್‌ಪಿ ಹದ್ದುಗಳಂತೆ ಲಗಾಮು ಹಾಕುತ್ತದೆ ಎಂದು ಎನ್.ಡಿ.ಎ ಪಕ್ಷಗಳು ನಿಜವಾಗಿಯೂ ಭಾವಿಸಿದ್ದರೆ ತಮ್ಮ ಅಂತ್ಯ ಸಂಸ್ಕಾರಕ್ಕೆ ತಾವೇ ಸಿದ್ಧತೆ ನಡೆಸುವುದೊಳ್ಳೆಯದು. ಮುಂಬರುವ ಪರ್ವದಲ್ಲಿ ಅವರ ಗೈರು ಹಾಜರಿಯಾದ ಗಮನಕ್ಕೂ ಬಾರದು ಬಿಜೆಪಿಯ ಗಮನಕ್ಕೂ ಬಾರದು, ಧರ್ಮನಿರಪೇಕ್ಷ ಶಕ್ತಿಗಳ ಗಮನಕ್ಕೂ ಬಾರದು, ಜನಸಾಮಾನ್ಯರ ಗಮನಕ್ಕಂತೂ ಬರಲಿಕ್ಕೆ ಇಲ್ಲ.

ಜನಜಾಗೃತಿಯ ಉತ್ತರ.......

ಪುಟ 3 ರಿಂದ

ಎಚ್ಚರಿಕೆಯಾಗಿತ್ತು.

ಆದ್ದರಿಂದ ಈ ಧರ್ಮ ನಿರಪೇಕ್ಷತೆ ಶಕ್ತಿಗಳ ಜಾಗೃತಿ.. ಸಂಘಪರಿವಾರದ ಏಕಮುಖ ಆಕ್ರಮಣಕ್ಕೆ ಪ್ರತಿರೋಧವು ಖಾವಿಪಡೆಗಳನ್ನೂ ಬೆಚ್ಚಬೀಳಿಸುವಂತೆ ಮಾಡಿದೆ. ಅಂದು ಐದಾರು ಸಾವಿರ ಜನರ ಭಾರೀ ಮೆರವಣಿಗೆ ನಡೆಯುವಾಗಲೇ ಬಿಜೆಪಿ ಹಾಗೂ ಬಜರಂಗ ದಳದ ತಂಡಗಳು ಪ್ರಚೋದನಾಕಾರಿ ಘೋಷಣೆ ಕೂಗಿ ಗಲಭೆಯೆಬ್ಬಿಸಿ ಕಾರ್ಯಕ್ರಮ ಹಾಳು ಮಾಡಲು ಯತ್ನಿಸಿದರು. (ನಾವು ಒತ್ತಾಯಿಸುವ ವರೆಗೂ ಪೋಲೀಸರು ಇದನ್ನು ಮನೋರಂಜನೆಯಂತೆ ನೋಡುತ್ತಾ ನಿಂತಿದ್ದರು). ಕಾರ್ಯಕ್ರಮ ಭಾರಿ ಯಶಸ್ವಿಯಾಗಿ, ಸಂಘಪರಿವಾರದ ಸುಳ್ಳುಗಳಿಗೆ ಉತ್ತರಿಸಿ ಹಾಗೂ ಗುಪ್ತ ಅಜೆಂಡಾಗಳನ್ನು ಬಯಲುಗೊಳಿಸಿ ಜನತೆ ಕ್ರಿಯಾಶೀಲಗೊಳ್ಳುವ ನಿರ್ಧಾರದ ಬಳಿಕ ಈಗ ಪರಿವಾರ ಹತಾಶರಾಗಿ ಮತಿಭ್ರಮಿತರಂತೆ ಮಾತನಾಡ ತೊಡಗಿದ್ದಾರೆ. ಎಲ್ಲರೂ ನಿರೀಕ್ಷಿಸಿದಂತೆಯೇ ಈ ತೊಗಾಡಿಯಾ ಸಂತತಿಯು ಸೌಹಾರ್ದ ರ‍್ಯಾಲಿಯು ಪಾಕಿಸ್ತಾನದ ಐ.ಎಸ್.ಐನ ಪಿತೂರಿ ಎಂದು ವ್ಯಾಖ್ಯಾನಿಸಿದ್ದಾರೆ. ಇಂತಹವರಿಗೆ ಸಮಚಿತ್ತದಿಂದ ನಿರಂತರ ಉತ್ತರ ಹೇಳಬೇಕಿದೆ. ಜನರ ಮನಸ್ಸಿನಲ್ಲಿ ಹುಟ್ಟುಹಾಕುವ ಗೊಂದಲಗಳನ್ನು ಹೆಜ್ಜೆಹೆಜ್ಜೆಗೂ ನಿವಾರಿಸಬೇಕಿದೆ.

ಈ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ದೇಶದ ಖ್ಯಾತ ಚಿಂತಕ ಸ್ವಾಮಿ ಅಗ್ನಿವೇಶ್ ಕಾರ್ಯಕ್ರಮ ಉದ್ಘಾಟಿಸಿದರಲ್ಲದೇ ಸಭೆಯಲ್ಲಿಯೂ ಅರ್ಥಪೂರ್ಣವಾಗಿ ಮಾತನಾಡಿದರು. ಸಾಮ್ರಾಜ್ಯಶಾಹಿ ಅಧಿಪತ್ಯದ ಅಕ್ರಮಣಗಳು, ಜಾಗತೀಕರಣ, ಉದಾರೀಕರಣ ತಂದಿರುವ ದುರಂತಗಳು ವಾಜಪೇಯಿ ಸರ್ಕಾರದ ನೀತಿಗಳು ಆರ್.ಎಸ್.ಎಸ್.ನ ಫ್ಯಾಸಿಸ್ಟ್ ಅಜೆಂಡಾ ಎಲ್ಲಾ ಬಗೆಯ ಕೋಮಿನ ಮೂಲಭೂತವಾದಿಗಳ ಅಪಾಯ ಮುಂತಾಗಿ ವಿವರಿಸಿದರು. ಚಿಕ್ಕಮಗಳೂರನ್ನು ಇನ್ನೊಂದು ಅಯೋಧ್ಯೆ ಮಾಡುವ ಬೆದರಿಕೆ ಒಡ್ಡಿದ್ದ ತೊಗಾಡಿಯಾಗೆ ಉತ್ತರಿಸುತ್ತಾ **ನಾವು ದೇಶವನ್ನು ಇನ್ನೊಂದು ಚಿಕ್ಕಮಗಳೂರು ಮಾಡುತ್ತೇವೆ** ಎಂಬ ಸೌಹಾರ್ದತೆಯ ಸಂದೇಶ ಸಾರಿದ್ದು ಎಲ್ಲರಲ್ಲೂ ಸ್ಫೂರ್ತಿ ತಂದಿತು. ಅಲ್ಲದೇ ಆಂಧ್ರದ ಖ್ಯಾತ ಹಾಡುಗಾರ ಗದ್ದರ್, ಕರ್ನಾಟಕದ ಪ್ರಮುಖ ಸಾಹಿತಿಗಳಾದ ಪ್ರೊ। ಜಿ.ಕೆ. ಗೋವಿಂದರಾವ್, ಪ್ರೊ। ರಾಮದಾಸ್, ರಹಮತ್ ತರಿಕೆರೆ, ದೇವನೂರು ಮಹದೇವ, ಡಾ। ವಿಜಯಾ, ಡಾ। ರಾಜೇಂದ್ರ ಚೆನ್ನಿ ಭಾನು ಮುಷ್ತಾಕ್, ಪ್ರೊ. ಚಂದ್ರಶೇಖರ ಪಾಟೀಲ ಮುಂತಾದವರೂ ಸಿಪಿಐ(ಎಂ), ಸಿಪಿಐ, ನಕ್ಸಲೀಯ ಬೆಂಬಲಿತ ಕ.ವಿ.ರಂ., ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ, ಜೆ.ಡಿ.(ಎಸ್), ಅಲ್ಲದೇ ಎಸ್‌ಎಫ್‌ಐ, ಡಿವೈಎಫ್‌ಐ, ಸಿಐಟಿಯುವಿನಂತಹ ಹಲವಾರು ಸಾಮೂಹಿಕ ಸಾಮಾಜಿಕ ಸಂಘಟನೆಗಳು ಸಾಂಸ್ಕೃತಿಕ ತಂಡಗಳು ಭಾಗವಹಿಸಿದ್ದು ವಿಶೇಷವಾಗಿತ್ತು. ಅಗ್ನಿವೇಶರ ಮಾತುಗಳನ್ನು ಒಳಗೊಂಡು ಇಂತಹ ರಾಜ್ಯಮಟ್ಟದ ಕಾರ್ಯಕ್ರಮದ ಮುಖ್ಯ ತಿರುಳನ್ನು ನಾಡಿನ ಜನರ ಮುಂದೆ ವರದಿ ಮಾಡುವಲ್ಲಿ ಬಹುತೇಕ ಪತ್ರಿಕೆ ಟಿ.ವಿ. ಮಾಧ್ಯಮಗಳು ಸರಿಯಾದ ಮಹತ್ವಕೊಡಲಿಲ್ಲ. ವಿಚಾರಧಾರೆ ಗಳನ್ನು ಜನರ ಮುಂದೆ ಸರಿಯಾಗಿ ಮಂಡಿಸದೇ ತಡೆದವು. ಆದರೆ ಈ ಕಾರ್ಯಕ್ರಮವನ್ನು ಟೀಕಿಸಿದ ಖಾವೀ ಪಡೆಗಳ ಹೇಳಿಕೆಗಳು ಹದಿನೈದು ದಿನಗಳಾದರೂ ಪುಂಖಾನು ಪುಂಖವಾಗಿ ಪತ್ರಿಕೆ ಪುಟಗಳಲ್ಲಿ ರಾರಾಜಿಸುತ್ತಿವೆ.

ಕೊರತೆಗಳು-ದೌರ್ಬಲ್ಯಗಳು

ಈ ಕಾರ್ಯಕ್ರಮ ಯಶಸ್ವಿ ಹಾಗೂ ಸ್ವಾಗತಾರ್ಹವಾಗಿರುವಾಗಲೇ ಹಲವಾರು ಕೊರತೆ ದೌರ್ಬಲ್ಯಗಳನ್ನು ಗಮನಿಸಬೇಕು. ಸಾವಿರ ಸಾವಿರ ಜನ ಸ್ವಯಂ ಸ್ಫೂರ್ತಿಯಿಂದ ಭಾಗವಹಿಸಿದ ಈ ಕಾರ್ಯಕ್ರಮದಲ್ಲಿ ಚಿಕ್ಕಮಗಳೂರಿನ ಸ್ಥಳೀಯರ ಪಾಲ್ಗೊಳ್ಳುವಿಕೆ ತೀರಾ ಸಣ್ಣದಿತ್ತು. ಇದರ ಸಂಘಟಕರು (ಕ.ವಿ.ರಂ) ಸ್ಥಳೀಯ ವ್ಯಕ್ತಿಗಳು ಹಾಗೂ ಸಂಘಟನೆಗಳನ್ನು ಪಾಲ್ಗೊಳಿಸಲು ಮತ್ತು ಸಮಭಾಗಿತ್ವದೊರೆಯುವಂತಹ ಅಂಶವನ್ನು ಅಷ್ಟಾಗಿ ಪರಿಗಣಿಸಿರಲಿಲ್ಲ. ಅಂತಹ ಗಣನೀಯ ಶಕ್ತಿ ದೂರ ಉಳಿಯಿತು. ಅಲ್ಲದೇ ಈ ಕಾರ್ಯಕ್ರಮದಲ್ಲಿ ಇತರೆ ಜನ ವಿಭಾಗಗಳ ಜೊತೆಗೆ ಅಲ್ಪಸಂಖ್ಯಾತರನ್ನು ಪಾಲ್ಗೊಳಿಸುವುದು ಮಹತ್ವದ್ದಾಗಿರುವಾಗಲೇ ಜಮಾತೆ-ಎ-. ಇಸ್ಲಾಮಿ ಹಿಂದ್, ಸುನ್ನಿ ಸ್ಟುಡೆಂಟ್ಸ್ ಫೆಡರೇಷನ್, ಸ್ಟುಡೆಂಟ್ ಇಸ್ಲಾಮಿಕ್ ಆರ್ಗನೈಜೇಷನ್ ನಂತಹ ಮುಸ್ಲಿಂ ಮೂಲಭೂತವಾದಿ ಸಂಘಟನೆಗಳನ್ನು ತೊಡಗಿಸಿದ್ದು ಗಂಭೀರವಾದ ದೋಷವಾಗಿದೆ. ಕೋಮುವಾದಿಗಳನ್ನು ಎದುರಿಸಬೇಕು ಎನ್ನುವಾಗ ಇನ್ನೊಂದು ಬಣ್ಣದ ಧಾರ್ಮಿಕ ಮೂಲಭೂತ ವಾದಿಗಳನ್ನು ತೊಡಗಿಸುವುದು ಕೋಮುವಾದದ ವಿರುದ್ಧ ಹೋರಾಟವನ್ನು ದುರ್ಬಲಗೊಳಿಸುತ್ತದೆ, ಹಾದಿತಪ್ಪಿಸುತ್ತದೆ. ಮಾತ್ರವಲ್ಲ ಸಂಘ ಪರಿವಾರದ ಅಪಪ್ರಚಾರ ವ್ಯಾಪಕವಿರುವಾಗ ಬಹುಸಂಖ್ಯಾತ ಸಾಮಾನ್ಯ ಜನರ, ಖಾವಿ ಪಡೆಗಳ ವಾದಗಳಿಗೆ ಪುಷ್ಟಿದೊರೆತು, ಧರ್ಮನಿರಪೇಕ್ಷತೆಯ ರಕ್ಷಣೆಗಾಗಿ ನಡೆಯುವ ಹೋರಾಟದಿಂದ ದೂರಗೊಳಿಸುತ್ತದೆ ಮತ್ತು ಅವರನ್ನು ಬಲಪಡಿಸಲೂಬಹುದು. ಕೋಮುವಾದಿಗಳ ಧಾಳಿಯನ್ನೆದುರಿಸಲು ನೇರ ಕಾರ್ಯಾಚರಣೆ, ಮುಖಾಮುಖಿಯಾಗುವುದು, ಪಡೆಗಳ ರಚನೆ ಮುಂತಾದ ಅಮೋಘ ಸಲಹೆಗಳೂ ಬಂದವು. ಇವೆಲ್ಲಕ್ಕಿಂತ ಕೋಮು ವಿಷಾಣುವಿನಿಂದ ಭಾದಿತರಾದುದನ್ನು ಇನ್ನೂ ಆಚೀಚೆ ನೋಡುತ್ತಿರುವವರನ್ನು ಮನಗೆದ್ದು, ಈ ಆಂದೋಲನದಲ್ಲಿ ತೊಡಗಿಸುವುದು ಮುಖ್ಯವಾಗುತ್ತದೆ. ಅದು ಪ್ರಾಶಸ್ತ್ಯದ ಕೆಲಸವಾಗಿದೆ.

ಇಷ್ಟೆಲ್ಲವುಗಳ ನಡುವೆಯೂ ಮಹತ್ವದ ಈ ಆಂದೋಲನದಲ್ಲಿ ಪರಸ್ಪರ ಸಂವಾದ ಸಹಮತ ರೂಪುಗೊಳ್ಳಬೇಕು. ಸಮಾವೇಶದ ಅಂತಿಮ ಘೋಷಣೆಯ ಪ್ರಾಯೋಗಿಕವಾಗಿದ್ದು, ಆದರ ಆಧಾರದಲ್ಲಿ ಹೆಚ್ಚು ಕ್ರಿಯಾಶೀಲಗೊಳ್ಳಬೇಕು. ○

ಕೃಷ್ಣರ ನಾಯಕತ್ವ : ಕಾಂಗ್ರೆಸ್‌ನಲ್ಲಿ ಬಂಡಾಯದ ಭಾವುಟ

ಕರ್ನಾಟಕದ ಕಾಂಗ್ರೆಸ್‌ನಲ್ಲಿ ಭಿನ್ನಮತ ಮತ್ತೆ ಸ್ಫೋಟಗೊಂಡಿದೆ. ಬಹಿರಂಗವಾಗಿ ಬೀದಿಗೂ ಬಂದಿದೆ. ಎಸ್.ಎಂ. ಕೃಷ್ಣರ ನಾಯಕತ್ವದ ವಿರುದ್ಧ ಭಿನ್ನಮತ ಹೊರಬಂದಿರುವುದು ಹೊಸತೇನಲ್ಲ. ಆದರೆ ಈಸಲ ಬಂಡಾಯ ಬಾವುಟ ಹಾರಿಸಿದವರು ಮಾಜಿಸಚಿವ, ಕಾಂಗ್ರೆಸ್‌ನ ಹಿರಿಯ ನಾಯಕ ಜಾಫರ್ ಷರೀಫ್‌ರವರು. ಕೃಷ್ಣರ ಆಡಳಿತ ವೈಖರಿ, ಅನುಸರಿಸುತ್ತಿರುವ ನೀತಿಗಳ ಬಗ್ಗೆ ತೀವ್ರವಾಗಿ ಆರೋಪ ಪಟ್ಟಿಯ ಪತ್ರವನ್ನು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿಗೆ ರವಾನೆ ಮಾಡಲಾಗಿದೆಯಲ್ಲದೇ, ಷರಿಫ್‌ರವರು ತಮ್ಮ ಸಂಸತ್ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆಂಬುದು ಒಂದು ಗಂಭೀರವಾದ ಕ್ರಮವಾಗಿದೆ.



ರಾಷ್ಟ್ರಮಟ್ಟದಲ್ಲಿಯೂ ಮತ್ತು ರಾಜ್ಯ ಮಟ್ಟದಲ್ಲಿಯೂ ಕಾಂಗ್ರೆಸ್ ನಾಯಕತ್ವ ಅನುಸರಿಸುತ್ತಿರುವ ನೀತಿ ನಿಲುವು ಕ್ರಮಗಳನ್ನು ತೀವ್ರವಾಗಿ ಟೀಕಿಸಿ ಪತ್ರ ಬರೆದಿರುವುದಾಗಿ ವರದಿಗಳಿವೆ. ಈ ಸಂದರ್ಭದಲ್ಲಿಯೇ ಕೃಷ್ಣ ಸಂಪುಟದ ಸಚಿವ ಎಚ್.ಕೆ. ಪಾಟಿಲರು ಸಹ ದೆಹಲಿ ವರಿಷ್ಠರಿಗೆ ಅಹವಾಲು ಸಲ್ಲಿಸಿದ್ದಾರೆ. ಗಾಬರಿಗೊಂಡ ಕೃಷ್ಣ ಸಹ ಪ್ರತಿತಂತ್ರ ಹೂಡುತ್ತಾ ನಾಯಕರ ಮನವೊಲಿಕೆಯಲ್ಲಿ ಮಗ್ನರಾಗಿದ್ದಾರೆ.

ಕೃಷ್ಣರ ಸರ್ಕಾರ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ನಿಬಾಯಿಸುವ ರೀತಿ, ಗ್ರಾಮೀಣ ಜನರ ಅಭಿವೃದ್ಧಿಗೆ ಕಿಂಚಿತ್ತೂ ಗಮನವಿಲ್ಲದ್ದು ಹಾಗೂ ಸರ್ಕಾರದ ಸಾಧನೆಗಳ ಶೂನ್ಯತೆ ವಿವರಿಸುತ್ತಾ, ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳ ಆಟಾಟೋಪಗಳನ್ನು ಹದ್ದುಬಸ್ತಿನಲ್ಲಿಟ್ಟು, ದಮನಿಸಲು ವಿಫಲವಾದ ಬಗೆಯನ್ನು ಪ್ರಸ್ನಿಸಿದ್ದಾರೆ ಶರೀಫರು. ಕಾವೇರಿ ವಿವಾದ, ನಾಗಪ್ಪಹತ್ಯೆ, ಕೊಡಗಿನಲ್ಲಿ ಅಲ್ಪಸಂಖ್ಯಾತರ ಮೇಲಿನ ಧಾಳಿ ಘಟನೆಗಳಲ್ಲಿ ಸರಿಯಾದ ಕ್ರಮವಹಿಸದೇ, ಪ್ರತಿಬಾರಿ ತಪ್ಪೊಪ್ಪಿಗೆ ಕೇಳುವ ಪ್ರವೃತ್ತಿಯನ್ನು ತೀವ್ರವಾಗಿ ಟೀಕಿಸಿ, ಈ ಸಂದರ್ಭಗಳನ್ನು ಬರದಂತೆ ಕ್ರಮವಹಿಸದೇ ಇರುವುದು 'ರಣಹೇಡಿತನ'ವೆಂದು ಜರೆದಿದ್ದಾರೆ. ಹಾಗೇ ದಲಿತರು, ಅಲ್ಪಸಂಖ್ಯಾತ, ಹಿಂದುಳಿದ ವಿಭಾಗದ ಜನತೆಗೆ ಕೃಷ್ಣರ 'ಕಾಣಿಕೆ'ಗಳನ್ನು ಪಟ್ಟಿ ಮಾಡಿದ್ದರೆಂದು ವರದಿಯಾಗಿದೆ.

ಮಾತ್ರವಲ್ಲ, ಕೇಂದ್ರದ ಹೈಕಮಾಂಡ್ ನಾಯಕತ್ವದ ವೈಖರಿಯನ್ನು ತುಂಬಾ ನಿಷ್ಠೂರವಾಗಿಯೇ ವಿಮರ್ಶಿಸಿ, ಹೀಗೆ ಸಾಗಿದರೆ ಕಾಂಗ್ರೆಸ್‌ನ ಭವಿಷ್ಯವೇನು ಎಂದು ಪ್ರಶ್ನಿಸಿದ್ದಾರಂತೆ.

ಕೃಷ್ಣರವರು ಹೈಕಮಾಂಡನ್ನು ಕಮಾಂಡಿನಲ್ಲಿಟ್ಟುಕೊಳ್ಳಲು ಪ್ರತಿ ತಂತ್ರದಲ್ಲಿ ಮಗ್ನರಾಗಿರುವುದನ್ನು ಬಿಟ್ಟರೆ ಎತ್ತಲಾದ ಪ್ರಶ್ನೆಗಳ ಬಗ್ಗೆ ಒಂದು ವಿಮರ್ಶಾತ್ಮಕ ನಿಲುವು ತಳೆದಿಲ್ಲ. ಕೃಷ್ಣರ ಸಂಪುಟದ ಕೆಲ ಸಚಿವರು ಷರೀಫರು ಹೇಳಿದ್ದರಲ್ಲಿ ಪ್ರಶ್ನೆಗಳಿವೆ ನಿಜ, ಆದರೆ ಬಹಿರಂಗಕ್ಕೆ ತರಬಾರದಿತ್ತು. ಪಕ್ಷದ ವೇದಿಕೆಯಲ್ಲಿ ಚರ್ಚಿಸಬೇಕಾಗಿತ್ತು ಎಂದು ಅವರನ್ನು ಸಮರ್ಥಿಸುವ ಧಾಟಿಯಲ್ಲಿ ಮಾತನಾಡಿದ್ದಾರೆ.

ಕಾಂಗ್ರೆಸ್‌ನೊಳಗೆ ಭಿನ್ನ ಮತ, ಬಂಡಾಯ, ವಿಭಜನೆ ಹೊಸತೇನಲ್ಲ. ಆದರೆ ಕಾಂಗ್ರೆಸ್ ಸರ್ಕಾರದ (ಪಕ್ಷದ) ನೀತಿಗಳಿಂದ ಜನತೆ ಅನುಭವಿಸಿದ ಬವಣೆಗಳು ಬೆಳೆಯುತ್ತಿರುವ ತೀವ್ರ ಅತೃಪ್ತಿಯ ಹಿನ್ನೆಲೆಯಲ್ಲಿಯೂ ಸಹ ಇವು ಸ್ಫೋಟಗೊಳ್ಳುವುದನ್ನು ಗಮನಿಸಬೇಕು. ಈ ಅತೃಪ್ತಿಯನ್ನೇ ಬಳಸಿಕೊಳ್ಳಲು, ಜನರ ಗಮನವನ್ನು ಮೂಲಭೂತ ಅಂಶಗಳಿಂದ ಬೇರೆಡೆಗೆ ತಿರುಗಿಸಲು ಬಿಜೆಪಿ ತೀವ್ರತರವಾಗಿ ಯತ್ನಿಸುತ್ತಿದೆ. ಜಾತಿ ರಾಜಕರಣಕ್ಕಿಳಿಯಲು ಹಾತೊರೆಯುತ್ತಿದೆ.

ಇತ್ತೀಚೆಗಿನ ವಿಶೇಷ ಅಧಿವೇಶನದಲ್ಲಿ ಕಾಂಗ್ರೆಸ್ ಬಿಜೆಪಿಗಳ ದೊಂಬರಾಟಗಳು ನಿಜಕ್ಕೂ ಅವರು ಏನನ್ನು ಬಯಸುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುತ್ತವೆ. ನಾಗಪ್ಪನವರ ಹತ್ಯೆಯನ್ನು ಒಳಗೊಂಡು ಸರ್ಕಾರದ ದಿವಾಳಿಕೋರ ನೀತಿಗಳನ್ನು ರಾಜ್ಯದ ಜನ ಎದುರಿಸುತ್ತಿರುವ ಅಸಹನೀಯ ಸಂಕಷ್ಟಗಳ ಬಗ್ಗೆ ತೀವ್ರವಾದ ಧಾಳಿ ನಡೆಸದೇ ಕಾಂಗ್ರೆಸ್‌ನ್ನು ಇಂತಹ ವಿಷಯಗಳಿಂದ ಪಾರಾಗಿಸಲು ಕಲಾಪಗಳಿಗೆ ಅಡ್ಡಿಪಡಿಸಿ ಹೊರಹಾಕಿಸಿಕೊಳ್ಳುವ, ನಂತರ ಹೊರಗಡೆ ಮೆರವಣಿಗೆ ಮಾಡುವ ದೊಂಬರಾಟಕ್ಕೆ ವಿಧಾನಸಭೆಯಲ್ಲಿನ ಅಧಿಕೃತ-ವಿರೋಧಪಕ್ಷ ಹೆಣಗಾಡಿ ಸಹಕರಿಸಿದ್ದು ಇನ್ನು ಹಸಿರಾಗಿದೆ. ವಿಶ್ವಬ್ಯಾಂಕ್ ಕೇಂದ್ರದ ಆರ್ಥಿಕ ನೀತಿಗಳ ಜಾರಿಯನ್ನು ತೀವ್ರಗೊಳಿಸಿರುವ ಕೃಷ್ಣ ಒಟ್ಟು ಸನ್ನಿವೇಶದಿಂದ ಪಾಠಕಲಿತಾರೆಯೇ? ಅಂತಹ ಯಾವ ಸಣ್ಣ ಸೂಚನೆಗಳೂ ಕಾಣುತ್ತಿಲ್ಲ. ಇನ್ಫೋಸಿಸ್, ವಿಪ್ರೋ, ಮಲ್ಯರಂತಹ ಭಾರಿ ಉದ್ದಿಮೆದಾರರನ್ನು ವಿದೇಶಿ ಹಣಕಾಸು ಸಂಸ್ಥೆಗಳನ್ನು ಬಂಡವಾಳದಾರರನ್ನು ಓಲೈಸಲು ಹೊರಟಿರುವ ಕೃಷ್ಣರ ಸರ್ಕಾರದ ನೀತಿಗಳ ವಿರುದ್ಧ ದೃಢ ಹೋರಾಟ ನಡೆಯಬೇಕಿದೆ. ○

......ಸರ್ಕಾರದ್ದೇ ಸಿಂಹಪಾಲಿನ ಹೊಣೆ

ಪುಟ 3 ರಿಂದ

ಕೆ.ಪಿ.ಟಿ.ಸಿ.ಎಲ್.ನ ವ್ಯವಸ್ಥಾಪಕ ನಿರ್ದೇಶಕರು ಅಹವಾಲು ತೋಡಿಕೊಂಡಿದ್ದಾರೆ.

6. **ಸರಕಾರ ಈಗಾಲೇ ನಾಲ್ಕು ಕಂಪನಿಗಳ ಚರ ಸ್ಥಿರಾಸ್ತಿಗಳ ಬೆಲೆ ಮೌಲ್ಯೀಕರಣ ಮಾಡಿಸಿದೆ.** ಬೆಂಗಳೂರು ಕಂಪನಿ ರೂ. 1105 ಕೋಟಿ, ಮಂಗಳೂರು ಕಂಪನಿ ರೂ. 425 ಕೋಟಿ, ಹುಬ್ಬಳ್ಳಿ ಕಂಪನಿ 637 ಕೋಟಿ, ಗುಲ್ಬರ್ಗಾ ಕಂಪನಿ ರೂ. 450 ಕೋಟಿ ಎಂದು ಸವಕಳಿ ತೆಗೆದು ಪುಸ್ತಕದ ಮೌಲ್ಯೀಕರಣ ಮಾಡಲಾಗಿದೆ. ಮಾರುಕಟ್ಟೆಯ ಬೆಲೆಯ ಆಧಾರದಲ್ಲಿ ಮೌಲ್ಯೀಕರಣ ನೀತಿಯನ್ನು ಕಡೆಗಣಿಸಲಾಗಿದೆ. ಇದು ಹಲವಾರು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿದೆ. ಕಳೆದ 50 ವರ್ಷಗಳಲ್ಲಿ ಸಹಸ್ರಾರು ಕೋಟಿ ಹಣವನ್ನು ತೊಡಗಿಸಿ ರೂಪುಗೊಂಡ ಚರ ಸಿರಾಸ್ತಿ ಮೌಲ್ಯೀಕರಣ ಈಗ ದುಗ್ಗಾಣಿ ಬೆಲೆಗೆ ಮಾರಲು ಸಿದ್ಧತೆಯನ್ನು ಸರಕಾರ ನಡೆಸಿದೆ.

7. ಖಾಸಗೀಕರಣ ಪೂರ್ತಿಗೊಳ್ಳುವತನಕ ಬದಲಾವಣೆ ಕಾಲಘಟ್ಟದಲ್ಲಿ ನಷ್ಟವನ್ನು ಭರಿಸಲು ಸರಕಾರ ಮುಂದಾಗಿದೆ. ನಷ್ಟದ ಪ್ರಮಾಣ ಅಗಾಧವಾಗಿದ್ದು ಸರಕಾರದ ಬೊಕ್ಕಸಕ್ಕೂ ರಾಜ್ಯದ ಗ್ರಾಹಕರಿಗೂ ದೊಡ್ಡ ಹೊರೆಯಾಗಲಿದೆ.

8. ಖಾಸಗೀ ಕಂಪನಿಗಳ ಸೇವಾಗುಣಮಟ್ಟದ ಬಗ್ಗೆ ಭಾರೀ ಅತಿಶಯೋಕ್ತಿ ಮಾತುಗಳನ್ನು ಸರಕಾರ ಆಡತೊಡಗಿವೆ. ಆದರೆ ಒರಿಸ್ಸಾದ ಅನುಭವ ಇದು ಸುಳ್ಳೆಂದು ಸಾಬೀತು ಮಾಡಿದೆ. ಎನ್ರಾನ್ ಕಂಪನಿಯ ಉದಾಹರಣೆಯೂ ಎದುರಿಗಿದೆ.

ಈ ಹಿನ್ನೆಲೆಯಲ್ಲಿ ಜನರ ಹಣದಿಂದ ರೂಪಗೊಂಡ ವಿದ್ಯುತ್ ವಲಯವನ್ನು ಖಾಸಗೀಯವರ ತೆಕ್ಕೆಗೆ ಒಪ್ಪಿಸುವ ನಿರ್ಧಾರದ ಬಗ್ಗೆ ಸರಕಾರ ಪುನರ್ ಅವಲೋಕಿಸಬೇಕಿದೆ.

ವಿದ್ಯುತ್ ಸರಬರಾಜಿನ ಬಿಕ್ಕಟ್ಟಿನ ಬಗ್ಗೆಮಾತ್ರ ಇಂಥ ಸಭೆಗಳನ್ನು ಸೀಮಿತಪಡಿಸದೇ ಒಟ್ಟಾರೆ **ಬಿಕ್ಕಟ್ಟಿನ ಬಗ್ಗೆಯೂ ಸರ್ವ ಪಕ್ಷಗಳ ಹಾಗೂ ರೈತ ಸಂಘಟನೆಗಳ ಸಭೆಗಳನ್ನು ಕರೆದು ಸುದೀರ್ಘವಾಗಿ ಚರ್ಚಿಸಬೇಕೆಂದು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಪರವಾಗಿ ಮುಖ್ಯಮಂತ್ರಿಗಳನ್ನು ಕೋರಲಾಗಿದೆ.**

ಮಹಿಳೆಯ ಬದುಕು-ಬವಣೆ ಬಿಂಬಿಸುವ ಚಿತ್ರಗಳು

ಬರಗಾಲದ ಬವಣೆ, ದಲಿತರ ದುಗುಡ ದುಮ್ಮಾನಗಳ ಬಗ್ಗೆ ದೇಶದ ಉದ್ದಗಲ ಸಂಚರಿಸಿ ಅಧ್ಯಯನಪೂರ್ಣ ಲೇಖನಗಳನ್ನು ಪ್ರಕಟಿಸಿ ಖ್ಯಾತರಾಗಿರುವವರು ಸ್ವತಂತ್ರ ಪತ್ರಕರ್ತ ಪಿ.ಸಾಯಿನಾಥ್. ಅವ್ನೆಸ್ಟಿ ಇಂಟರ್‌ನ್ಯಾಷನಲ್‌ನ ಜಾಗತೀಕ ಮಾನವ ಹಕ್ಕು ಪತ್ರಿಕೋದ್ಯಮ ಬಹುಮಾನ ಪಡೆದ ಪ್ರಪ್ರಥಮ ವರದಿಗಾರ ಎಂಬ ಗರಿಮೆಯೂ ಇವರದು. ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆಯ ಬೊಯೆಮಾ ಪ್ರಶಸ್ತಿ ವಿಜೇತರು. 'ಎವ್ರಿಬಡಿ ಲವ್ಸ್ ಎ ಗುಡ್‌ಡ್ರೌಟ್' ಎಂಬ ಇವರ ವರದಿಗಳ ಸಂಗ್ರಹ ಕೃತಿ ಯುರೋಪಿಯನ್ ಕಮಿಷನ್‌ನ ಪತ್ರಿಕೋದ್ಯಮ ಬಹುಮಾನ ಸಹಿತ ಒಟ್ಟು 13 ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದಿದೆಯೆಂದರೆ ಇವರ ಲೇಖನೀಯ ಮಹತ್ವದ ಅರಿವಾಗುತ್ತದೆ.

ಅಂತರಾಷ್ಟ್ರೀಯ ಖ್ಯಾತಿಯ ಈ ಪತ್ರಕರ್ತನ ಒಳಗಣ್ಣಿನಂತೆ ಇವರ ಕ್ಯಾಮರಾ ಕಣ್ಣು ಕೂಡ ಅಷ್ಟೇ ಸೂಕ್ಷ್ಮವಾಗಿ ಕೆಲಸ ಮಾಡುತ್ತದೆ. ದಮನಿತ ಜನರ ಬದುಕನ್ನು ಅಕ್ಷರಗಳಲ್ಲಿ ಸೆರೆಹಿಡಿದಂತೆಯೇ ಕ್ಯಾಮರಾದಲ್ಲಿಯೂ ಅಷ್ಟೇ ಪ್ರಭಾವಶಾಲಿಯಾಗಿ ಹಿಡಿದಿಡುತ್ತಾರೆ ಸಾಯಿನಾಥ್.

ಕೃಷಿ ಕೂಲಿಕಾರರು ಸೇರಿದಂತೆ ಗ್ರಾಮೀಣ ಭಾರತದ ದುಡಿಯುವ ಮಹಿಳೆಯರ ಬದುಕನ್ನು ಬಿಂಬಿಸುವ ಛಾಯಾಚಿತ್ರಗಳ ಪ್ರದರ್ಶನ ಇದಕ್ಕೆ ಕನ್ನಡಿ ಹಿಡಿಯುತ್ತದೆ. 'ಕಾಣುವ ಕೆಲಸ- ಕಾಣದ ಮಹಿಳೆ' ಶಿರ್ಷಿಕೆಯ ಈ ಪ್ರದರ್ಶನ ಜನವರಿ 18 ರಿಂದ 20ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ.

ಬರಗಾಲದ ಬವಣೆ, ದಲಿತರ ದುಗುಡ ದುಮ್ಮಾನಗಳು, ಜಾಗತೀಕರಣದ ಪರಿಣಾಮಗಳು ಮುಂತಾಗಿ ದೇಶದ ಉದ್ದಗಲಕ್ಕೂ ಸಂಚರಿಸಿ ಅಧ್ಯಯನ ಪೂರ್ಣ ಲೇಖನ ಪ್ರಕಟಿಸಿರುವ ಖ್ಯಾತ ಪತ್ರಕರ್ತ ಪಿ.ಸಾಯಿನಾಥ್‌ರವರು ಪತ್ರಕರ್ತನ ಒಳ್ಳಗಣ್ಣಿನಂತೆ, ಅವರ ಕ್ಯಾಮರಾದ ಕಣ್ಣು ಕೂಡ ಅಷ್ಟೇ ಸೂಕ್ಷ್ಮವಾಗಿ ಕೆಲಸ ಮಾಡುತ್ತದೆ. ಅಂತಹ ಅದ್ಭುತ ಚಿತ್ರಗಳ ಪ್ರದರ್ಶನ ಈಗ ಬೆಂಗಳೂರಿನಲ್ಲಿಯೂ. ಮನಸೆಳೆವ ಈ ಪ್ರದರ್ಶನ ಮನೆಬಾಗಿಲಿಗೆ ಬಂದಿದೆ. ನೋಡ ಬನ್ನಿ.

ಶೀರ್ಷಿಕೆಯೇ ಹೇಳುವಂತೆ ಗ್ರಾಮೀಣ ಪ್ರದೇಶದಲ್ಲೇ ಆಗಲಿ ನಗರ ಪಟ್ಟಣ ಪ್ರದೇಶಗಳಲ್ಲೇ ಆಗಲಿ ದುಡಿಮೆಯಲ್ಲಿ ಮಹಿಳೆಯರು ಹಿಂದೆಯೇನೂ ಬಿದ್ದಿಲ್ಲ, ಆದರೆ ಅವರ ಶ್ರಮಕ್ಕೆ ತಕ್ಕ ಪ್ರತಿಫಲವಾಗಲೀ ಮಾನ್ಯತೆಯಾಗಲಿ ಇಲ್ಲ ಎನ್ನುವುದನ್ನು ಈ ಪ್ರದರ್ಶನ ವಿವರಿಸುತ್ತದೆ.

ಆಂಧ್ರಪ್ರದೇಶ, ಚತ್ತಿಸ್‌ಗಢ, ಮಧ್ಯಪ್ರದೇಶ, ಒರಿಸ್ಸಾ, ತಮಿಳುನಾಡು, ಉತ್ತರಪ್ರದೇಶ ಸಹಿತ ಹತ್ತು ರಾಜ್ಯಗಳಲ್ಲಿ ತೆಗೆದಿರುವ ಈ ಛಾಯಾ



ಚಿತ್ರಗಳು ಬಿಸಿಲು, ಚಳಿ, ಮಳೆ, ಗಾಳಿಯೆನ್ನದೆ ಬೆವರು ರಕ್ತ ಒಂದು ಮಾಡಿ ಬಸವಳಿಯುವ ಭಾರತೀಯ ಸ್ತ್ರೀ ಸಮೂಹದ ಸಂಕಷ್ಟವನ್ನು ಬಿಂಬಿಸುತ್ತವೆ.

ಚಿತ್ರಗಳ ಪ್ರದರ್ಶನ
2003, ಜನವರಿ 18 ರಿಂದ 20
ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
18 ರ ಸಂಜೆ 4.30 ಕ್ಕೆ ಉದ್ಘಾಟನೆ
19 ರಂದು ಬೆಳಿಗ್ಗೆ 11 ಗಂಟೆಗೆ ಸಂವಾದ

ಚತ್ತೀಸ್‌ಗಢದ ಕಾನನಗಳಲ್ಲಿ ಬೀಡಿ ತಯಾರಿಗೆ ಬಳಸುವ ತೆಂಡು ಎಲೆಗಳನ್ನು ಸಂಗ್ರಹಿಸುವುದು, ಜಾರ್ಖಂಡ್‌ನ ಗೊದ್ದಾದಲ್ಲಿ ಕಾಡಿನಿಂದ ಬಿದಿರುಗಳನ್ನು ಕಡಿದು ತಲೆ ಮೇಲೆ ಹೊತ್ತು ತಂದು ಸಂತೆಗಳಲ್ಲಿ ಮಾರುವುದು, ಆಂಧ್ರಪ್ರದೇಶದ ಇಟ್ಟಿಗೆ ಗೂಡುಗಳಲ್ಲಿ ವಾಸ್ತುಶಃ ಬೆಂಕಿಯ ಮಧ್ಯೆಯೇ ಕೆಲಸ ಮಾಡುವುದು, ತಮಿಳುನಾಡಿನ ಕಲ್ಲುಗಣಿಗಳಲ್ಲಿ ಕಾರ್ಯನಿರ್ವಹಣೆ.... ಇವೇ ಮೊದಲಾದ ಶ್ರಮಿಕ ಮಹಿಳೆಯರನ್ನು ಸಾಯಿನಾಥ್ ತಮ್ಮ ಕ್ಯಾಮರಾ ಕಣ್ಣುಗಳಲ್ಲಿ ಸೆರೆಹಿಡಿದು ಅವರ ದುರ್ಬಲ ಬದುಕನ್ನು ವೀಕ್ಷಕರ ಮುಂದೆ ತಂದು ನಿಲ್ಲಿಸಿದ್ದಾರೆ.


ಮಹಿಳೆಯರು ಮತ್ತು ಪುರುಷರು ಮಾಡುವ ಕೆಲಸ ಒಂದೇ ಬಗೆಯದ್ದಾದರೂ ಮಹಿಳಾ ಕಾರ್ಮಿಕರ ವಿರುದ್ಧ ತಾರತಮ್ಯ ಎಸಗುತ್ತಿರುವುದನ್ನು, ಸ್ತ್ರೀಯರ ಹಲವು ರೀತಿಯ ದುಡಿಮೆಗೆ ಮಾನ್ಯತೆ ಇಲ್ಲದಿದ್ದರೂ ಅದರಿಂದ ದೇಶದ ಆರ್ಥಿಕತೆಗೆ ಸಿಗುತ್ತಿರುವ ಅಪಾರ ಕೊಡುಗೆ... ಮೊದಲಾದವುಗಳನ್ನು ಸಾಯಿನಾಥ್ ವಿವರಿಸುತ್ತಾರೆ. ಅರ್ಥತಜ್ಞರು ಈ ಕೊಡುಗೆಯನ್ನು ಗುರುತಿಸಬೇಕೆಂದು ವಾದಿಸುತ್ತಾರೆ.

ಚೆನ್ನೈನ ಏಶ್ಯನ್ ಕಾಲೇಜ್ ಆಫ್ ಜರ್ನಲಿಸಂ ಮುಂತಾದ ಸಂಸ್ಥೆಗಳಲ್ಲಿ ಅಧ್ಯಾಪನವನ್ನು ಮಾಡುತ್ತಿರುವ ಸಾಯಿನಾಥ್‌ರ ಕೆಲಸ ವೀಕ್ಷಿಸಲು ರಾಜಧಾನಿ ಜನರಿಗೆ ಅವಕಾಶ ಕಲ್ಪಿಸಿರುವುದು ಅಖಿಲಭಾರತ ಜನವಾದಿ ಮಹಿಳಾ ಸಂಘಟನೆಯ(AIDWA) ಕರ್ನಾಟಕ ರಾಜ್ಯ ಘಟಕ.

- ವಿಶ್ವ ಕುಂದಾಪುರ

ನೈಜ ವಿಶಿಷ್ಟತೆ ಬಿಚ್ಚಿಕೊಂಡ ಸಾಂಸ್ಕೃತಿಕ ಉತ್ಸವ

ಪೋರಂನ ನಿಜವಾದ ವಿಶಿಷ್ಟತೆ ಈ ಎಲ್ಲಾ ಆರು ದಿನಗಳಲ್ಲಿ ಬಿಚ್ಚಿಕೊಂಡ ಸಾಂಸ್ಕೃತಿಕ ಉತ್ಸವದಲ್ಲಿ. ಸೆಮಿನಾರು, ಸಮ್ಮೇಳನ ಈ ಉತ್ಸವದಲ್ಲೇ ಹೆಚ್ಚಿನ ಸಂವಾದ, ಅರ್ಥೈಸುವಿಕೆ ನಡೆಯಿತು. ಮಧ್ಯಾಹ್ನ 3 ರಿಂದ 9 ರವರೆಗೆ ನಾಲ್ಕೈದು ತಾಣಗಳಲ್ಲಿ ಹಾಡು, ನೃತ್ಯ, ಬೀದಿ ನಾಟಕ, ನೃತ್ಯ-ನಾಟಕಗಳು ನಡೆಯುತ್ತಿದ್ದವು. ಹೆಚ್ಚಿನವರು ಭಾರತದ ಭಾಷೆಗಳಲ್ಲಿ ಇದ್ದವು. ಆದರೆ ಅಲ್ಲೊಂದು ಇಲ್ಲೊಂದು ನಮ್ಮ ನೆರೆ ಹೊರೆಯ ಬಾಂಗ್ಲಾದೇಶ, ಪಾಕಿಸ್ತಾನ, ನೇಪಾಳದ ಕಲಾವಿದರು ಭಾಗವಹಿಸಿದ್ದರು. ಒಂದು ಸಂಜೆ 'ಏಶ್ಯಾದ ಲಯ' ಎಂಬ - ಏಶ್ಯಾದ ಹಲವು ಕವಿಗಳ ಕವಿಗೋಷ್ಠಿ, ಹಾಡುಗಳ ಕಾರ್ಯಕ್ರಮ ಇತ್ತು. ಏಶ್ಯಾದ ಸಾಂಸ್ಕೃತಿಕ ವೈವಿಧ್ಯತೆ ಕಾಣಲು ಸಿಕ್ಕಿತು. ಆಂಧ್ರಾದ ಪ್ರಜಾನಾಟ್ಯ ಮಂಡಳಿ ಅತ್ಯಂತ ಹೆಚ್ಚು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿತು. ಹೆಚ್ಚು ಕಡಿಮೆ ಆಂಧ್ರದ ಜಾನಪದ ರೂಪಗಳೆಲ್ಲವನ್ನು ಪ್ರಜಾನಾಟ್ಯ ಮಂಡಳಿ ಪೋರಂನಲ್ಲಿ ಪ್ರದರ್ಶಿಸಿತು. ಪೊಲಿ ಕೆರ್, ಸುದ್ದುಲು, ಪದ್ಯ ನಾಟಕಂ, ಭೂ ಭಾಗವತಂ, ಸವಾರಾ ನೃತ್ಯ, ಪಿಟ್ಟಾಲ ದೂರ. ಇವರಲ್ಲದೆ ಪ್ರಜಾ ನಾಟ್ಯ ಮಂಡಳಿ, ಅಸ್ಮಿತಾ ರೂಪಾಂತರ, ಅಣು ಗೋರಯ ಮುಂತಾದ ಹಲವು ಗುಂಪುಗಳು ಹಿಂದಿ, ತಮಿಳು, ಒರಿಯಾ ಭಾಷೆಗಳಲ್ಲಿ ಕಾರ್ಯಕ್ರಮ ನೀಡಿದವು. ಇಂದಿರಾ ಪ್ರಿಯದರ್ಶಿನಿ ಸಭಾಂಗಣದಲ್ಲಿ ಪೋಸೀಡಿಯಂ ನಾಟಕಗಳು ಇದ್ದವು ಪ್ರತಿದಿನ ಎರಡರಂತೆ. ಪ್ರಸಿದ್ಧ ಹಿಂದೀ ನಾಟಕಕಾರ ಹಬೀಬ್ ತನ್ವೀರ್ ಅವರ **'ಜಹರೀಲಿ ಹವಾ'** (ಭೋಪಾಲ ಗ್ಯಾಸ್ ದುರಂತದ ಮೇಲಿನ ನಾಟಕ), **ಕೋರ್ಟ್ ಮಾರ್ಶಲ್** ಬಹಳ ಜನಪ್ರಿಯವಾದವು).



'ವೀರ ತೆಲಂಗಾಣ' ಬೀದಿನಾಟಕ

ಇದಲ್ಲದೆ ಮಧ್ಯಾಹ್ನ 2 ರಿಂದ 10 ಗಂಟೆಯವರೆಗೆ ದಿನಕ್ಕೆ 4-5 ರಂತೆ **ಸಾಕ್ಷ್ಯ ಚಿತ್ರಗಳು** ಪ್ರದರ್ಶಿತವಾದವು. ಸಾಕ್ಷ್ಯ ಚಿತ್ರಗಳು ಫೋರಂ ಚರ್ಚಿಸಲು ಪ್ರಯತ್ನಿಸಿದ ಎಲ್ಲಾ ವಿಷಯಗಳ ಮೇಲೆ ಇದ್ದವು. ಸಾಕ್ಷ್ಯ ಚಿತ್ರಗಳ ನಿರ್ದಿಷ್ಟ ಜನರ - ಆತಂಕದ ವಿಷಯಗಳ ಬಗ್ಗೆ ಹೆಚ್ಚಿನ ಬೆಳಕು ಚೆಲ್ಲಿದವು. ಇನ್ನೂ ಕೆಲವು ಜನತಾ ಚಳುವಳಿಗೆ ಹಿಡಿದ ಕನ್ನಡಿಗಳಾಗಿದ್ದವು. **'ಕೆಲಸ ನಡೀತಾ ಇದೆ'** (ಗುಜರಾತ್ ಫ್ಯಾಸಿಸ್ಟ್ ಹಿಂಸಾಚಾರದ ಮೇಲಿನ ಚಿತ್ರ), ಅಚ್ಯುತ್ ಪಟವರ್ಧನ್‌ರವರ ಹಲವು ಚಿತ್ರಗಳು, **ಅಮೆರಿಕನ್ ಡ್ರೀಮ್, ತೆಲಂಗಾಣ ಸಶಸ್ತ್ರ ಹೋರಾಟ, ಆಫ್ಟರ್ ಶಾಕ್ಸ್**(ಗುಜರಾತ್ ಭೂಕಂಪದ ನಂತರದ ಕಥೆ), **ಅಸ್ಪೃಶ್ಯದೇಶ, ಗೆರಾಲ್ಡೊ ಕೆಲಸ ಹೇಗೆ ಕಳೆದು ಕೊಂಡ'** ಇತ್ಯಾದಿ ಗಮನ ಸೆಳೆದವು. ಸಾರಥಿ ಸ್ಟುಡಿಯೋ ಮತ್ತು ರವೀಂದ್ರ ಭಾರತಿ ಮಿನಿ ಥಿಯೇಟರ್ ಭಾರತೀಯ, ಅಂತರ್ರಾಷ್ಟ್ರೀಯ ಖ್ಯಾತಿ ದೊಡ್ಡ ಫಿಲಂಗಳು ಪ್ರದರ್ಶಿತವಾದವು. ಪ್ರತಿದಿನ ಆರರಂತೆ. ಅದೂ 2 ರಿಂದ 10 ಗಂಟೆಯವರೆಗೆ. ಇವಿಷ್ಟು ಸುಗ್ಗಿ ಸಾಲದೆಂಬಂತೆ, ನಿಂತಲ್ಲೇ ಸಾಮಾನ್ಯ ಪ್ರತಿನಿಧಿಗಳು ಡೋಲು, ತಮಟೆ ಬಡಿದು ಸ್ವಯಂಸ್ಫೂರ್ತಿಯಾಗಿ ಕುಣಿದು ಹಾಡುತ್ತಿದ್ದರು. ನಿಜಾಂ ಕಾಲೇಜು ಸುತ್ತಮುತ್ತ ಸತತವಾಗಿ ಉದ್ಘಾಟನಾ ಸಮಾರಂಭದಲ್ಲಿ 200 ಡೋಲುಗಳ ಬಡಿತವಾಗಿ ಆರಂಭವಾದ ತಾಳ, ಹಾಡು ಕೊನೆ ದಿನದವರೆಗೂ ಪ್ರತಿ ನಿಮಿಷವೂ ಮೊಳಗುತ್ತಲೇ ಇತ್ತು. ಎಲ್ಲಾದರೂ ಯಾರಾದರೂ ಉಳಿದದ್ದೆಲ್ಲ .... ಹಾಡು, ತಮ್ಮಟೆ ಬಡಿತ ಆರಂಭವಾಗುತ್ತಿತ್ತು. ಇದಲ್ಲದೆ ನಿಜಾಂ ಕಾಲೇಜಿನ ಬಯಲಿನಲ್ಲೇ ಸ್ವಯಂಸ್ಫೂರ್ತಿ ಮೆರವಣಿಗೆಗಳು ಮಾನವ ಸರಪಳಿ, ಘೋಷಣೆ ಕೂಗುವುದು ನಡೆಯುತ್ತಲೇ ಇತ್ತು. ಆದ್ದರಿಂದ ಸುಗ್ಗಿ, ಸಂಭ್ರಮದ ವಾತಾವರಣವಿತ್ತು. 'ಇನ್ನೊಂದು ಜಗತ್ತು' ಇಲ್ಲಿ ಆಗಲೇ ಇದೆಯೋ ಏನೋ ಎಂಬ ಸಂಭ್ರಮ!



ಸಮ್ಮೇಳನದಲ್ಲೇ 'ಕೋರ್ಟ್ ಮಾರ್ಶಲ್' ನಾಟಕದ ಒಂದು ಭಾಗ - ಸಮ್ಮೇಳನಗಳು ಭಾಷಣಗಳ

PRB DECR 319-79/79 AIKYARANGA WEEKLY Reg.No.17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹವಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH